ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 7 ಶನಿವಾರ 2025

ಸಂಪುಟ: 46 | ಸಂಚಿಕೆ: 52 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬೆಂಗಳೂರು ಕಾಲ್ತುಳಿತ ದುರಂತ ಪ್ರಕರಣ

ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ಸೇರಿ ನಾಲ್ವರ ಬಂಧನ

ಬಂಧಿತ ನಿಖಿಲ್ ಸೋಸಲೆ ಕೊಹ್ಲಿ ಆಪ್ತ; ಎಲ್ಲರೂ ನ್ಯಾಯಾಂಗ ಬಂಧನಕ್ಕೆ



ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ.

ಬೆಂಗಳೂರು, ಜೂ.6– ಚಿನ್ನಸ್ವಾಮಿ ಸ್ಟೇಡಿಯಂ ಬಳಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತದಿಂದ 11 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದು, ನ್ಯಾಯಾಲಯ ಅವರೆಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ.

ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ಹಾಗೂ ವಿರಾಟ್ ಕೊಹ್ಲಿ ಆಪ್ತನೂ ಆದ ನಿಖಿಲ್ ಸೋಸಲೆ, ಡಿಎನ್‌ಎ ಮ್ಯಾನೇಜ್‌ಮೆಂಟ್ ಸಿಬ್ಬಂದಿ ಸುನೀಲ್ ಮ್ಯಾಥ್ಯೂ, ಕಿರಣ್ ಮತ್ತು ಸುಮಂತ್ ಬಂಧಿತರಾಗಿದ್ದಾರೆ. ಬೆಂಗಳೂರಿನಿಂದ ಇವರು ಮುಂಬೈಗೆ ತೆರಳಲು ಕೆಂಪೇಗೌಡ ಏರ್ ಪೋರ್ಟ್‌ಗೆ ಹೋಗಿದ್ದ ವೇಳೆ ಕಳೆದ ರಾತ್ರಿ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಮತ್ತು ಸಿಸಿಬಿ ಜಂಟಿ ಕಾರ್ಯಾಚರಣೆಯಲ್ಲಿ ಮೂವರು ಆಯೋಜಕರು ಸೇರಿ ನಾಲ್ವರನ್ನು ಬಂಧಿಸಿದ್ದಾರೆ.

ಇಂದು ಸಂಜೆ ಇವರೆಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು, ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಬಿಟ್ಟು ಬಂದಿದ್ದಾರೆ.

ಬೆಂಗಳೂರಿನ ವಿಧಾನಸೌಧದಿಂದ ಚಿನ್ನಸ್ವಾಮಿ ಸ್ಟೇಡಿಯಂವರೆಗೂ ವಿಕ್ಟರಿ ಪೆರೇಡ್ ನಡೆಸಲು ಪೊಲೀಸರು ಅನುಮತಿ ನಿರಾಕರಿಸಿದ ನಂತರವೂ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿ ನಂತರ ಡಿಲೀಟ್ ಮಾಡಿರುವುದು. ಸ್ಟೇಡಿಯಂನಲ್ಲಿ ಸೆಲೆಬ್ರೇಷನ್‌ಗೆ ಉಚಿತ ಟಿಕೆಟ್ ಎಂದು ಘೋಷಿಸಿದ್ದು, ಗೇಟ್ 9 ಮತ್ತು ▸ 6ನೇ ಪುಟಕ್ಕೆ

ಹೈಕೋರ್ಟ್ ಮೊರೆ ಹೋದ ನಿಖಿಲ್ ಸೋಸಲೆ ಪತ್ನಿ

ಬೆಂಗಳೂರು, ಜೂ.6– ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ಆರ್‌ಸಿಬಿಯ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಪತ್ನಿ ಮಾಳವಿಕಾ ನಾಯ್ಕ್ ಸರ್ಕಾರದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ನೀಡಿದ್ದ ಹೇಳಿಕೆ ಆಧಾರವಾಗಿಸಿ ಮಾಳವಿಕಾ ನಾಯ್ಕ್ ರಿಟ್ ಅರ್ಜಿ ಸಲ್ಲಿಸಿ ಸರ್ಕಾರದ ವೈಫಲ್ಯದಿಂದ ಕಾಲ್ತುಳಿತ ಸಂಭವಿಸಿದೆ. ನನ್ನ ಪತಿ ಯಾವುದೇ ತಪ್ಪು ಮಾಡಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ರಿಟ್ ಅರ್ಜಿಯಲ್ಲಿ ಏನಿದೆ: 2 ವರ್ಷದ ಮಗುವಿನೊಂದಿಗೆ ನಾವು ಪ್ರಯಾಣಿಸುತ್ತಿದ್ದಾಗ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಸಿಎಂ ಸಿದ್ದರಾಮಯ್ಯನವರ ಆದೇಶದ ಅನ್ವಯ ಪತಿಯನ್ನು ಬಂಧನ ಮಾಡಲಾಗಿದೆ. ಪೊಲೀಸರು ಪ್ರಾಥಮಿಕ ವಿಚಾರಣೆ ನಡೆಸುವ ಮೊದಲೇ ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಮಾತ್ರ ▸ 6ನೇ ಪುಟಕ್ಕೆ

ಕೆಎಸ್‌ಸಿಎ ಅಧಿಕಾರಿಗಳಿಗೆ ಬಿಗ್ ರಿಲೀಫ್

ಬೆಂಗಳೂರು, ಜೂ.6– ಚಿನ್ನಸ್ವಾಮಿ ಸ್ಟೇಡಿಯಂ ಹೊರಗೆ ಸಂಭವಿಸಿದ ಕಾಲ್ತುಳಿತ ಪ್ರಕರಣ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದು ಕೋರಿ ಕೆಎಸ್‌ಸಿಎ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್ ಷರತ್ತುಬದ್ಧ ರಿಲೀಫ್ ನೀಡಿದೆ. ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಮತ್ತು ಇತರ ಕೆಲವು ಪದಾಧಿಕಾರಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸರ್ಕಾರವು ದುರಂತವನ್ನು ತಮ್ಮ ತಲೆಗೆ ಕಟ್ಟಲು ಯತ್ನಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧಿಕಾರಿಗಳು ಕೋರ್ಟ್ ಗಮನಕ್ಕೆ ತಂದಿದ್ದರು.

ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ, ಕೆಎಸ್‌ಸಿಎ ಅಧಿಕಾರಿಗಳ ವಿರುದ್ಧ ಬಲವಂತದ ಕ್ರಮ ಬೇಡ. ಆದರೆ, ವಿಚಾರಣೆಗೆ ಸಹಕರಿಸುವಂತೆ ಅರ್ಜಿದಾರರಿಗೆ ಷರತ್ತು ವಿಧಿಸಿದೆ. ಈ ಮೂಲಕ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಕಾರ್ಯದರ್ಶಿ ಎ.ಶಂಕರ್, ಖಜಾಂಚಿ ಇ.ಎಸ್.ಜೈರಾಮ್ ಅವರಿಗೆ ರಿಲೀಫ್ ಸಿಕ್ಕಿದೆ.

ಕಾಂಗ್ರೆಸ್ ವರಿಷ್ಠರಿಗೆ ಮಾನ–ಮರ್ಯಾದೆ ಇದ್ದರೆ ಸಿಎಂ, ಡಿಸಿಎಂ ಕಿತ್ತಾಕಲಿ...

- ಕೇಂದ್ರ ಸಚಿವ ಕುಮಾರಸ್ವಾಮಿ ಆಗ್ರಹ
- ಬಿಜೆಪಿ ನಾಯಕರೊಂದಿಗೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ವಾಗ್ದಾಳಿ
- ನಾಡಿನ ಅಭಿವೃದ್ಧಿ ಮರೆತು ಈ ಇಬ್ಬರೂ ಕೇವಲ ವ್ಯಕ್ತಿ ಪ್ರತಿಷ್ಠೆ ಮೆರೆಯುತ್ತಿದ್ದಾರೆ
- ಒಂದೆಡೆ ಕ್ರೀಡಾಭಿಮಾನಿಗಳು ಕಾಲ್ತುಳಿತದಲ್ಲಿ ನರಳುತ್ತಿದ್ದರೆ ಸಿಎಂ ಸಿದ್ದರಾಮಯ್ಯ ಮೊಮ್ಮಗನೊಂದಿಗೆ ಜನಾರ್ಧನ ಹೋಟೆಲ್‌ನಲ್ಲಿ ದೋಸೆ ತಿನ್ನುತ್ತಿದ್ದರು!

ಬೆಂಗಳೂರು, ಜೂ. 6(ಕೆಎಂಶಿ)– ಸ್ವಪ್ರತಿಷ್ಠೆಗಾಗಿ 11 ಮಂದಿ ಕ್ರೀಡಾಭಿಮಾನಿಗಳ ಬಲಿ ತೆಗೆದುಕೊಂಡು ಕೆಟ್ಟ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕಿತ್ತೊಗೆದು ಹೊಸಬರನ್ನು ನೇಮಕ ಮಾಡಿ ಎಂದು ಕಾಂಗ್ರೆಸ್ ವರಿಷ್ಠರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಆಗ್ರಹಿಸಿದ್ದಾರೆ.

ಮಿತ್ರ ಪಕ್ಷ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರೊಂದಿಗಿನ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ವರಿಷ್ಠರಿಗೆ ಮಾನ–ಮರ್ಯಾದೆ ಎಂಬುದಿದ್ದರೆ ಮೊದಲು ಈ ಇಬ್ಬರನ್ನು ಬದಲಾವಣೆ ಮಾಡಲಿ ಎಂದರು. ಕರ್ನಾಟಕ ಚಿನ್ನದಂತಹ ಸುಭಿಕ್ಷ ರಾಜ್ಯ. ಇಂತಹ ನಾಡಿನಲ್ಲಿ ಯಾವುದೇ ಅಭಿವೃದ್ಧಿ ಕೈಗೊಳ್ಳದೆ, ಕೇವಲ ವ್ಯಕ್ತಿ ಪ್ರತಿಷ್ಠೆ ಬೆಳೆಸಿಕೊಳ್ಳುತ್ತಿರುವ ಇವರಿಂದ ನಿಮ್ಮ ಪಕ್ಷಕ್ಕೆ ಕಪ್ಪು ಚುಕ್ಕೆ ಅಂಟಿಕೊಳ್ಳಲಿದೆ.



ಪತ್ರಿಕಾಗೋಷ್ಠಿಯಲ್ಲಿ ಕುಮಾರಸ್ವಾಮಿ, ಅಶೋಕ್, ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಇದ್ದಾರೆ.

ಬೆಂಗಳೂರಿನಲ್ಲಿ ಸಂಭವಿಸಿದ ಮಹಾ ದುರಂತದ ನಡುವೆಯೂ ಇವರನ್ನು ಯಾವ ಕಾರಣಕ್ಕೆ ಮುಂದುವರೆಸಿದ್ದೀರಿ. ಇವರುಗಳಿಗೆ ನೋಟಿಸ್ ನೀಡಿ ಉತ್ತರ ಪಡೆಯುವ ತಾಕತ್ತು ನಿಮಗೆ ಇಲ್ಲವೆ ಎಂದು ಹರಿಹಾಯ್ದರು. ಕ್ರೀಡಾಭಿಮಾನಿಗಳು ಕಾಲ್ತುಳಿತಕ್ಕೆ ಒಳಗಾಗಿ ಸಾವು–ನೋವಿನಿಂದ ನರಳುತ್ತಿದ್ದಾಗ ನಿಮ್ಮ ▸ 6ನೇ ಪುಟಕ್ಕೆ

ಪೊಲೀಸ್ ಅಧಿಕಾರಿಗಳ ಹರಕೆಯ ಕುರಿ ಮಾಡಿದ್ರು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆ ವೇಳೆಯ ಕಾಲ್ತುಳಿತದಿಂದ ಸಂಭವಿಸಿದ 11 ಮಂದಿ ಸಾವಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ದುರಂತಕ್ಕೆ ಸಂಬಂಧಿಸಿದಂತೆ ಎಫ್‌ಐಆರ್‌ನಲ್ಲಿ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಡಿಎನ್‌ಎ ಸಂಸ್ಥೆಗಳನ್ನು ಆರೋಪಿಗಳಾಗಿ ಹೆಸರಿಸಿದ್ದಾರೆ. ಆದರೆ, ನಿಜ ಸಂಗತಿಯೆಂದರೆ, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿ ನಂಬರ್ 1, ಉಪಮುಖ್ಯಮಂತ್ರಿ ▸ 6ನೇ ಪುಟಕ್ಕೆ

ಹಾಸನ ಮಿತ್ರ

ಕ್ವಾರಿಯಲ್ಲಿ ಸ್ಫೋಟ: ಕಾರ್ಮಿಕ ಸಾವು

ನಾಲ್ವರಿಗೆ ಗಾಯ, ಪ್ರಕರಣ ಮುಚ್ಚಿಟ್ಟಿದ್ದ ಮಾಲೀಕ



ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಭೇಟಿ ನೀಡಿರುವುದು.

ಹಾಸನ, ಜೂ.6–ಕಲ್ಲು ಕ್ವಾರಿಯಲ್ಲಿ ಸ್ಫೋಟ ಸಂಭವಿಸಿ ಓರ್ವ ಕಾರ್ಮಿಕ ಮೃತಪಟ್ಟು, ನಾಲ್ವರು ಗಾಯಗೊಂಡ ಘಟನೆ ತಾಲೂಕಿನ ಧ್ರುವನಗರಿ ಗ್ರಾಮದ ಬಳಿ ಇರುವ ನವಶ್ರೀ ಮಿನರಲ್ಸ್‌ಗೆ ಸೇರಿದ ಗ್ರೀನ್ ಗ್ರಾನೈಟ್ ಕ್ವಾರಿಯಲ್ಲಿ ಗುರುವಾರ ಸಂಭವಿಸಿದೆ.



ಮೃತ ಕಾರ್ಮಿಕ ಮಣಿ

ಈ ದುರ್ಘಟನೆಯಲ್ಲಿ ಮಣಿ ಎಂಬ ಕಾರ್ಮಿಕ ಸಾವನ್ನಪ್ಪಿ, ನಾಲ್ವರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುರುವಾರ ಮಧ್ಯಾಹ್ನ 12 ಗಂಟೆಗೆ ಘಟನೆ ಸಂಭವಿಸಿದ್ದು, ನಾಲ್ವರು ಕಾರ್ಮಿಕರನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ತೀವ್ರವಾಗಿ ಗಾಯಗೊಂಡಿದ್ದ ಮಣಿ ಎಂಬ ಕಾರ್ಮಿಕನನ್ನು ಬೆಂಗಳೂರಿಗೆ ರವಾನಿಸುವ ಮಾರ್ಗ ಮಧ್ಯೆ ಆತ ಮೃತಪಟ್ಟಿದ್ದರೂ, ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ದೊರೆತದ್ದು ರಾತ್ರಿ 10.30ರ ಸುಮಾರಿನಲ್ಲಿ.

ವಿಷಯ ತಿಳಿಯುತ್ತಿದ್ದಂತೆಯೇ ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಜಿಲ್ಲಾ ಎಸ್ಪಿ ಮಹಮ್ಮದ್ ಸುಜೀತಾ, ಉಪ ವಿಭಾಗಾಧಿಕಾರಿ ಮಾರುತಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ ಶ್ರೀನಿವಾಸ್ ಅವರು ಗುರುವಾರ ರಾತ್ರಿಯೇ ಕ್ವಾರಿಗೆ ಭೇಟಿ ನೀಡಿ, ಅಲ್ಲಿದ್ದ ಕಾರ್ಮಿಕರಿಂದ ಮಾಹಿತಿ ಪಡೆದರು. ಕ್ವಾರಿ ಮಾಲೀಕ ದೇವರಾಜ್‌ನನ್ನು ಸ್ಥಳಕ್ಕೆ ಕರೆಸಿ ವಿಚಾರಣೆ ನಡೆಸಿದ ವೇಳೆ ಆತ ಕಲ್ಲನ್ನು ಬಿಚ್ಚುವಾಗ ಮೇಲಿಂದ ಬಿದ್ದು ನಾಲ್ವರು ಕಾರ್ಮಿಕರು ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ಸೇರಿಸಿದ್ದೇವೆ ಎಂದರು.

ಇನ್ನೊಬ್ಬ ಕಾರ್ಮಿಕನ ಪರಿಸ್ಥಿತಿ ಹೇಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಶ್ನಿಸಿದಾಗ, ವೈದ್ಯರು ಆತನನ್ನು 24 ಗಂಟೆ ನಿರೀಕ್ಷಣೆಯಲ್ಲಿ ಇಟ್ಟಿರುವುದಾಗಿ ಹೇಳಿದ್ದಾರೆ ಎಂದು ದೇವರಾಜ್ ಹೇಳುತ್ತಿದ್ದಂತೆಯೇ ಗರಂ ಆದ ಜಿಲ್ಲಾಧಿಕಾರಿಗಳು ಘಟನೆ ಬಗ್ಗೆ ಯಾಕೆ ಪೊಲೀಸರಿಗಾಗಲೀ, ಜಿಲ್ಲಾಡಳಿತಕ್ಕಾಗಲೀ ಮಾಹಿತಿ ನೀಡಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ನೀವು ಉದ್ಯಮಿಗಳಲ್ಲವೇ? ಲಾಭವನ್ನಷ್ಟೇ ನೋಡುತ್ತೀರಿ. ಜನರ ಜೀವಕ್ಕೆ ಎಲ್ಲಿ ಬೆಲೆ ಕೊಡುತ್ತೀರಿ ಎಂದು ಕಿಡಿಕಾರಿದ್ದಲ್ಲದೇ ಇವರ ವಿರುದ್ಧ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ಸೂಚನೆ ನೀಡಿದರು.

ಈ ಸಂಬಂಧ ಶಾಂತಿಗ್ರಾಮ ಠಾಣೆಯಲ್ಲಿ ಸ್ಫೋಟಕ ಕಾಯ್ದೆ ಸೇರಿದಂತೆ ಕೆಲ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದ್ದು, ಕ್ವಾರಿ ಮಾಲೀಕನ ಪುತ್ರ ಅರ್ಜುನ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಶಾಂತಿಗ್ರಾಮ ಠಾಣೆಯ ಇನ್ಸ್‌ಪೆಕ್ಟರ್ ಭಾನು ತಿಳಿಸಿದ್ದಾರೆ.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವನದುರ್ಗಾ ವೃಕ್ಷಶಾಂತಿ ಮಹಾಯಜ್ಞ; ಸಹಸ್ರ ಚಂಡಿಯಾಗ ಆರಂಭ

● ಅಪಾರ ಸಂಖ್ಯೆಯ ಭಕ್ತರಿಂದ ಪ್ರಾರ್ಥನೆ ● ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಭಾಗಿ

ಮೈಸೂರು, ಜೂ.6(ಎಂಟಿವೈ)– ಲೋಕ ಕಲ್ಯಾಣಾರ್ಥ ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ಶುಕ್ರವಾರದಿಂದ 11 ಹೋಮ ಕುಂಡಗಳಲ್ಲಿ ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಹಾಗೂ ಸಹಸ್ರ ಚಂಡಿಯಾಗ ಆರಂಭವಾಯಿತು.

ಅವಧೂತ ದತ್ತಪೀಠದ ಆವರಣದಲ್ಲಿ ಜೂ.15ರವರೆಗೆ ನಡೆಯಲಿರುವ ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಹಾಗೂ ಸಹಸ್ರ ಚಂಡಿಯಾಗದ ಮೊದಲ ದಿನವಾದ ಶುಕ್ರವಾರ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು, ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಬೆಳಗ್ಗೆ 7 ಗಂಟೆಗೆ 11 ಹೋಮ ಕುಂಡಗಳಲ್ಲಿ ಆರಂಭವಾದ ಸಹಸ್ರ ಚಂಡಿಯಾಗದಲ್ಲಿ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಭಕ್ತರು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡರು. ಚಂಡಿಯಾಗದೊಂದಿಗೆ ರುದ್ರ ಹೋಮ ನೆರವೇರಿಸಲಾಯಿತು. ನಂತರ ಭಕ್ತರಿಗೆ ಸೌಂದರ್ಯ ಲಹರಿ ಮತ್ತು ಲಲಿತಾ ಸಹಸ್ರನಾಮ ಜರುಗಿತು.

10 ದಿನಗಳ ಕಾಲ ನಡೆಯುವ ಚಂಡಿಯಾಗದಿಂದಾಗಿ ಅವಧೂತ ದತ್ತಪೀಠವನ್ನು ತಳಿರು ತೋರಣದಿಂದ ಅಲಂಕರಿಸಲಾಗಿದ್ದು, ಬೆಳಗಿನಿಂದ ಸಂಜೆವರೆಗೂ ನಿರಂತರವಾಗಿ ವಿವಿಧ ಧಾರ್ಮಿಕ ಕೈಂಕರ್ಯ, ಪೂಜೆ, ಹೋಮ ಜರುಗಲಿದೆ. ಅಲ್ಲದೆ, ಭಕ್ತರಿಗೆ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಿರುವುದರಿಂದ ದತ್ತಪೀಠದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಈ ಸಂದರ್ಭದಲ್ಲಿ ಅವಧೂತ ದತ್ತ ಪೀಠದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.





ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ಶುಕ್ರವಾರ 11 ಹೋಮ ಕುಂಡಗಳಲ್ಲಿ ನಡೆದ ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ ಹಾಗೂ ಸಹಸ್ರ ಚಂಡಿಯಾಗದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪಾಲ್ಗೊಂಡಿದ್ದರು. ಬಲಚಿತ್ರದಲ್ಲಿ ಚಂಡಿಯಾಗದಲ್ಲಿ ಪಾಲ್ಗೊಂಡಿರುವ ಭಕ್ತರ ಸಮೂಹವನ್ನು ಕಾಣಬಹುದು.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಭಾಗಿ: ದತ್ತಪೀಠದಲ್ಲಿ ಆರಂಭವಾದ ಚಂಡಿಯಾಗದಲ್ಲಿ ಇಂದು ಮಧ್ಯಾಹ್ನ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪಾಲ್ಗೊಂಡು, ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಸಮ್ಮುಖದಲ್ಲಿ ಹೋಮ ಕುಂಡಕ್ಕೆ ತುಪ್ಪ ಅರ್ಪಿಸಿದರು.

ಬಳಿಕ ಮಾತನಾಡಿದ ಸಚಿವರು, ಭಾರತ ಎಲ್ಲಾ ಆರ್ಥಿಕ ಕ್ಷೇತ್ರದಲ್ಲಿ ಜಗತ್ತಿನಲ್ಲಿ ನಂಬರ್ ಒನ್ ದೇಶ ಆಗಬೇಕೆಂಬ ಬಯಕೆ ನಮ್ಮದಾಗಿದೆ. ಈಗಾಗಲೇ ನಮ್ಮ ದೇಶ ವಿವಿಧ ಕ್ಷೇತ್ರಗಳಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಆರ್ಥಿಕ ಕ್ಷೇತ್ರದಲ್ಲೂ 4ನೆ ಸ್ಥಾನ ಹೊಂದಿದ್ದೇವೆ. ಆದರೆ, ನಂಬರ್ ಒನ್ ಸ್ಥಾನಕ್ಕೆ ಬರಬೇಕು ಎಂಬ ಬಯಕೆ ನಮ್ಮದಾಗಿದೆ ಎಂದರು.

ಜಗತ್ತಿನಲ್ಲಿ ಶಾಂತಿ, ನೆಮ್ಮದಿ ಮತ್ತು ಸೃಷ್ಟಿಯ ಜೊತೆಗೆ ಸಮತೋಲನ ಇರಬೇಕು. ಹಾಗಾಗಿ ದೇಶ ಬಲಾಢ್ಯ ಆಗಬೇಕು. ಗಣಪತಿ ಶ್ರೀಗಳು ನಡೆಸುತ್ತಿರುವ ಸಹಸ್ರ ಚಂಡಿಯಾಗ ಮತ್ತು ವನದುರ್ಗಾ ವೃಕ್ಷ ಶಾಂತಿ ಮಹಾ ಯಜ್ಞವನ್ನು ನಮ್ಮೆಲ್ಲರ ಮನಸ್ಸಿಗೆ ನಾಟುವಂತೆ, ಭಕ್ತಿಯ ಭಾವ ವೃದ್ಧಿಯಾಗುವಂತೆ ಮಾಡುತ್ತಿದ್ದಾರೆ. ಈ ಕಾರ್ಯಕ್ರಮದಿಂದ ಆಧ್ಯಾತ್ಮಿಕ ಮನಸ್ಸು ಉದ್ದೀಪನವಾಗುತ್ತದೆ. ಸಾವಿರಾರು ಪೂಜನೀಯ ವೃಕ್ಷಗಳಿಗೆ ಪೂಜೆ ಮಾಡಲಾಗುತ್ತಿದೆ. ಜಗತ್ತಿನಲ್ಲಿ ಅರಣ್ಯ, ಗಿಡ–ಮರಗಳ ಪ್ರಮಾಣ ಕಡಿಮೆಯಾಗುತ್ತಿದೆ. ಆದರೆ ನಮ್ಮ ದೇಶದಲ್ಲಿ ಕಳೆದ 11 ವರ್ಷಗಳಲ್ಲಿ ಶೇ.17ರಷ್ಟು ಅರಣ್ಯ ಪ್ರದೇಶ ವೃದ್ಧಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಮುಖಂಡ ಜೋಗಿ ಮಂಜು, ಕಾಶಿ ವಿಶ್ವನಾಥ ದೇವಾಲಯದ ಸಿಇಒ ವಿಶ್ವಭೂಷಣ್ ಮಿಶ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಆಯುರ್ವೇದ ಚಿಕಿತ್ಸಾ ಕೇಂದ್ರದಲ್ಲಿ ಫಿಸಿಯೋ, ಎಲೆಕ್ಟ್ರೋ ಥೆರಪಿ ಸೇವೆ ಆರಂಭ



ಮೈಸೂರಿನ ಸರ್ಕಾರಿ ಆಯುರ್ವೇದ ಚಿಕಿತ್ಸಾ ಕೇಂದ್ರದಲ್ಲಿ ಶುಕ್ರವಾರ ಶಾಸಕ ಕೆ.ಹರೀಶ್‌ಗೌಡ ಅವರು ನೂತನ ಫಿಸಿಯೋ ಎಲೆಕ್ಟ್ರೋ ಥೆರಪಿ ಸೌಲಭ್ಯವನ್ನು ಉದ್ಘಾಟಿಸಿದರು.

ಮೈಸೂರು, ಜೂ.6(ಆರ್‌ಕೆ)– ಮೈಸೂರಿನ ಕೆ.ಜಿ.ಕೊಪ್ಪಲಿನ ಸರ್ಕಾರಿ ಆಯುರ್ವೇದ ಚಿಕಿತ್ಸಾ ಕೇಂದ್ರದಲ್ಲಿ ಫಿಸಿಯೋ, ಎಲೆಕ್ಟ್ರೋ ಥೆರಪಿ ಹಾಗೂ ಇನ್ನಿತರ ಚಿಕಿತ್ಸಾ ಸೇವಾ ಸೌಲಭ್ಯ ಆರಂಭವಾಗಿದೆ.

ಶಾಸಕ ಕೆ.ಹರೀಶ್‌ಗೌಡ ಅವರು ವಿನೂತನ ಆಯುರ್ವೇದ ಚಿಕಿತ್ಸಾ ಸೌಲಭ್ಯವನ್ನು ಇಂದು ಉದ್ಘಾಟಿಸಿದರು. ಈ ಸಂದರ್ಭ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿ ಪ್ರಚಲಿತವಾಗುತ್ತಿದ್ದು, ನಮ್ಮ ಪೂರ್ವಿಕರು ಪಡೆಯುತ್ತಿದ್ದ ಸಾಂಪ್ರದಾಯಿಕ ಚಿಕಿತ್ಸೆಗೆ ಹೋಗುತ್ತಿದ್ದಾರೆ ಎಂದರು.

ಈ ಚಿಕಿತ್ಸೆಯಿಂದ ತಕ್ಷಣ ರೋಗ ಗುಣವಾಗದಿದ್ದರೂ, ಯಾವುದೇ ದುಷ್ಪರಿಣಾಮ ಬೀರುವುದಿಲ್ಲವಾದ್ದರಿಂದ ಆಯುರ್ವೇದಕ್ಕೆ ಭಾರೀ ಬೇಡಿಕೆ ಬರುತ್ತಿದೆ. ಆದ್ದರಿಂದ ಉನ್ನತೀಕರಿಸಿದ ವಿಭಿನ್ನ ಥೆರಪಿ ಸೌಲಭ್ಯಗಳನ್ನು ಈ ಕೇಂದ್ರದಲ್ಲಿ ಆರಂಭಿಸಿದ್ದು, ಜನರು ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿದರು.

ಮಾಜಿ ಕಾರ್ಪೊರೇಟರ್ ಗೋಪಿ, ಮುಖಂಡರಾದ ಶ್ರೀನಿವಾಸ ಕುಮಾರ್, ನಂಜುಂಡಸ್ವಾಮಿ, ಸತೀಶ್, ಆಯುರ್ವೇದ ಚಿಕಿತ್ಸಾ ಕೇಂದ್ರದ ವೈದ್ಯರು, ಥೆರಪಿಸ್ಟ್‌ಗಳು ಈ ಸಂದರ್ಭ ಉಪಸ್ಥಿತರಿದ್ದರು.

ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಮೈಸೂರು, ಜೂ.6(ಎಂಟಿವೈ)– ವಿವಿಧೆಡೆ ಅರಣ್ಯ ಪ್ರದೇಶದಲ್ಲಿರುವ ಬುಡಕಟ್ಟು ಜನರ ಸ್ಥಿತಿಗತಿ ಅಭಿವೃದ್ಧಿ ಮಾಡುವುದರೊಂದಿಗೆ ಅರಣ್ಯ ಪ್ರದೇಶದ ಸಂರಕ್ಷಣೆಗೂ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಟಿ.ಯೋಗೀಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾಧಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶ್ವಪರಿಸರ ದಿನಾಚರಣೆಯಲ್ಲಿ ಗಿಡ ನೆಟ್ಟು ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಪರಿಸರ ಸಮತೋಲನ ಮಾಡುವುದಕ್ಕಾಗಿ ಅರಣ್ಯ ಸಂರಕ್ಷಣೆ ಅಗತ್ಯವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಾವಕಾಶ ಇರುವ ಕಡೆ ಗಿಡ ನೆಟ್ಟು ಪೋಷಿಸಬೇಕಾಗಿದೆ. ಜಾಗತೀಕ ತಾಪಮಾನದಲ್ಲಾಗುತ್ತಿರುವ ವ್ಯತ್ಯಯ ನಿಯಂತ್ರಣಕ್ಕೆ ಪರಿಸರ ಸಂರಕ್ಷಣೆಯೇ ಮಾರ್ಗವಾಗಿದೆ. ಇತ್ತೀಚಿನ ದಿನಗಳಲ್ಲಿ ತಾಪಮಾನದಲ್ಲಾಗುತ್ತಿರುವ ಏರುಪೇರಿನಿಂದಾಗಿ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ ಎಂದು ವಿಷಾಧಿಸಿದರು.

ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬರು ಪ್ರತಿ ವರ್ಷ ಒಂದು ಗಿಡವನ್ನಾದರೂ ನೆಡಬೇಕು. ರಾಜ್ಯದಲ್ಲಿ ಶೇ.21ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಹೆಚ್ಚು, ಹೆಚ್ಚು ಮರಗಿಡಗಳನ್ನು ನೆಟ್ಟು ಪರಿಸರವನ್ನು ಸಂರಕ್ಷಿಸಬೇಕಿದೆ. ಕಾಡು ಹೆಚ್ಚಾಗಿದ್ದಾರೆ ಪ್ರಾಣಿ ಸಂಕುಲಗಳು ಹೆಚ್ಚಾಗಿರುತ್ತವೆ. ಮಳೆ ಬೆಳೆ ಚೆನ್ನಾಗಿ ಬಂದು ರೈತರು ನೆಮ್ಮದಿಯಾಗಿರುತ್ತಾರೆ. ಪರಿಸರ ಸಂರಕ್ಷಣೆಗೆ ಸರ್ಕಾರ ಮಾತ್ರವಲ್ಲದೆ ಸಂಘ–ಸಂಸ್ಥೆಗಳು, ಮಠಗಳು ಹೆಚ್ಚಿನ ಒತ್ತು ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ ಎಂದರು.



ಮೈಸೂರಿನ ಬೋಗಾಧಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಟಿ.ಯೋಗೀಶ್ ಗಿಡ ನೆಟ್ಟರು.

ಪರಿಸರ ಸಂರಕ್ಷಣೆಯೊಂದಿಗೆ ಅರಣ್ಯ ಪ್ರದೇಶಗಳಲ್ಲಿರುವ ಬುಡಕಟ್ಟು ಸಮುದಾಯಗಳ ಏಳಿಗೆಗೂ ಗಮನ ಕೇಂದ್ರೀಕರಿಸಬೇಕು. ವನ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಬುಡಕಟ್ಟು ಸಮುದಾಯದ ಪಾತ್ರವೂ ಬಹು ಮುಖ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಬುಡಕಟ್ಟು ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಸಂಶೋಧನಾಕಾರಿ ಕೆ. ಶ್ರೀನಿವಾಸ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶಿವಕುಮಾರ್, ಡಾ.ಮೋಹನ್‌ಕುಮಾರ್, ಡಾ. ಮಂಜುನಾಥ್, ರವಿಕುಮಾರ್, ಕೃಷ್ಣಮೂರ್ತಿ, ಲೆಕ್ಕ ಪರಿಶೋಧನಾಕಾರಿ ಬಿ.ಆರ್.ಭವ್ಯ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಜೂ.6– ಮೈಸೂರು ಹೆಬ್ಬಾಳದಲ್ಲಿನ 'ಕೃಷ್ಣರಾಜಪೇಟೆ ತಾಲೂಕು ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ'ದ ವತಿಯಿಂದ ಮಂಚೇಗೌಡನಕೊಪ್ಪಲಿನಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಜೂ.8(ನಾಳೆ)ರಂದು ಬೆಳಗ್ಗೆ 8ರಿಂದ 'ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ'ವನ್ನು ಆಯೋಜಿಸಲಾಗಿದೆ.

ಶಿಬಿರದಲ್ಲಿ ಮೈಸೂರಿನ ಡಿಆರ್‌ಎಂ ಆಸ್ಪತ್ರೆಯ ತಜ್ಞ ವೈದ್ಯರು ಆರೋಗ್ಯ ತಪಾಸಣೆ ಹಾಗೂ ಮಹಾವೀರ ಕಣ್ಣಿನ ಆಸ್ಪತ್ರೆಯ ವೈದ್ಯರು ಕಣ್ಣಿನ ತಪಾಸಣೆ ನಡೆಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ಶಿಬಿರವನ್ನು ಉದ್ಘಾಟಿಸಲಿದ್ದು, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಂ.ಶಿವಣ್ಣ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಸಂಘದ ಅಧ್ಯಕ್ಷ ಕೆ.ಟಿ.ಚಂದ್ರೇಗೌಡ, ಗೌರವಾಧ್ಯಕ್ಷ ಹೆಚ್.ವಿ.ಗಣೇಶ್ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ವಾಸುದೇವಾಚಾರ್ಯರ ನಿವಾಸಕ್ಕೆ ವಯಲಿನ್ ವಾದಕ ಡಾ.ಸುಬ್ರಮಣ್ಯ, ಹಿನ್ನೆಲೆ ಗಾಯಕಿ ಕವಿತ ಕೃಷ್ಣಮೂರ್ತಿ ಭೇಟಿ

ಮನೆಯ ವಿನ್ಯಾಸ ಕಂಡು ಮೆಚ್ಚುಗೆ



ಮೈಸೂರಿನ ಅಗ್ರಹಾರದಲ್ಲಿರುವ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರ ನಿವಾಸಕ್ಕೆ ಖ್ಯಾತ ವಯಲಿನ್ ವಾದಕ, ಪದ್ಮವಿಭೂಷಣ ಡಾ.ಎಲ್.ಸುಬ್ರಮಣ್ಯಂ ಹಾಗೂ ಅವರ ಪತ್ನಿ ಖ್ಯಾತ ಹಿನ್ನೆಲೆ ಗಾಯಕಿ, ಪದ್ಮಶ್ರೀ ಕವಿತ ಕೃಷ್ಣಮೂರ್ತಿ ಗುರುವಾರ ಭೇಟಿ ನೀಡಿದ್ದರು.

ಮೈಸೂರು, ಜೂ.6(ಜಿಎ)– ಮೈಸೂರಿನ ಅಗ್ರಹಾರದಲ್ಲಿರುವ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯರ ನಿವಾಸಕ್ಕೆ ಖ್ಯಾತ ವಯಲಿನ್ ವಾದಕ ಪದ್ಮವಿಭೂಷಣ ಡಾ.ಎಲ್.ಸುಬ್ರಮಣ್ಯಂ ಹಾಗೂ ಅವರ ಪತ್ನಿ ಖ್ಯಾತ ಹಿನ್ನೆಲೆ ಗಾಯಕಿ, ಪದ್ಮಶ್ರೀ ಕವಿತ ಕೃಷ್ಣಮೂರ್ತಿ ಗುರುವಾರ ಭೇಟಿ ನೀಡಿದ್ದರು.

ದಂಪತಿಗಳು ವಾಸುದೇವಾಚಾರ್ಯರ ಮನೆಯನ್ನು ಒಂದು ಸುತ್ತು ನೋಡಿ ಮನೆಯ ವಿನ್ಯಾಸ ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಸಂಗೀತ ಪ್ರೇಮಿಗಳೊಂದಿಗೆ ಮಾತನಾಡಿ, ಫೋಟೋ ಕ್ಲಿಕ್ಕಿಸಿಕೊಂಡರು.

ಈ ವೇಳೆ ಡಾ.ಎಲ್.ಸುಬ್ರಮಣ್ಯಂ ಮಾತನಾಡಿ, ಮೈಸೂರಿನ ಬಗ್ಗೆ ಮಾತನಾಡಬೇಕಾದರೆ, ಮೊದಲು ವಾಸುದೇವಾಚಾರ್ಯರು ಮತ್ತು ಪಿಟೀಲು ವಾದಕ ಪಿಟೀಲು ಚೌಡಯ್ಯ ನೆನಪಿಗೆ ಬರುತ್ತಾರೆ. ಅವರಿಬ್ಬರು ಮೈಸೂರಿಗೆ ಸಾಕಷ್ಟು ಕೊಡುಗೆ ನೀಡಿದ್ದು, ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಅವರ ಆಶೀರ್ವಾದದೊಂದಿಗೆ ಇಂದಿಗೂ ಜೀವಿಸುತ್ತಿದ್ದೇನೆ ಎಂದರು.

ಸಂಗೀತ ಪ್ರೇಮಿಯೊಬ್ಬರು ಕರ್ನಾಟಕ ಸಂಗೀತದ ಬದಲು ಹಿಂದೂಸ್ತಾನಿ ಸಂಗೀತ ಕಲಿತುಕೊಂಡರೆ ಒಳಿತೆ ಎಂದು ಕೇಳಿದರು. ಅದಕ್ಕೆ ಉತ್ತರಿಸಿದ ಅವರು ಎಲ್ಲಾ ಪ್ರಕಾರದ ಸಂಗೀತಕ್ಕೆ ಕರ್ನಾಟಕ ಸಂಗೀತ ಮೂಲ ಬುನಾದಿಯಾಗಿದ್ದು, ಸಂಗೀತ ಕಲಿಯುವವರು ಮೊದಲು ಕರ್ನಾಟಕ ಸಂಗೀತದಿಂದ ಆರಂಭಿಸಿದರೆ ಉತ್ತಮ ಎಂದು ಸಲಹೆ ನೀಡಿದರು.

ಹೊಸ ಬೆಳಕು ತಂಡದ 50ನೇ ಸಂಚಿಕೆ ಅಂಗವಾಗಿ ನಾಳೆ ಗಾಯನ ಕಾರ್ಯಕ್ರಮ

ಮೈಸೂರು, ಜೂ.6(ಜಿಎ)–ಮೈಸೂರಿನ ಹೊಸ ಬೆಳಕು ತಂಡದ 50ನೇ ಸಂಚಿಕೆಯ ಗಾಯನ ಕಾರ್ಯಕ್ರಮದ ಅಂಗವಾಗಿ ಜೂ.8ರಂದು ಬೆಳಗ್ಗೆ 9ರಿಂದ ರಾತ್ರಿ 9ರವರೆಗೆ ನಗರದ ಪುರಭವನದಲ್ಲಿ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಂಡದ ಸಂಚಾಲಕಿ ಉಷಾ ಸುಧಾಕರ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಕನ್ನಡ, ಹಿಂದಿ ಇತರೆ ಭಾಷೆಗಳ ಚಲನಚಿತ್ರ ಗೀತೆಗಳನ್ನು ಇದುವರೆಗೆ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಹಾಡಿದ ಸುಮಾರು 50 ಮಂದಿ ಪ್ರಸ್ತುತ ಪಡಿಸಲಿದ್ದಾರೆ. 80 ಗೀತೆಗಳನ್ನು ಹಾಡಲಾಗುವುದು. 30 ಜನ ಗಾಯಕರು, 25 ಮಂದಿ ಗಾಯಕಿಯರು ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಲಕ್ಕಿಡಿಪ್‌ನಲ್ಲಿ ಆಯ್ಕೆಯಾದ ಗಾಯಕಿಯರಿಗೆ ಒಂದು ಚಿನ್ನದ ಆಭರಣ ಬಹುಮಾನವಾಗಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಯಲಕ್ಷ್ಮಿ, ರಾಧಿಕಾ, ರಮೇಶ್, ಶಿವಕುಮಾರ್, ರೂಪಶ್ರೀ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.06.2025 ಶನಿವಾರ, ಮಳೆ ನಕ್ಷತ್ರ: ರೋಹಿಣಿ, 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕಾರ್ನಿಯಲ್ ಒಪೇಸಿಟಿ ಚಿಕಿತ್ಸಾ ಶಿಬಿರ, ಬೆಳಗ್ಗೆ 9 ರಿಂದ ಗರ್ಭಾಶಯ ಮುಖದಲ್ಲಿ ಹುಣ್ಣು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ತೊಳಸಿ ಜ್ಯುವೆಲ್ಸ್ :** ಇಟಾಳಸಿ ಲಕ್ಸ್ ಫಸ್ಟ್–ಆಭರಣಗಳ ಪ್ರದರ್ಶನ, ಸ್ಥಳ: ತೊಳಸಿ ಜ್ಯುವೆಲ್ಸ್, ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಬೆಳಗ್ಗೆ 11 ರಿಂದ.

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ, ವನ ದುರ್ಗಾ ವೃಕ್ಷ ಶಾಂತಿ ಮಹಾಯಜ್ಞ, ಸಹಸ್ರ ಚಂಡೀಯಾಗ, ಲಲಿತಾ ಪೂಜೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸಾಮಾಜಿಕ ಕಾರ್ಯ ಶಿಬಿರ, ಬೆಳಗ್ಗೆ 11.30 ರಿಂದ ಪ್ರಾದೇಶಿಕ ಯೂತ್ ಕಾಂಗ್ರೆಸ್ ಅಧ್ಯಕ್ಷ ಟಿಸರಿಂಗ್ ಡೋರ್ಜಿ ಅವರಿಂದ ದಿ ಪ್ರೋಗ್ರಾಮ್ಸ್ ಫಾರ್ ಯೂತ್ ಕುರಿತು ಉಪನ್ಯಾಸ, ಸಂಜೆ 6.15 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ದೊಂಡೆನ್‌ಲಿಂಗ್ ಟಿಬೆಟಿಯನ್ ವೆಲ್‌ಫೇರ್ ಸೊಸೈಟಿ, ಒಡೆಯರ ಪಾಳ್ಯ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್ ಹಾಗೂ ಸುಜೋಕ್, ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್, ರೋಟರಿ ಭವನ, ವಿಜಯನಗರ ರೈಲ್ವೆ ಬಡಾವಣೆ, ಬೆಳಗ್ಗೆ 10.30 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಬುದ್ಧಿದಾನಂದ ಅವರಿಂದ ನಾರದ ಭಕ್ತಿಸೂತ್ರಗಳು ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ದಿವ್ಯ ದೀಪ ಚಾರಿಟಬಲ್ ಟ್ರಸ್ಟ್, ಕಲಿಯುವ ಮನೆ ಉಚಿತ ವಸತಿ ಪರ್ಯಾಯ ಶಾಲೆ :** ಸ್ಥಾಪಕ ಎಂ.ಆರ್. ಅನಂತಕುಮಾರ್ ಅವರು ಕಲಿಯುವ ಮನೆ ಬಗ್ಗೆ ರಚಿಸಿರುವ 'ಮಕ್ಕಳಿಗಾಗಿ ಶಾಲೆ; ಶಾಲೆಗಾಗಿ ಮಕ್ಕಳಲ್ಲ' ಒಂದು ಅ(ನ)ಧಿಕೃತ ಶಾಲೆಯ ಕಥೆ ಕೃತಿ ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ : ಕಲಿಯುವ ಮನೆಯ ಮಕ್ಕಳು, ಮುಖ್ಯ ಅತಿಥಿಗಳು : ದೀನಬಂಧು ಟ್ರಸ್ಟ್ ಕಾರ್ಯದರ್ಶಿ ಜಿ.ಎಸ್. ಜಯದೇವ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಸ್ಥಳ: ಕಲಿಯುವ ಮನೆ, ಕೆಂಚಲಗೂಡು ಗ್ರಾಮ, ಮಾನಂದವಾಡಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಸ್ಟೆಮ್ ಆವಿಷ್ಕಾರ್ ಪ್ರೈವೇಟ್ ಲಿಮಿಟೆಡ್ :** ಸ್ಟೆಮ್ ಫೆಸ್ಟ್–2025, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್, ಮಧ್ಯಾಹ್ನ 3ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30 ರಿಂದ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ– 883, ಕಥೆ ಹೇಳುವವರು : ಶ್ರೀಮತಿ ಅಮೃತಾ ಪಿ ನಾಯಕ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ವಿಭಾಗ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾ ವಿದ್ಯಾಲಯ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಗಾನ ನಂದನ ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ :** ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಗಾಯನೋತ್ಸವ, ಮುಖ್ಯ ಅತಿಥಿಗಳು : ಡಾ. ಎಲ್. ವೆಂಕಟೇಶ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ಬಿ.ಎನ್. ರವೀಶ್, ಡಾ. ಎಲ್. ರವಿ, ಡಾ. ಸುಶ್ರುತ್‌ಗೌಡ, ಡಾ. ರಘುರಾವ್ ವಾಜಪೇಯಿ, ಸ್ಥಳ: ನಾದಬ್ರಹ್ಮ ಸಂಗೀತಾ ಸಭಾಂಗಣ, ನಂಜು ಮಳಿಗೆ ಹತ್ತಿರ, ಸಂಜೆ 4.30ಕ್ಕೆ.

■ **ನೃತ್ಯ ವರ್ಣ ಕಲಾಸೌರಭ, ನಾಲ್ವಡಿ ಸೋಶಿಯಲ್, ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ :** ಅಭಿನಯ ತರಗತಿಗಳು, ಸ್ಥಳ: ನೃತ್ಯ ವರ್ಣ ಕಲಾಸೌರಭ, ವಿಜಯನಗರ 2ನೇ ಹಂತ, ಮಧ್ಯಾಹ್ನ 3ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ.

■ **ರಂಗವಲ್ಲಿ ತಂಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ರಂಗಕರ್ಮಿ, ನಾಟಕಕಾರರಾದ ಶ್ರೀನಿವಾಸ ಪ್ರಭು ಅವರ ರಚನೆಯ 'ಪರಮೇಶಿ ಪ್ರೇಮ ಪ್ರಸಂಗ' ಹಾಸ್ಯಮಯ ನಾಟಕ ಪ್ರದರ್ಶನ, ನಿರ್ದೇಶನ : ರವಿಪ್ರಸಾದ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

■ **ವ್ಯವಸ್ಥಾಪಕರು :** ಕೃಷಿ ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 9 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ : ಡಾ. ಕೇಶವಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಎನ್. ಹೇಮಾ ಮತ್ತು ಎಂ. ಡಿ. ಸುಮತಿ ಮೂರಾರಿ, ವ್ಯಾಖ್ಯಾನ–ಡಾ.ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು–ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿಕ್ಷಕ ಎನ್.ಎಸ್. ಸತ್ಯನಾರಾಯಣ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ್ ಹೆಗಡೆ, 8.50 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಿ. ಕೆ. ಪಟ್ಟಮಾಳ್ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಗೀತೆಗಳು, 3.30 ಮಕ್ಕಳ ಮಂಟಪ–ಸದ್ವಿದ್ಯಾ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ ಬಾಳೆ ಹೊನ್ನೂರಿನ ಬ್ರಹ್ಮರಾಕ್ಷಸ, ರಚನೆ– ಅಪರಂಜಿ ಶಿವು, ನಿರ್ದೇಶನ ಮತ್ತು ನಿರ್ಮಾಣ– ಉಮೇಶ್ ಎಸ್. ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಕುರಿ ಮೇಕೆ ಸಾಕಾಣಿಕೆ ಕುರಿತ ಸಂವಾದ ಕೆ.ಆರ್.ನಗರ ತಾಲ್ಲೂಕು, ಕಸಬಾ ಹೋಬಳಿ, ಕಾಳೇನಹಳ್ಳಿ ಹೊಸ ಕೊಪ್ಪಲು ಗ್ರಾಮದ ಕೆ.ಪಿ. ಚಂದು ಹಾಗೂ ಎ.ಸಿ. ಸುಮ. ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ರವಿಶಂಕರ್ ಭಟ್ಟ್ ತೈಲಾಂಗ್–ವೈಯೋಲಿನ್ ವಾದನ

ಪುರುಷ ಡಿಟಿಪಿ ಆಪರೇಟರ್ಸ್ ಬೇಕಾಗಿದ್ದಾರೆ
(ಪಾರ್ಟ್ ಟೈಂ । ಸಂಜೆ 6 ರಿಂದ ರಾತ್ರಿ 11ರವರೆಗೆ)

ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಅನುಭವವಿದ್ದು, ಪೇಜ್ ಮೇಕರ್ 7 ವರ್ಷನ್, ಅಡೋಬ್ ಇನ್ ಡಿಸೈನ್,ಕೋರಲ್ ಡ್ರಾ, ಫೋಟೋಶಾಪ್, ಫೋಟೋ ಸ್ಕ್ಯಾನಿಂಗ್, ಇಂಟರ್‌ನೆಟ್, ಆಕ್ರೋಬ್ಯಾಟ್ ರೀಡರ್, ಕಲರ್ ಸೆಪರೇಷನ್ ಮತ್ತು ಟೈಪಿಂಗ್ ಸ್ಪೀಡ್, ಉತ್ತಮ ಜ್ಞಾನವುಳ್ಳ ಪುರುಷ ಡಿಟಿಪಿ ಆಪರೇಟರ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ.

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಮಧ್ಯಾಹ್ನ 3 ರಿಂದ 5 ರವರೆಗೆ ನೇರ ಸಂದರ್ಶನಕ್ಕೆ ಹಾಜರಾಗಬೇಕು.

ಮೈಸೂರು ಮಿತ್ರ

15–ಸಿ, ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು–15

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ವೆಂಕಟೇಶಮೂರ್ತಿ ಆರ್.ಕೆ.
(ನಿವೃತ್ತ ಅಧೀಕ್ಷಕರು, ಶಿಕ್ಷಣ ಇಲಾಖೆ)
ನಿಧನ: 17.06.2024

ಇವರ ಪುಣ್ಯಸ್ಮರಣೆಯನ್ನು ದಿ: 07-06-2025ನೇ ಶನಿವಾರ ಮಧ್ಯಾಹ್ನ 12:00 ಘಂಟೆಗೆ ನಮ್ಮ ಸ್ವಗೃಹ # 1187, 'ಎ' ಬ್ಲಾಕ್, 3ನೇ ಮುಖ್ಯರಸ್ತೆ, ಕನಕದಾಸನಗರ, ಮೈಸೂರಲ್ಲಿ ನೆರವೇರಿಸುವುದಾಗಿ ನಿಶ್ಚಯಿಸಿರುತ್ತೇವೆ. ಆ ಪ್ರಯುಕ್ತ ತಾವೆಲ್ಲರೂ ಸಕುಟುಂಬಿಕರಾಗಿ ಆಗಮಿಸಿ, ದಿವಂಗತರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಅಪೇಕ್ಷಿಸುವ,

ದುಃಖತಪ್ತರು : ಪತ್ನಿ ಸುಮತಿ ಎಲ್, ಮಗ ಸೊಸೆ, ಮಗಳು ಅಳಿಯ ಹಾಗೂ ಬಂಧುಮಿತ್ರರು

ಭೋಜನ ಮಧ್ಯಾಹ್ನ 12:30ಕ್ಕೆ

G9 projects
Designing your Dreams

MUDA APPROVED

Pay ₹ 2,00,000/-
(Two Lakhs only)
& Own 20 x 30 Site
Rest with Installments
₹ 21,00,000
Site Value

Marketed by Vee2 Developers

8088707707
Ring Road, Uttanahalli Mysuru

ಮಹೇಂದ್ರ ಡೆವಲಪರ್ಸ್ (ರಿ)
MAHENDRA DEVELOPERS (R)

ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ವಸತಿ ನಿವೇಶನಗಳು ಮತ್ತು ಮನೆಗಳು ಮಾರಾಟಕ್ಕೆ...

- ನಾಗವಾಲ ಇಲವಾಲ ಹತ್ತಿರ
- ವಾಜಮಂಗಲ
- ದೇವಗಳ್ಳಿ ಆರ್‌ಟಿ.ನಗರ ಹತ್ತಿರ
- ಹುಣಸೂರು

ಮುಡಾ, ಹುಡಾ, ಡಿಟಿಸಿಪಿ, ಅನುಮೋದಿತ, ರೇರಾ ನೋಂದಾಯಿತ

+91 81233 87555 / +91 72593 48777
www.mahendradevelopers.in
FOLLOW US ON

SEMI COMMERCIAL & RESIDENTIAL BUILDING FOR SALE
40X60 Ground Floor First Floor Second Floor

Commercial Shop -1 No.
2 BHK House - 4 Nos. & 1 BHK House - 2 Nos.
Total Houses - 6 Nos.

Nanjumalige Circle, Chamundipuram Main Road, Hosabandikeri 1st Cross, near Mysore Palace, Heart of the City.

Call : 70265 79565

TO-LET
2.5 BHK
(First Floor)
Gokulam 1st Stage.
8904516491

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ಬೇಕಾಗಿದ್ದಾರೆ
ಫ್ಯಾಷನ್ ಜ್ಯುವೆಲರಿ ಶೋರೂಂನಲ್ಲಿ ಕೆಲಸ ಮಾಡಲು

ಸೇಲ್ಸ್ ಗರ್ಲ್ಸ್

ಕನ್ನಡ ಮತ್ತು ಇಂಗ್ಲೀಷ್ ವಾಕ್‌ಚಾತುರ್ಯ ಇರಬೇಕು. ಉತ್ತಮ ಸಂಬಳ + ಇನ್‌ಸೆಂಟಿವ್ಸ್

NPG Lucky Stones — Ashoka Road, Mysore
ಫೋನ್ : 93 42 42 42 41

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ನೆಹರು ವೃತ್ತ ಅಶೋಕ ರಸ್ತೆ, ಮೈಸೂರು-570001
ದೂ: 2520836, 2436460, 2421047, ಫ್ಯಾಕ್ಸ್ ನಂ: 0821-252083

ನಂ:ಮುಕಾನಿ:ಚುನಾವಣೆ: 1632 :2025–26 ದಿ:05.06.2025

ಪ್ರಕಟಣೆ (ಚುನಾವಣಾ ಜರೂರು)

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.. ನೆಹರು ವೃತ್ತ. ಅಶೋಕ ರಸ್ತೆ, ಮೈಸೂರು, ಬ್ಯಾಂಕಿನ 2025 ರಿಂದ 2030ರ ವರೆಗಿನ ಐದು ವರ್ಷಗಳ ಆಡಳಿತ ಮಂಡಳಿ ಚುನಾವಣೆಯ ಸಂಬಂಧ ಈಗಾಗಲೇ ಸದಸ್ಯ ಸಹಕಾರ ಸಂಘಗಳು ಭರ್ತಿ ಮಾಡಿದ ಡೆಲಿಗೇಟ್ ಫಾರಂಗಳನ್ನು ಸಲ್ಲಿಸಿದ್ದು, ಸಹಕಾರ ಸಂಘಗಳ ಕಾಯ್ದೆ 1959 13(ಡಿ) 5(ಬಿ) ರೀತ್ಯಾ ದಿ :30.04.2025ರ ಅಂತ್ಯಕ್ಕೆ ಬ್ಯಾಂಕಿನ ಕ್ಷೇತ್ರ-1 ಕ್ಷೇತ್ರ-2 ಮತ್ತು ಕ್ಷೇತ್ರ-4 ರ ಡೆಲಿಗೇಟ್/ಪ್ರತಿನಿಧಿಗಳನ್ನೊಳಗೊಂಡ ಕರಡು ಅರ್ಹ ಮತ್ತು ಅನರ್ಹ ಸಹಕಾರ ಸಂಘಗಳ ಮತದಾರರ ಪಟ್ಟಿಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಡೆಲಿಗೇಟ್/ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದರೆ ದಿನಾಂಕ:08.06.2025 ರ ಸಂಜೆ 6.00 ಘಂಟೆಯೊಳಗೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ.


ಸಹಿ/- ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು

HOUSE FOR RENT
30x40
North Facing attached, Bathroom, One Single Room, Italian Kitchen, Independent House, Nisaraga Layout, TN, Pura Road, Mysuru
9449220644 | 9738558908

ಯಶ್ ಡೆವಲಪರ್ಸ್
YESH DEVELOPERS
VILLA PLOTS FOR SALE
PROJECT LOCATIONS:
- BOGADI ROAD
- HUNSUR ROAD
- T. NARASIPURA ROAD
- BEHIND VIJAYANAGAR 4TH STAGE

Gated Community with CC Roads
RERA APPROVED
FREE VISIT 70220 11122

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ
ಶ್ರೀಮತಿ ಸರ್ವಮಂಗಳ ರವರು
ತಿರುಮಾಲಾಂಬ ರಸ್ತೆ, ಕರ್ನಾಟಕ ಟೆಕ್ಸ್‌ಟೈಲ್ ಎದುರು, ನಂಜನಗೂಡು
ಇವರು ಮಾಡುವ ವಿಜ್ಞಾಪನೆಗಳು



"ಶ್ರೀ ಗುರುಸ್ವಾಮಿ .ಎಸ್" ರವರು, ಉಪಾಧ್ಯಕ್ಷರು, ಶ್ರೀ ಕೆಂಡಗಣ್ಣಸ್ವಾಮಿ ಮಠ, ವೀರಶೈವ ಸಮಾಜದ ಮುಖಂಡರು
ಮರಣ: 28.05.2025, ಬುಧವಾರ

ದಿನಾಂಕ 28.05.2025ನೇ ಬುಧವಾರ ಬೆಳಗ್ಗೆ 4.30ಕ್ಕೆ ನನ್ನ ಪೂಜ್ಯಪತಿಯವರಾದ "ಶ್ರೀ ಗುರುಸ್ವಾಮಿ . ಎಸ್" ರವರು ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ . ಮೃತರ ಸಂಬಂಧವಾದ ಶಿವಗಣಾರಾಧನೆ ಕಾರ್ಯವನ್ನು ದಿನಾಂಕ 07.06.2025ನೇ ಶನಿವಾರ ಶ್ರೀಗಳ ಪಾದಪೂಜೆಯೊಂದಿಗೆ ಬೆಳಿಗ್ಗೆ 10.00ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಹಾಗೂ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ತಪ್ಪದೇ ಕಾರ್ಯಕ್ರಮಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಸ್ಥಳ: ಮೃತರ ಸ್ವಗೃಹ,
ಭೋಜನ ಮಧ್ಯಾಹ್ನ 12.30ಕ್ಕೆ

ಇಂತಿ ದುಃಖತಪ್ತರು
ಶ್ರೀಮತಿ ಸರ್ವ ಮಂಗಳ ಮಕ್ಕಳು ಮೊಮ್ಮಕ್ಕಳು ಮತ್ತು ಕೆ ಆರ್ ಕುಟುಂಬ ಹಾಗೂ ಬಂಧು ಮಿತ್ರರು

The Best WATER PROOF Plywood
₹66/- PER SQFT.
15 YEARS CERTIFIED WARRANTY
Neem BOND PLATINUM · Neem AKSHAYAGOLD
9148991267 | 9901291267

Exchange your old sofa set to brand new sofa set.
Also repair done.
Mob: 9591012944

READY TO REGISTER
DTCP Approved Sites
Available at Affordable Rates Near Bilikere
90% Bank Loan Available
9663767711 / 9620907711

(ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್‌ಇಲಾಖೆ)
ನಿಟ್ರೆ ಗ್ರಾಮ ಪಂಚಾಯಿತಿ ಕಾರ್ಯಾಲಯ
ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ.

ಇ-ಟೆಂಡರ್ ಪ್ರಕಟಣೆ

ಗುಂಡ್ಲುಪೇಟೆ ತಾಲ್ಲೂಕು ನಿಟ್ರೆ ಗ್ರಾಮ ಪಂಚಾಯಿತಿಯ ನಿಟ್ರೆ ಗ್ರಾಮದ ಸಂಜೀವಿನಿ ಶೆಡ್ ನಿರ್ಮಾಣಕ್ಕಾಗಿ ಸಾಮಾಗ್ರಿಗಳನ್ನು ಸರಬರಾಜು ಮಾಡಲು E-Procurement ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಯವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು https://kppp.karnataka.gov.in ಪೋರ್ಟಲ್ ಮೂಲಕ ಟೆಂಡರ್ ನಲ್ಲಿ ಭಾಗವಹಿಸಿ, ದಿನಾಂಕ : 03-06-2025 ರಿಂದ 16-06-2025 ರ ಮಧ್ಯಾಹ್ನ 3-00 ಗಂಟೆಯೊಳಗೆ ಟೆಂಡರ್ ಫಾರಂ ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಿಟ್ರೆ ಗ್ರಾಮ ಪಂಚಾಯಿತಿ, ಗುಂಡ್ಲುಪೇಟೆ ತಾಲ್ಲೂಕು ರವರ ಮೊಬೈಲ್ ಸಂಖ್ಯೆ 8971343301 ಸಂಪರ್ಕಿಸಬಹುದು.

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಸಂಖ್ಯೆ:ನಿ.ಗ್ರಾ.ಪಂ/ಉಖಾಯೋ/ಸಾಮಾಗ್ರಿ ಟೆಂಡರ್/01/2025-26 ದಿನಾಂಕ : 03/06/2025.
EMD ಮೊತ್ತ	ರೂ. 35200/-
KPPP ಪೋರ್ಟಲ್ ನಲ್ಲಿ ದಾಖಲೆಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ	16-06-2025 ಮಧ್ಯಾಹ್ನ 3-00 ಗಂಟೆಯೊಳಗೆ
KPPP ಪೋರ್ಟಲ್ ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	17-06-2025 ಮಧ್ಯಾಹ್ನ 3-00 ಗಂಟೆಗೆ
KPPP ಪೋರ್ಟಲ್ ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ	18-06-2025 ಬೆಳಿಗ್ಗೆ 11-00 ಗಂಟೆಗೆ
ಸಂಪರ್ಕಿಸಬೇಕಾದ ಅಧಿಕಾರಿಯ ವಿವರ (ಕಚೇರಿ ವೇಳೆಯಲ್ಲಿ ಮಾತ್ರ)	ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಿಟ್ರೆ ಗ್ರಾಮ ಪಂಚಾಯಿತಿ

ಟೆಂಡರ್‌ನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು e-Procurement ಪೋರ್ಟಲ್ ನಲ್ಲಿ ಪಡೆಯಬಹುದು.

ಸಹಿ/-
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ನಿಟ್ರೆ ಗ್ರಾಮ ಪಂಚಾಯಿತಿ
ಗುಂಡ್ಲುಪೇಟೆ ತಾಲ್ಲೂಕು

BOOK YOUR DREAM PLOT TODAY!
Project Highlights:
Project Name : River View and Dam view
Location : Near KRS View Point
Approval : DTCP Approved
PLOT SIZES : 30X40 & 30X50
Don't Miss Out! Limited Plots Available!*
8151035074 | 9035012579
*Book Now and Secure Your Future!

ಸಾರ್ವಜನಿಕ ಪ್ರಕಟಣೆ
ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ರಾಯನಕೆರೆ ಅಂಚೆ, ಕೋಟೆಹುಂಡಿ ಗ್ರಾಮದ ನಂಬರ್ 127/1 ರ ವಾಸಿಯಾದ ಶ್ರೀ.ಗೋವಿಂದ ಬಿನ್. ಚಿಕ್ಕ ದಾಸಯ್ಯ ಮತ್ತು ಇವರ ಕುಟುಂಬದ ಇತರೆ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,
ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.
ಷೆಡ್ಯೂಲ್ : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಚೌಡಹಳ್ಳಿ ಗ್ರಾಮದ ಸರ್ವೆ ನಂಬರ್. 15/9 ರಲ್ಲಿನ ಇಪ್ಪತ್ತು ಗುಂಟೆ (0.20.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 15/2 ಮರಿದಾಸಯ್ಯ ರವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 15/10 ಜಯಮ್ಮ ರವರ ಜಮೀನು , ಉತ್ತರಕ್ಕೆ: ಸರ್ವೆ ನಂ. 15/3 ಮತ್ತು 15/4 ಶಿವಕುಮಾರ್ ರವರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 14/2 ಟಿ.ಕೆ ರಘುರಾಮ್ ರವರ ಜಮೀನು

Sd/-Prakash Kalappa, Advocate & Legal Consultant, KAR-1996-2000
2-3, First Floor, PRI Complex, 67/7A, New Sayyajirao Road, Fort Mohalla, Mysore 570004, Cell: 93431 12535. E-mail: mnprakashkalappa@gmail.com
ಮೈಸೂರು : 06.06.2025

ಸಾರ್ವಜನಿಕ ಪ್ರಕಟಣೆ
ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ರಾಯನಕೆರೆ ಅಂಚೆ, ಕೋಟೆಹುಂಡಿ ಗ್ರಾಮದ ನಂಬರ್ 111 ರ ವಾಸಿಯಾದ ಶ್ರೀಮತಿ.ಜಯಮ್ಮ ಕೋಂ. ದೊಡ್ಡದಾಸಯ್ಯ ಮತ್ತು ಇವರ ಕುಟುಂಬದ ಇತರೆ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,
ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವದಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.
ಷೆಡ್ಯೂಲ್ :ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಚೌಡಹಳ್ಳಿ ಗ್ರಾಮದ ಸರ್ವೆ ನಂಬರ್.15/10 ರಲ್ಲಿನ ಹತ್ತು ಗುಂಟೆ (0.10.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ:- ಸರ್ವೆ ನಂ. 15/9 ಗೋವಿಂದ ರವರ ಜಮೀನು, ಪಶ್ಚಿಮಕ್ಕೆ:- ಸರ್ವೆ ನಂ. 15/11 ಕವಿತಾ ರವರ ಜಮೀನು, ಉತ್ತರಕ್ಕೆ: ಸರ್ವೆ ನಂ. 15/3 ಮತ್ತು 15/4 ಶಿವಕುಮಾರ್ ರವರ ಜಮೀನು, ದಕ್ಷಿಣಕ್ಕೆ:- ಸರ್ವೆ ನಂ. 14/2 ಟಿ.ಕೆ ರಘುರಾಮ್ ರವರ ಜಮೀನು

Sd/-Prakash Kalappa, Advocate & Legal Consultant, KAR-1996-2000
2-3, First Floor, PRI Complex, 67/7A, New Sayyajirao Road, Fort Mohalla, Mysore 570004, Cell: 93431 12535. E-mail: mnprakashkalappa@gmail.com
ಮೈಸೂರು : 06.06.2025

SITES FOR SALE
(30X40, 30X50 DIMENSIONS)
NEAR SRINAGAR, MYSORE
2.5 Kms from J.P.Nagar Ring road, 9.5kms from Mysore palace
For more details contact:
7892939603

ಗೆರಸನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ) ಹುಣಸೂರು ತಾಲ್ಲೂಕು.
ಇದರ ರಿಟರ್ನಿಂಗ್ ಆಫೀಸರ್ ರವರ ಕಾರ್ಯಾಲಯದಿಂದ

:ಚುನಾವಣಾ ಪ್ರಕಟಣೆ:

ಮೇಲ್ಕಂಡ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯು ದಿನಾಂಕ:22-06-2025ರಂದು ಭಾನುವಾರ ನಿಗಧಿಯಾಗಿದ್ದು, ಸಂಘದ ಕಛೇರಿಯಲ್ಲಿ ದಿನಾಂಕ:08-06-2025ರಿಂದ ದಿನಾಂಕ:14-06-2025 ರವರೆಗೆ ಬೆಳಗ್ಗೆ:11-00 ರಿಂದ ಮಧ್ಯಾಹ್ನ:2.00ಗಂಟೆಯವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ಚುನಾವಣೆ ಪ್ರಕ್ರಿಯೆ ಸಂಬಂಧ ಈಗಾಗಲೇ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಚುನಾವಣಾ ವೇಳಾ ಪಟ್ಟಿಯನ್ನು ರವಾನಿಸಲಾಗಿದ್ದು, ಒಂದು ವೇಳೆ ಚುನಾವಣಾ ವೇಳಾ ಪಟ್ಟಿ ನಿಗಧಿತ ಅವಧಿಯೊಳಗೆ ತಲುಪದಿದ್ದಲ್ಲಿ ಇದನ್ನೇ ಚುನಾವಣಾ ವೇಳಾ ಪಟ್ಟಿಯೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರಾದ ಎಸ್.ಸ್ವಾಮಿ ಅಥವಾ ರಿಟರ್ನಿಂಗ್ ಆಫೀಸರ್ ರಾಜಣ್ಣ ರವರನ್ನು ಸಂಪರ್ಕಿಸ ಬಹುದಾಗಿರುತ್ತದೆ.

ಸಹಿ/–
(ರಾಜಣ್ಣ)
ರಿಟರ್ನಿಂಗ್‌ಆಫೀಸರ್
ಗೆರಸನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ) ಹುಣಸೂರು ತಾಲ್ಲೂಕು.

ದಿನಾಂಕ:05-06-2025
ಸ್ಥಳ: ಗೆರಸನಹಳ್ಳಿ

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

4 ದಿನಗಳ ಸರಿಸಾಟಿಯಿಲ್ಲದ ಶಾಪಿಂಗ್!



THAILAND INTERNATIONAL SHOPPING FESTIVAL

Locate us
6 | 7 | 8 | 9 ಜೂನ್ 2025
ಬೆಳಗ್ಗೆ 10.00 ರಿಂದ ರಾತ್ರಿ 8.30ರವರೆಗೆ
ಚಾಮುಂಡಿ ವಿಹಾರ್ ಒಳಾಂಗಣ ಕ್ರೀಡಾಂಗಣ
ನಜರ್‌ಬಾದ್, ಮೈಸೂರು
ಕೊನೆಯ 3 ದಿನ




- ಥೈಲ್ಯಾಂಡ್ ಹೂವುಗಳು
- ಥೈಲ್ಯಾಂಡ್ ಮಕ್ಕಳ ಪರಿಕರಗಳು
- ಥೈಲ್ಯಾಂಡ್ ಮಹಿಳಾ ಪರಿಕರಗಳು
- ಥೈಲ್ಯಾಂಡ್ ಮುತ್ತಿನ ಆಭರಣಗಳು
- ಥಾಯ್ ಬಾಕ್ಸಿಂಗ್ ಪರಿಕರಗಳು
- ಇರಾನ್ ಆಭರಣ
- ಇರಾನ್ ಚಾಕೊಲೇಟ್‌ಗಳು
- ಅಫ್ಘಾನಿಸ್ತಾನ ಒಣ ಹಣ್ಣುಗಳು
- ದುಬೈ ಬಕ್ಲಾವಾ
- ಮಲೇಷ್ಯಾ ಹೊರಾಂಗಣ ಪೀಠೋಪಕರಣಗಳು
- ಥಾಯ್ ಎಣ್ಣೆಗಳು ಮತ್ತು ಮುಲಾಮುಗಳು
- ಥೈಲ್ಯಾಂಡ್ ಮಹಿಳೆಯರ ಉಡುಪು
- ಥಾಯ್ ಛತ್ರಿಗಳು
- ಥೈಲ್ಯಾಂಡ್ ಮಹಿಳೆಯರ ಕೈ ಚೀಲಗಳು
- ಥೈಲ್ಯಾಂಡ್ ರೇಷ್ಮೆ ಶಾಲುಗಳು
- ಸಿಂಗಾಪುರ ಕೈ ಚೀಲಗಳು
- ಸಿಂಗಾಪುರ ಮಹಿಳಾ ಪರಿಕರಗಳು
- ಕೊರಿಯಾ ಮಹಿಳಾ ಪರಿಕರಗಳು
- ದುಬೈ ಸುಗಂಧ ದ್ರವ್ಯಗಳು
- ದುಬೈ ಚಾಕೊಲೇಟ್‌ಗಳು

www.iadsandevents.com · exhibitions_iadsnevents · iadsnevents · ಪ್ರವೇಶ ಶುಲ್ಕ ೨೦ ರೂ. · +91 9342577908 · AN EVENT BY iads & events COMPLETE BUSINESS SOLUTIONS

ಬನ್ನಿ ನಿಮ್ಮ ಮನೆ ಮತ್ತು ಒಳಾಂಗಣವನ್ನು ನವೀಕರಿಸಿ!
ಕೊನೆಯ 3 ದಿನಗಳು
ಬೆಳಗ್ಗೆ 10.00 ರಿಂದ ರಾತ್ರಿ 8.30ರವರೆಗೆ

FURNITURE FAIR BIG SALE

Locate us
6 | 7 | 8 | 9 ಜೂನ್ 2025
ಚಾಮುಂಡಿ ವಿಹಾರ್ ಒಳಾಂಗಣ ಕ್ರೀಡಾಂಗಣ
ನಜರ್‌ಬಾದ್, ಮೈಸೂರು



• ಲಿವಿಂಗ್‌ರೂಮ್ ಸೆಟ್ • ರೆಕ್ಲೈನರ್ ಸೋಫಾ ಸೆಟ್‌ಗಳು • ಊಟದ ಕೋಣೆಯ ಸೆಟ್ • ಮಲಗುವ ಕೋಣೆಯ ಸೆಟ್ • ಚಿತ್ರಕಲೆ ಮತ್ತು ಚೌಕಟ್ಟುಗಳು • ಮನೆ ಅಲಂಕಾರ ಉತ್ಪನ್ನಗಳು • ಹಿತ್ತಾಳೆ ಮತ್ತು ಕಲಾಕೃತಿಗಳು • ಕಾರ್ಪೆಟ್ ಮತ್ತು ಕುಶನ್‌ಗಳು • ನೀರಿನ ಕಾರಂಜಗಳು ಮತ್ತು ಇನ್ನೂ ಹೆಚ್ಚಿನವು

www.iadsandevents.com · exhibitions_iadsnevents · iadsnevents · ಪ್ರವೇಶ ಶುಲ್ಕ ೨೦ ರೂ. · +91 9342577908 · AN EVENT BY iads & events COMPLETE BUSINESS SOLUTIONS

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಹೇಗಿದ್ದೀರಿ ಈಗ, ಕುಡಿಯುವುದನ್ನು ಬಿಟ್ರಿ ತಾನೇ?

ಕುಡುಕ ರೋಗಿ : ಹಾ... ಡಾಕ್ಟ್ರೆ. ಈಗ ಸಂಪೂರ್ಣ ಬಿಟ್ಟಿದ್ದೀನಿ. ಯಾರಾದರೂ ಒತ್ತಾಯ ಮಾಡಿದರೆ ಮಾತ್ರ ಸ್ವಲ್ಪ ಸ್ವಲ್ಪ ತೊಗೊಳ್ಳೋದು ಅಷ್ಟೆ..

ಡಾಕ್ಟರ್ : ಹೋ... ಹೌದಾ...! ಸೂಪರ್. ಅಂದ ಹಾಗೆ ಇವರು ಯಾರು? ನಿಮ್ಮ ಜೊತೆ ಬಂದವರು

ಕುಡುಕ ರೋಗಿ : ಇವರು ನಮ್ಮವರೇ, ಒತ್ತಾಯ ಮಾಡೋಕೆ ಅಂತಾನೇ ಜೊತೆಯಲ್ಲಿ ಇರಿಸಿಕೊಂಡಿದ್ದೇನೆ ಡಾಕ್ಟ್ರೆ!

ಮೈಸೂರು ಮಿತ್ರ

ಶನಿವಾರ 7 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಂದು ಹೆಣ್ಣಿನ ಮನಸ್ಸನ್ನು ಯಾವತ್ತೂ ನೋಯಿಸಬೇಡಿ. ಅವಳು ನಿಮ್ಮನ್ನು ಕ್ಷಮಿಸಬಹುದು. ಆದರೆ ನೀವು ಆಡಿದ ಮಾತು, ನೀವು ಮಾಡಿದ ನೋವು ಖಂಡಿತ ಆಕೆಯ ಮನಸ್ಸಿನಲ್ಲಿ ಉಳಿದಿರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ನಿಮ್ಮ ಪತ್ರಗಳು

■ ಕ್ರಿಕೆಟ್‌ನಿಂದ ಇತ್ತೀಚಿನ ವರ್ಷಗಳಲ್ಲಿ ಯುವ ಜನಾಂಗದ ಭವಿಷ್ಯ ಸರ್ವ ನಾಶ

ಮಾನ್ಯರೆ,

ಜಗತ್ತಿನ ಮುಂದುವರಿದ ರಾಷ್ಟ್ರಗಳಾದ ಅಮೆರಿಕಾ, ರಷ್ಯಾ, ಜರ್ಮನಿ, ಜಪಾನ್ ಸೇರಿದಂತೆ ಇತರ ರಾಷ್ಟ್ರಗಳಲ್ಲಿ ಕ್ರಿಕೆಟ್ ಎಂದರೆ ಏನು ಎಂಬುದೇ ಗೊತ್ತಿಲ್ಲ. ಆದರೆ, ನಮ್ಮ ದೇಶದ ಗ್ರಾಮೀಣ ಪ್ರದೇಶದ ನಿರಕ್ಷರಸ್ಥರೂ ಸಹ ಕ್ರಿಕೆಟ್ ಬಗ್ಗೆ ಪಂಡಿತ ರತ್ನರಾಗಿದ್ದಾರೆ! ಅದರ ಬಗ್ಗೆ ಗಂಟೆಗಟ್ಟಲೆ ಮಾತನಾಡುತ್ತಾರೆ. ಇದು ನಮ್ಮ ದೇಶದ ದೊಡ್ಡ ದುರಂತ. ಕ್ರಿಕೆಟ್, ಬ್ರಿಟಿಷರು ನಮ್ಮ ದೇಶಕ್ಕೆ ಬಿಟ್ಟು ಹೋದ ಕೊಡುಗೆ. ಇದು ನಮ್ಮ ದೇಶೀಯ ಕ್ರೀಡೆಗಳಾದ ಕಬ್ಬಡ್ಡಿ, ಖೋ-ಖೋ, ಹಾಕಿ, ಫುಟ್ಬಾಲ್, ವಾಲಿಬಾಲ್ ಮುಂತಾದ ಆಟಗಳೆಲ್ಲವನ್ನು ನುಂಗಿ ಹಾಕಿದೆ. ಯುವ ಜನಾಂಗಕ್ಕೆ ಕ್ರಿಕೆಟ್ ಎಂಬುದು ಒಂದು ರೀತಿ ಅಫೀಮು ಎಂಬಂತಾಗಿದೆ.

ಐಪಿಎಲ್ ಅದೊಂದು ಜೂಜುಕೋರರ ಸಂತೆ. ಯಾರೋ ಶ್ರೀಮಂತ ವರ್ಗದವರು ತಮ್ಮ ಮೋಜು-ಮಸ್ತಿಗಾಗಿ ಈ ಐಪಿಎಲ್ ಪ್ರಾರಂಭ ಮಾಡಿದರು. ಈಗಾಗಲೇ ಕಳೆದ ಹದಿನೆಂಟು ವರ್ಷಗಳಿಂದ ಐಪಿಎಲ್ ಜೂಜಿನಿಂದ ಸಾವಿರಾರು ಕುಟುಂಬಗಳು ಬೀದಿಪಾಲಾಗಿವೆ. ಬುಧವಾರ ಬೆಂಗಳೂರಿನಲ್ಲಿ ಈ ಬಾರಿಯ ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ಸಂಭ್ರಮಾಚರಣೆ ಸಂದರ್ಭದಲ್ಲಿ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು ಹಲವರು ಗಾಯಗೊಂಡಿದ್ದಾರೆ.

ಕ್ರಿಕೆಟ್ ಎಂಬುದು ಇತ್ತೀಚಿನ ವರ್ಷಗಳಲ್ಲಿ ಮೋಜು, ದುಡ್ಡು ಮಾಡುವ ದಂಧೆಯಾಗಿ ಪರಿಣಮಿಸಿದೆ. ಪ್ರಾರಂಭವಾಗುವ ಮೊದಲೇ ಕೆಲವರು ಇಂತಹ ಟೀಂ ಗೆಲ್ಲುತ್ತದೆ ಎಂದು ನಿಖರವಾಗಿ ಹೇಳುವವರು ಇದ್ದಾರೆ. ನಮ್ಮ ಯುವ ಪೀಳಿಗೆ ಈ ದಂಧೆಯನ್ನು ಹವ್ಯಾಸವಾಗಿಸಿಕೊಂಡು ಮನೆ-ಮಠ ಕಳೆದುಕೊಂಡ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಎಲ್ಲಕ್ಕಿಂತ ಮುಖ್ಯವಾಗಿ ಏಪ್ರಿಲ್ - ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಉನ್ನತ ಶಿಕ್ಷಣದ ಪ್ರವೇಶ ಪರೀಕ್ಷೆಗಳು ನಡೆಯುತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ನಡೆಯುವ ಐಪಿಎಲ್ ಹುಚ್ಚು ನಮ್ಮ ಯುವ ಜನಾಂಗದ ಭವಿಷ್ಯವನ್ನು ಮಣ್ಣು ಪಾಲು ಮಾಡುತ್ತಿದೆ.

– ನೊಂದ ಕುಟುಂಬಗಳು, ಮೈಸೂರು.

■ ಅವರೂ ಹನ್ನೊಂದು.... ಇವರೂ ಹನ್ನೊಂದು

ಆಡಿದರೂ ಆಟ ಆ ಹನ್ನೊಂದು ಜನ...
ಏರಿದರು ಚಟ್ಟ ಈ ಹನ್ನೊಂದು ಜನ

ಆಡಿದರು ಹನ್ನೊಂದು ಕ್ರಿಕೆಟ್ ಆಟ...
ಆಡಿದರು ಈ ಹನ್ನೊಂದು ವಿಧಿಯ ಆಟ.

ಅವರೂ ಆಡಿದರು ಕ್ರಿಕೆಟ್ ಮೈದಾನದಲ್ಲಿ...
ಇವರೂ ಮಡಿದರು ಕ್ರಿಕೆಟ್ ಮೈದಾನದಲ್ಲಿ.

ಅವರನ್ನು ಅಭಿನಂದಿಸಿದರು ಕುಂಕುಮವಿಟ್ಟು...
ಇವರನ್ನು ಬೀಳ್ಕೊಟ್ಟರು ವಿಭೂತಿಯಿಟ್ಟು...

ಅವರಿಗೂ ಸಿಕ್ಕಿತು ಸಿಎಂ ಪುರಸ್ಕಾರ...
ಇವರಿಗೂ ದೊರೆಯಿತು ಸಿಎಂ ಪರಿಹಾರ..

ಅವರನ್ನು ಸ್ವಾಗತಿಸಿದರು ಆನಂದ ಭಾಷ್ಪದಿ...
ಇವರನ್ನು ತೊರೆದರು ಅಶ್ರುಸಂತರ್ಪದಿ...

ಅವರೂ ಹನ್ನೊಂದು.... ಇವರೂ ಹನ್ನೊಂದು.

–ವಿನಯ್, (ವಾಟ್ಸಾಪ್ ಸಂದೇಶ)ಮೈಸೂರು.

■ ಕಾಲ್ತುಳಿತಕ್ಕೆ ಸರ್ಕಾರ ನೇರ ಹೊಣೆ

ಮಾನ್ಯರೆ,

ಬೆಂಗಳೂರಿನಲ್ಲಿ ನಡೆದ ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ಉಂಟಾಗಿ 11 ಮಂದಿ ಸಾವನ್ನಪ್ಪಿ 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಇಡೀ ರಾಜ್ಯವೇ ಶೋಕ ಸಾಗರದಲ್ಲಿ ಮುಳುಗಿದೆ. ಕರ್ನಾಟಕ ಸರ್ಕಾರದ ಬೇಜವಾಬ್ದಾರಿ ನಡವಳಿಕೆಯ ಬಗ್ಗೆ ಸಾರ್ವಜನಿಕರು ಭಾರೀ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಸಂಭ್ರಮಾಚರಣೆ ನಡೆಯುತ್ತದೆ ಎಂದು ಮುಂಚಿತವಾಗಿಯೇ ತಿಳಿದಿದ್ದರೂ ಸೂಕ್ತ ಪೊಲೀಸ್ ವ್ಯವಸ್ಥೆ ಮಾಡದೆ ಸಾಕಷ್ಟು ಪೊಲೀಸರನ್ನು ನಿಯೋಜಿಸದೆ ಬೇಜವಾಬ್ದಾರಿಯನ್ನು ಪ್ರದರ್ಶಿಸಿದೆ. ತಕ್ಷಣ ಈ ಸಂಭ್ರಮಾಚಚರಣೆಯ ಕಾರ್ಯಕ್ರಮವನ್ನು ಸರ್ಕಾರ ಇಟ್ಟುಕೊಳ್ಳಬಾರದಾಗಿತ್ತು ಎಂಬುದು ಜನಸಾಮಾನ್ಯರ ಅಭಿಪ್ರಾಯವಾಗಿದೆ.

ಈ ಘೋರ ಕಾಲ್ತುಳಿತಕ್ಕೆ ಬಲಿಯಾದವರ ಬಗ್ಗೆ ಅವರ ಪೋಷಕರೂ, ಸಂಬಂಧಿಕರೂ ಅತೀವ ದುಃಖವನ್ನು ಅನುಭವಿಸಿ ಸಂಕಟವನ್ನು ಅನುಭವಿಸುತ್ತಿದ್ದಾರೆ. ಸರ್ಕಾರದ ಈ ಬೇಜವಾಬ್ದಾರಿ ನಡೆಯಿಂದ ಹಲವಾರು ಪ್ರಾಣ ಕಳೆದುಕೊಳ್ಳಬೇಕಾಯಿತೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಘಟನೆಗೆ ರಾಜ್ಯ ಸರ್ಕಾರವೇ ನೇರ ಹೊಣೆ ಎಂದು ಬಹಿರಂಗವಾಗಿಯೇ ಸಾರ್ವಜನಿಕರು ಹೇಳುತ್ತಿದ್ದಾರೆ.

ಈ ಘಟನೆಯಲ್ಲಿ ಕರ್ನಾಟಕ ಸರ್ಕಾರದ ಉಡಾಫೆ ಮತ್ತು ಬೇಜವಾಬ್ದಾರಿ ಎದ್ದು ಕಾಣಿಸುತ್ತಿದೆ. ಪೊಲೀಸರ ಅಸಡ್ಡೆ ಹಾಗೂ ಬೇಜವಾಬ್ದಾರಿಯೂ ಸಹ ಇರುವುದು ಅವರುಗಳ ನಿರ್ಲಕ್ಷ್ಯತನವನ್ನು ತೋರಿಸುತ್ತಿದೆ. ಅವರುಗಳ ಮೇಲಧಿಕಾರಿಗಳ ಕರ್ತವ್ಯ ಲೋಪವು ಕ್ಷಮಿಸಲಾರದ ತಪ್ಪು. ಈ ಘಟನೆಗೆ ಅವರೇ ನೇರಹೊಣೆ.

ವಿದೇಶಿ ಆಟಗಾರರು ರಾತ್ರಿಯೇ ದೇಶವನ್ನು ತೊರೆಯಬೇಕಿತ್ತು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅಪ್ಪಣೆ ಕೊಟ್ಟಿದ್ದಾರೆ. ಅವರು ವಾಪಸ್ ಹೋಗುವ ವಿಮಾನಯಾನದ ಟಿಕೆಟ್‌ಗಳನ್ನು ಈ ಮೊದಲೇ ನಿರ್ಧರಿಸಿಕೊಂಡಿರುತ್ತಾರೆ ಎಂಬ ಕನಿಷ್ಠ ಜ್ಞಾನವೂ ಅವರಿಗೆ ಇಲ್ಲದಿರುವುದು ಖೇದಕರವಾಗಿದೆ. ಇಂತಹ ಮುಖ್ಯಮಂತ್ರಿಗಳನ್ನು ಹೊಂದಿರುವುದು ರಾಜ್ಯದ ದೌರ್ಭಾಗ್ಯವೆಂದೇ ಹೇಳಬೇಕಿದೆ. ಈಗ ಘಟನೆ ಬಗ್ಗೆ ಮ್ಯಾಜಿಸ್ಟೀರಿಯಲ್ ತನಿಖೆ ನಡೆಸುತ್ತಾರಂತೆ. ಇದರಿಂದ ಏನು ಪ್ರಯೋಜನ? ಈ ತನಿಖೆಯಿಂದ ಮರಣಿಸಿದವರು ಎದ್ದು ಬರುವರೇ? ನಡೆದ ಈ ಘೋರ ಘಟನೆಗೆ ಕರ್ನಾಟಕ ರಾಜ್ಯ ಸರ್ಕಾರವೇ ನೇರ ಹೊಣೆ ಎಂದು ಹಲವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಘಟನೆಯು ಕ್ರಿಕೆಟ್ ಇತಿಹಾಸದಲ್ಲಿಯೇ ಒಂದು ಕಪ್ಪು ಚುಕ್ಕಿಯಾಗಿ ಉಳಿಯಲಿದೆ ಎಂಬುದು ಸತ್ಯವಾದ ವಿಚಾರವಾಗಿದೆ.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು.



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,

ಸಕಾಲಿಕ

ನಿರಪರಾಧಿ ಪೊಲೀಸರ ಸಸ್ಪೆಂಡ್ ಆಯ್ತು; ಮುಗ್ಧರ ಬಲಿಗೆ ಕಾರಣವಾದ ಸರ್ಕಾರಕ್ಕೇನು ಶಿಕ್ಷೆ...?



ರಾಜ್ಯ ಕಂಡರಿಯದ ಘೋರ ದುರಂತವೊಂದು ವಿಧಾನಸೌಧ ಹಾಗೂ ಹೈಕೋರ್ಟಿನಿಂದ ಕೂಗಳತೆ ದೂರದಲ್ಲಿ ನಡೆದು ಹೋಗಿದೆ. ಇದಕ್ಕೆ ರಾಜ್ಯ ಸರ್ಕಾರದ ತರಾತುರಿ ನಿರ್ಧಾರವೇ ಕಾರಣ. ಆದ್ದರಿಂದ, ಹೈಕೋರ್ಟ್ ಸರ್ಕಾರಕ್ಕೆ ತಕ್ಕ ಶಾಸ್ತಿ ಮಾಡಬೇಕಿದೆ. ಆ ಮೂಲಕವಾದರೂ ಬೇಜವಾಬ್ದಾರಿಯುತ ಈ ಸರ್ಕಾರಕ್ಕೆ ಬುದ್ಧಿ ಕಲಿಸಬೇಕಿದೆ.

ಇಂತಹ ಎಡಬಿಡಂಗಿ ಸರ್ಕಾರಕ್ಕೆ ಪಾಠ ಕಲಿಸುವ ಶಕ್ತಿ ಸದ್ಯಕ್ಕೆ ಮತದಾರರ ಕೈಯ್ಯಲ್ಲಿಲ್ಲ. ಅದು ನಾವು ನಂಬಿರುವ ನ್ಯಾಯಾಲಯಕ್ಕೆ (ಉಚ್ಛ) ಮಾತ್ರವಿದೆ. ಜನಾಭಿಪ್ರಾಯದ ಮಾನದಂಡ ಆಧರಿಸಿ ಹೈಕೋರ್ಟ್ ಸರ್ಕಾರಕ್ಕೆ ಛೀಮಾರಿ ಹಾಕಬೇಕು.

ತನ್ನ ಆತುರದ ನಿರ್ಧಾರದಿಂದಾದ ತಪ್ಪನ್ನು ಪೊಲೀಸರ ತಲೆಗೆ ಕಟ್ಟಿ, ತನ್ನದೇನೂ ತಪ್ಪಿಲ್ಲ ಎಂದು ಜನರ ಮುಂದೆ ಬಿಂಬಿಸಿಕೊಳ್ಳುವ ಪ್ರಯತ್ನಕ್ಕೆ ಸರ್ಕಾರ ಕೈ ಹಾಕಿದೆ. ಅಹಮದಾಬಾದ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟ್ರೋಫಿ ಗೆದ್ದು ಬೀಗಿದ್ದ ಆರ್‌ಸಿಬಿ ತಂಡವನ್ನು ಬೆಳಗಾಗುವುದರೊಳಗೆ ತರಾತುರಿಯಲ್ಲಿ ಕರೆಸುವ ಸಾಹಸಕ್ಕೆ 'ಕೈ' ಹಾಕಿದ್ದೇ ತಪ್ಪು. ಹಿಂದೆ-ಮುಂದೆ ಯೋಚಿಸದೆ, ಪೂರ್ವಸಿದ್ಧತೆ ಮಾಡಿಕೊಳ್ಳದೆ ಮನಸ್ಸೋ ಇಚ್ಛೆ ನಡೆದುಕೊಂಡಿದ್ದು, ಈ ಘೋರ ದುರಂತಕ್ಕೆ ನಾಂದಿ ಹಾಡಿದೆ.

11 ಮಂದಿ ಮುಗ್ಧರ ಸಾವು ಹಾಗೂ ನೋವುಂಡ ಜನರ ಕಷ್ಟಕ್ಕೆ ಸರ್ಕಾರದ ಆಡಳಿತ ಸೂತ್ರ ಹಿಡಿದ ಪ್ರಮುಖ ತ್ರಿಮೂರ್ತಿಗಳಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಕಾರಣ. ಇದರ ಹೊಣೆಯನ್ನು ನೇರವಾಗಿ ಅವರೇ ಹೊರಬೇಕಿದೆ.

ಹಿರಿಯ ಪೊಲೀಸ್ ಅಧಿಕಾರಿಗಳ ಸಲಹೆ-ಸೂಚನೆಗೆ ಮೂರು ಕಾಸಿನ ಕಿಮ್ಮತ್ತನ್ನು ಕೊಡದೆ ಸ್ವೇಚ್ಛಾಚಾರವಾಗಿ ನಡೆದುಕೊಂಡ ಸರ್ಕಾರ, ಈ ದುರಂತಕ್ಕೆ ಅಂತಿಮವಾಗಿ ಪೊಲೀಸರನ್ನೇ ಹೊಣೆಗಾರರನ್ನಾಗಿಸಿ ಅವರ ತಲೆದಂಡ ತೆಗೆದುಕೊಂಡಿರುವುದು ಯಾವ ನ್ಯಾಯ?

ತಪ್ಪು ನಿರ್ಧಾರ ಮಾಡಿದ್ದು ಸರ್ಕಾರ. ಆದರೆ ದುರಂತದ ಹೊಣೆ ಹೊರಿಸಿದ್ದು ಮಾತ್ರ ಪೊಲೀಸರ ಮೇಲೆ. ರಾಜ್ಯದ ಇತಿಹಾಸದಲ್ಲಿ ಹಿರಿಯ ಅಧಿಕಾರಿಗಳನ್ನು ವಿಚಾರಣೆ ಇಲ್ಲದೆ ಏಕಾಏಕಿ ಸೇವೆಯಿಂದ ಸಸ್ಪೆಂಡ್ ಮಾಡಿದ್ದು ಕ್ಷಮಿಸಲಾಗದ ನಿರ್ಧಾರ. ಇದರಿಂದ ಇಡೀ ಪೊಲೀಸ್ ಸಿಬ್ಬಂದಿ ತಲೆ ತಗ್ಗಿಸಿ ನಿಂತಿದೆ. ಅಲ್ಲದೆ ಸರ್ಕಾರ ವಿನಾಕಾರಣ ಪೊಲೀಸ್ ಇಲಾಖೆಗೆ ಕಪ್ಪು ಚುಕ್ಕೆ ಇಟ್ಟಿದೆ. ಇದು ಕಾಂಗ್ರೆಸ್ ಸರ್ಕಾರ ಕೊಟ್ಟ ಬಳುವಳಿ.

> ವಿಕ್ಟರಿ ಪೆರೇಡ್‌ಗಾಗಲೀ, ಸ್ಟೇಡಿಯಂ ಕಾರ್ಯಕ್ರಮಕ್ಕಾಗಲೀ ಪೊಲೀಸರು ಅನುಮತಿಯನ್ನೇ ನೀಡಿಲ್ಲ. ಹಾಗಿದ್ದರೂ ಸ್ಟೇಡಿಯಂನಲ್ಲಿ ಕಾರ್ಯಕ್ರಮ ನಡೆಯುವುದಕ್ಕೆ ಪೊಲೀಸರ ಅನುಮತಿ ಇಲ್ಲದೆಯೇ ಆಯೋಜಕರು ಪ್ರಕಟಿಸಿದ್ದಾರೆ. ಅಂದರೆ, ಈ ಕಾರ್ಯಕ್ರಮದಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗಿಯಾಗಿದ್ದಾರೆ ಅಂದ ಮೇಲೆ ಇದರ ಹೊಣೆಯನ್ನು ನೇರವಾಗಿ ಸರ್ಕಾರವೇ ಹೊರಬೇಕಲ್ಲವೇ?

ತಾನು ಮಾಡಿದ ಸ್ವಯಂಕೃತ ಅಪರಾಧಕ್ಕಾಗಿ ಸರ್ಕಾರ ತಲೆ ತಗ್ಗಿಸುವ ಬದಲು ಪೊಲೀಸ್ ಇಲಾಖೆ ಮೇಲೆ ಗೂಬೆ ಕೂರಿಸಿದೆ. ಇಲಾಖೆಯ ಆತ್ಮಸ್ಥೈರ್ಯ ಕುಗ್ಗುವಂತೆ ಮಾಡಿದೆ. ಈ ತಪ್ಪು ನಿರ್ಧಾರ ಕೈಗೊಂಡು 11 ಮಂದಿಯ ಸಾವಿಗೆ ಕಾರಣರಾದ ತ್ರಿಮೂರ್ತಿಗಳಿಗೆ ಯಾವ ಶಿಕ್ಷೆ?

ಈ ಕಥೆ ಹೀಗಾದರೆ, ವಿಶ್ವ ಕಂಡ ಅದ್ಭುತ ಆಟಗಾರರನ್ನು ಕರೆದು ಸನ್ಮಾನಿಸುವ ಬದಲು ಅವಮಾನಿಸಿದ್ದಾರೆ. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸನ್ಮಾನಿತರನ್ನು ಕೂರಿಸಿ ಪೇಟ, ಹಾರ,



ಶಾಲು ಹಾಕಿ, ಹಣ್ಣು ಕೊಡುವುದನ್ನು ಯಾರೂ, ಅಂದರೆ ಅಲ್ಲಿ ನೆರೆದಿದ್ದ ಲಕ್ಷಾಂತರ ಮಂದಿ ಅಭಿಮಾನಿಗಳು ನೋಡಲಾಗಲೇ ಇಲ್ಲ. ಏಕೆಂದರೆ ವೇದಿಕೆ ತುಂಬಾ ರಾಜಕಾರಣಿಗಳು, ಅವರ ಮನೆಯವರು, ಮಕ್ಕಳು-ಮೊಮ್ಮಕ್ಕಳು ತುಂಬಿದ್ದರು. ಅವರೆಲ್ಲಾ ಆಟಗಾರರ ಜೊತೆ ಫೋಟೋ ತೆಗೆಸಿಕೊಳ್ಳಲು ಮುಗಿ ಬೀಳುತ್ತಿದ್ದರು. ಅಲ್ಲಿ ಸೇರಿದ್ದ ಜನಸ್ತೋಮ ಇವರಿಗೆ ಹಿಡಿಶಾಪ ಹಾಕಿತು.

ಈ ಸಡಗರ ಮುಗಿಯುತ್ತಿದ್ದಂತೆ ಉಪಮುಖ್ಯಮಂತ್ರಿ ಸೇರಿದಂತೆ ಕೆಲವರು ಕ್ರೀಡಾಪಟುಗಳೊಂದಿಗೆ ಸ್ಟೇಡಿಯಂಗೆ ತೆರಳಿ ಸನ್ಮಾನ ಕಾರ್ಯಕ್ರಮದಲ್ಲಿ ಭಾಗಿಯಾದರು. ಇತ್ತ ಸ್ಟೇಡಿಯಂ ಹೊರಗೆ ಜನಜಂಗುಳಿ ಏರ್ಪಟ್ಟು ನೂಕು ನುಗ್ಗಲಿನಲ್ಲಿ 11 ಮಂದಿ ಮುಗ್ಧರು ಶಿವನ ಪಾದ ಸೇರಿದರೆ, ನೂರಾರು ಮಂದಿ ಗಾಯಗೊಂಡಿದ್ದಾರೆ.

ಇದರ ಅರಿವೇ ಇಲ್ಲದಂತೆ ಒಳಗೆ ಕಾರ್ಯಕ್ರಮ ನಡೆದಿದೆ. ಅದರಲ್ಲಿ ಸಾಕ್ಷಾತ್ ಸರ್ಕಾರವೂ ಭಾಗಿಯಾಗಿದೆ. ಸಾವಿನ ಸೂತಕವನ್ನು ಲೆಕ್ಕಿಸದೆ ಸಂಭ್ರಮಿಸಿದ್ದಾರೆ. ಹಾಗಂತ ಮುಗ್ಧ ಜನರು ಸಾವಿಗೀಡಾಗಿದ್ದು, ಸರ್ಕಾರಕ್ಕೆ ಗೊತ್ತಿಲ್ಲವೆಂದೇನಲ್ಲ. ಕೆಲವರು ಸತ್ತಿರುವ ವಿಚಾರವನ್ನು ತಮಗೆ ಪೊಲೀಸ್ ಆಯುಕ್ತರು ಹೇಳಿ ಬೇಗನೇ ಕಾರ್ಯಕ್ರಮ ಮುಗಿಸುವಂತೆ ಹೇಳಿದರೆಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರೇ ಮಾಧ್ಯಮದ ಮುಂದೆ ಹೇಳಿದ್ದಾರೆ ದುರಂತದ ಬಗ್ಗೆ ತಿಳಿದಿದ್ದೂ ಸ್ಟೇಡಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಭ್ರಮಿಸಿದ್ದು ಎಂತಹ ವಿಪರ್ಯಾಸ.

ಆ ಸಾವು-ನೋವು ಕಂಡು ದಿಗ್ಭ್ರಾಂತರಾದ ಜನರಲ್ಲಿ ಕಣ್ಣೀರ ಕೋಡಿ ಹರಿಯಿತು. ಸತ್ತವರು ಹಾಗೂ ಗಾಯಾಳುಗಳನ್ನು ಸಾಗಿಸುವಾಗ ಆ ನರಳಾಟ, ಆಕ್ರಂದನ, ಆಂಬುಲೆನ್ಸ್‌ಗಾಗಿ ಪರದಾಟ ಇವೆಲ್ಲಾ ನರಕ ಸದೃಶದಂತಿತ್ತು. ಇದೆಲ್ಲಾ ಸರ್ಕಾರದ ಕಣ್ಣಿಗೆ ಬಿದ್ದೇ ಇಲ್ಲ. ಇತ್ತ ಸತ್ತಂತಹ ಅರಳುವ ಪ್ರತಿಭೆಗಳ ಭವಿಷ್ಯ, ಅವರ ಕುಟುಂಬದ ಸಂಕಟ ಹೇಳತೀರದು.

ದುರಂತ ತಾರಕ್ಕೇರಿದ ಮೇಲೆ ಈ 'ಅಕ್ಕ-ಬುಕ್ಕರು' ಸಭೆ, ಸಂತಾಪ, ತಪ್ಪಿನ ಅರಿವಿನ ಬಗ್ಗೆ ಸಮಾಲೋಚನೆ ನಡೆಸಿದ್ದಾರೆ. ಹೈಕಮಾಂಡ್ ಎಚ್ಚರಿಕೆ ಕೊಟ್ಟ ಮೇಲೆ ಎಚ್ಚೆತ್ತು, ತಡವರಿಸಿಕೊಂಡಂತೆ ಸರ್ಕಾರ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬಿಟ್ಟವರಂತೆ ಕಂಡ ಕಂಡವರನ್ನೆಲ್ಲಾ ಅಮಾನತು ಮಾಡಿ, ತಮ್ಮ ಧೈರ್ಯ ಪ್ರದರ್ಶಿಸಿ ಹೈಕಮಾಂಡ್‌ನಿಂದ ಬೇಷ್ ಎನಿಸಿಕೊಂಡಿದ್ದಾರೆ.

ವಿಕ್ಟರಿ ಪೆರೇಡ್‌ಗಾಗಲೀ, ಸ್ಟೇಡಿಯಂ ಕಾರ್ಯಕ್ರಮಕ್ಕಾಗಲೀ ಪೊಲೀಸರು ಅನುಮತಿಯನ್ನೇ ನೀಡಿಲ್ಲ. ಹಾಗಿದ್ದರೂ ಸ್ಟೇಡಿಯಂನಲ್ಲಿ ಕಾರ್ಯಕ್ರಮ ನಡೆಯುವುದಕ್ಕೆ ಪೊಲೀಸರ ಅನುಮತಿ ಇಲ್ಲದೆಯೇ ಆಯೋಜಕರು ಪ್ರಕಟಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗಿಯಾಗಿದ್ದಾರೆ ಅಂದ ಮೇಲೆ ಇದರ ಹೊಣೆಯನ್ನು ನೇರವಾಗಿ ಸರ್ಕಾರವೇ ಹೊರಬೇಕಲ್ಲವೇ?

ಈಗ ಆರ್‌ಸಿಬಿ, ಡಿಎನ್ಎ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮೇಲೆ ದಾಖಲಾಗಿರುವ ಎಫ್ಐಆರ್ ಗಮನಿಸಿದರೆ, ಈ ಕಾರ್ಯಕ್ರಮವನ್ನು ಸದರಿ ಸಂಸ್ಥೆಗಳು ಪೊಲೀಸರನ್ನೂ ಧಿಕ್ಕರಿಸಿ ಮಾಡಲು ಸರ್ಕಾರದ ಬೆಂಬಲವಿತ್ತು ಎಂದೆನಿಸುವುದಿಲ್ಲವೇ!?. ಇದು ಮಾತ್ರವಲ್ಲ ಈ ಮಹಾ ದುರಂತಕ್ಕೆ ಸರ್ಕಾರವೇ ಕಾರಣ ಎಂಬುದಕ್ಕೆ ಸಾಕಷ್ಟು ಪುರಾವೆಗಳಿರುವಾಗ ಶಿಕ್ಷೆಯಾಗಬೇಕಿರುವುದು ಸರ್ಕಾರಕ್ಕಾ? ಇಲ್ಲವೇ ಪೊಲೀಸರಿಗಾ ಎಂಬ ಪ್ರಶ್ನೆ ಸಹಜವಲ್ಲವೇ?

ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ. ಈ ಇಲಾಖೆಯಲ್ಲಿ ಪ್ರತಿಭಟನೆ ನಡೆಸುವುದಕ್ಕೆ ಅವಕಾಶವೇ ಇಲ್ಲ. ಒಂದು ವೇಳೆ ಪ್ರತಿಭಟನೆ ನಡೆಸಿದವರು ಅಮಾನತು ಮಾತ್ರವಲ್ಲ ಕೆಲಸದಿಂದ ವಜಾ ಕೂಡ ಆಗಬಹುದು ಎಂಬುದು ಎಲ್ಲರಿಗೂ, ಪ್ರಮುಖವಾಗಿ ಪೊಲೀಸರಿಗೆ ಗೊತ್ತಿರುವ ವಿಚಾರ. ಹಾಗಿದ್ದರೂ ಕೆಲಸ ಹೋದರೂ ಪರವಾಗಿಲ್ಲ ಎಂಬ ಧೋರಣೆ ಯೊಂದಿಗೆ ಪೊಲೀಸ್ ಅಧಿಕಾರಿಗಳ ಅವಮಾನತು ಖಂಡಿಸಿ ಮಡಿವಾಳ ಠಾಣೆಯ ಹೆಡ್ ಕಾನ್ಸ್‌ಟೇಬಲ್ ನರಸಿಂಹ ರಾಜು ಎಂಬುವವರು, ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು, ಡಾ. ಅಂಬೇಡ್ಕರ್ ಫೋಟೋ ಹಿಡಿದು ರಾಜಭವನ ಚಲೋ ನಡೆಸಲು ಮುಂದಾದರು ಅಂದರೆ ಅವರಿಗೆ ಸರ್ಕಾರದ ನಡೆಯ ಬಗ್ಗೆ ಎಂತಹ ಆಕ್ರೋಶ ಇರಬಹುದು ಎಂಬುದನ್ನು ಊಹಿಸಬಹುದಾಗಿದೆ. ಇವರಂತೆಯೇ ಅನೇಕ ಪೊಲೀಸರಲ್ಲಿ ನೋವಿದೆ. ಒಂದು ವೇಳೆ ಪೊಲೀಸ್ ಇಲಾಖೆಯಲ್ಲಿ ಪ್ರತಿಭಟನೆಗೆ ಅವಕಾಶ ವಿದ್ದಿದ್ದರೆ, ಇಂದು ರಾಜ್ಯಾದ್ಯಂತ ಪೊಲೀಸರು ಬೀದಿಗಿಳಿದು ಹೋರಾಟ ಮಾಡದೇ ಇರುತ್ತಿರಲಿಲ್ಲ.



ಬಿ.ದಯಾನಂದ



ವಿಕಾಸ್‌ಕುಮಾರ್



ಶೇಖರ್



ಬಾಲಕೃಷ್ಣ



ಗಿರೀಶ್



ನರಸಿಂಹರಾಜು

ಗುಪ್ತಚರ ಎಡಿಜಿಪಿಯಾಗಿ ಎಸ್.ರವಿ ನಿಯೋಜನೆ

ಬೆಂಗಳೂರು, ಜೂ.6– ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಸೇರಿ ಐವರು ಅಧಿಕಾರಿಗಳ ಅಮಾನತು ಗೊಳಿಸಿದ ಬೆನ್ನಲ್ಲೇ ರಾಜ್ಯ ಗುಪ್ತಚರ ವಿಭಾಗದ ಎಡಿಜಿಪಿ ಹೇಮಂತ್ ಎಂ. ನಿಂಬಾಳ್ಕರ್ ಸೇರಿ ಐವರು ಐಪಿಎಸ್ ಅಧಿಕಾರಿಗಳ ವರ್ಗಾವಣೆ ಮಾಡಿ, ರಾಜ್ಯ ಸರ್ಕಾರ ಶುಕ್ರವಾರ ಆದೇಶಿಸಿದೆ.



ರಾಜ್ಯ ಗುಪ್ತಚರ ಇಲಾಖೆ ಎಡಿಜಿಪಿ ಹೇಮಂತ್ ಎಂ.ನಿಂಬಾಳ್ಕರ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ. ಪೊಲೀಸ್ ದೂರು ಪ್ರಾಧಿಕಾರದ (ಪಿಸಿಎಎಸ್) ಪ್ರಧಾನ ಕಾರ್ಯದರ್ಶಿ, ಎಡಿಜಿಪಿ ರವಿ. ಎಸ್ ಅವರನ್ನು ಗುಪ್ತಚರ ವಿಭಾಗದ ಎಡಿಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಹಾಗೆಯೇ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಆರ್. ಹಿತೇಂದ್ರ ಅವರನ್ನು, ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿಯಾಗಿ, ಸಂವಹನ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ ವಿಭಾಗದ ಎಡಿಜಿಪಿ ಎಸ್.ಮುರುಗನ್ ಅವರನ್ನು ನೇಮಕಾತಿ ವಿಭಾಗದ ಎಡಿಜಿಪಿಯಾಗಿ ನಿಯೋಜಿಸಲಾಗಿದೆ. ಇನ್ನು ನೇಮಕಾತಿ ವಿಭಾಗದ ಎಡಿಜಿಪಿ ಕೆ.ವಿ.ಶರತ್ ಚಂದ್ರ ಅವರನ್ನು ಪೊಲೀಸ್ ದೂರು ಪ್ರಾಧಿಕಾರದ (ಪಿಸಿಎಎಸ್) ಪ್ರಧಾನ ಕಾರ್ಯದರ್ಶಿಯಾಗಿ ವರ್ಗಾಯಿಸುವುದರ ಜೊತೆಗೆ ಎಡಿಜಿಪಿ ಹಾಗೂ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆಯನ್ನೂ ವಹಿಸಲಾಗಿದೆ.

ಬೆಂಗಳೂರು ದುರಂತಕ್ಕೆ ಕಾರಣರಾಗಿರುವ ಸಿಎಂ, ಡಿಸಿಎಂ ರಾಜೀನಾಮೆಗೆ ಪ್ರಹ್ಲಾದ್ ಜೋಶಿ ಆಗ್ರಹ

ಮೈಸೂರು, ಜೂ.6(ಆರ್‌ಕೆ)–ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವ ಪರೇಡ್ ಕಾರ್ಯಕ್ರಮದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳೇ ನೇರ ಕಾರಣ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಗಂಭೀರ ಆರೋಪ ಮಾಡಿದ್ದಾರೆ.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಸಿಬಿ ತಂಡವು ಐಪಿಎಲ್‌ನಲ್ಲಿ ಗೆದ್ದು ಕಪ್ ತನ್ನದಾಗಿಸಿಕೊಂಡ ತಂಡದ ಆಟಗಾರರನ್ನು ಸನ್ಮಾನಿಸಲೆಂದು ಪೂರ್ವ ಸಿದ್ಧತೆ ಮಾಡದೇ ತರಾತುರಿಯಲ್ಲಿ ವಿಜಯೋತ್ಸವ ಪರೇಡ್ ಆಯೋಜಿಸಿದ್ದರಿಂದ ಕಾಲ್ತುಳಿತಕ್ಕೆ 11 ಮಂದಿ ಅಮಾಯಕರು ಬಲಿಯಾಗಿದ್ದು, ಅದರ ಹೊಣೆ ಹೊತ್ತು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಅಂದು ಇಡೀ ದಿನ ಉಪ ಮುಖ್ಯಮಂತ್ರಿ ಶಿವಕುಮಾರ್ ದಾದಾಗಿರಿ ಪ್ರದರ್ಶಿಸಿದ್ದಾರೆ. ಅತ್ತ ಮೂವರು ಬಲಿಯಾದರೆ, ಅವರು ಮಾತ್ರ ಟ್ರೋಫಿಗೆ ಮುತ್ತು ಕೊಟ್ಟು ಸಂಭ್ರಮಿಸಿದ್ದಾರೆ. ಪೊಲೀಸರು ನಿರಾಕರಿಸಿದರೂ, ದರ್ಪದಿಂದ ಗದರಿಸಿ ಕಾರ್ಯಕ್ರಮ ಆಯೋಜಿಸಿ ಅಮಾಯಕರ ಪ್ರಾಣ ಹೋಗಲು ಕಾರಣರಾಗಿದ್ದಾರೆ ಎಂದು ಆರೋಪಿಸಿದರು.

ಲಿಖಿತ ರೂಪದಲ್ಲಿ ಭದ್ರತೆ ನಿರಾಕರಿಸಿಲ್ಲ ಎಂಬ ಕಾರಣಕ್ಕೆ ಬೆಂಗಳೂರು ನಗರ ಕಮಿಷ್ನರ್ ಬಿ.ದಯಾನಂದರನ್ನು ಸಸ್ಪೆಂಡ್ ಮಾಡಿದ್ದೀರಿ. ನಿಮ್ಮ ಟ್ವೀಟರ್‌ನಲ್ಲಿ ಅಭಿಮಾನಿಗಳಿಗೆ ನೀವೇ ಕರೆ ಕೊಟ್ಟಿಲ್ವಾ, ಏರ್ ಪೋರ್ಟ್‌ಗೆ ಹೋಗಿ ಬಾವುಟ ಹಿಡಿದುಕೊಂಡು ಬರಲಿಲ್ವಾ, ಕಾಂಗ್ರೆಸ್ ಹೈಕಮಾಂಡ್‌ಗೆ ಕಮಾಂಡ್ ಇದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಲಿ ಎಂದು ಜೋಶಿ ಆಗ್ರಹಿಸಿದರು.

ರಾಹುಲ್ ಗಾಂಧಿ ಪ್ರಪಂಚದ ಎಲ್ಲಾ ವಿಷಯ ಮಾತನಾಡುತ್ತಾರೆ. ಕಾಲ್ತುಳಿತ ಪ್ರಕರಣ ಗೊತ್ತಿಲ್ಲವೆ? ಮಿಸ್ ಮ್ಯಾನೇಜ್‌ಮೆಂಟ್ ಮಾಡಿದ ಸರ್ಕಾರ, ತರಾತುರಿಯಲ್ಲಿ ಹುಚ್ಚರಂತೆ ವರ್ತನೆ ಮಾಡಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಮೂವರು ಸತ್ತ ನಂತರವೂ, ಸಿಎಂ, ಡಿಸಿಎಂ, ಅವರ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಸೆಲ್ಫಿ ತೆಗೆಸಿಕೊಂಡು ಸಂಭ್ರಮಿಸಿದರು ಎಂದು ದೂರಿದರು.

ಇವರು ಸೆಲ್ಫಿ ತೆಗೆದುಕೊಳ್ಳುವಾಗ ಕ್ರೀಡಾಂಗಣದಲ್ಲಿ ಮೂರು ಮಂದಿ ಸತ್ತಿದ್ರು ಇದು ಅಕ್ಷಮ್ಯ ಅಪರಾಧವಲ್ವೆ? ತದನಂತರವೂ ಕಾರ್ಯಕ್ರಮ ನಡೆದಿದೆ. ಅಂದು ತರಾತುರಿಯಲ್ಲಿ ಮ್ಯಾಜಿಸ್ಟೀರಿಯಲ್ ತನಿಖೆ ಎಂದ ನೀವು, ತನಿಖೆಗೆ ಪ್ರಮೋಟಿ ಐಎಎಸ್ ಅಧಿಕಾರಿ ನೇಮಿಸಿದ್ದೀರಿ ಎಂದ ಅವರು ಇಷ್ಟು ತರಾತುರಿ ಏಕೆ? ಯಾರನ್ನು ರಕ್ಷಣೆ ಮಾಡಬೇಕಿತ್ತು ಎಂದು ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಉಚ್ಛ ನ್ಯಾಯಾಲಯ ಸುಮೋಟೋ ಪ್ರಕರಣ ದಾಖಲಿಸಿದ ನಂತರ ಹಿರಿಯ ಅಧಿಕಾರಿಗಳನ್ನು ಅಮಾನತು ಮಾಡಿದ್ದೀರಿ. ನೀವು ಮುಕ್ತ ಕರೆ ನೀಡಿದ್ದರಿಂದ ಅಷ್ಟು ಜನ ಬಂದಿದ್ದರು. ನೀವೇ ರಿಸೀವ್ ಮಾಡಿಕೊಂಡಿದ್ದೀರಿ. ಪೊಲೀಸ್ ಇಲಾಖೆ ನಿರಾಕರಿಸಿದ ನಂತರವೂ ಕಾರ್ಯಕ್ರಮ ಆಯೋಜಿಸಿದ ಉಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ತನಿಖೆ ಮಾಡಿಸುತ್ತೀರಾ ಎಂದು ಪ್ರಹ್ಲಾದ್ ಜೋಶಿ ಮುಖ್ಯಮಂತ್ರಿಗಳ ಪ್ರಶ್ನಿಸಿದ್ದಾರೆ. ಸಾಧನೆ ಮಾಡಿದವರ ಜೊತೆ ನಿಂತು ಕ್ರೆಡಿಟ್ ತಗೊಳ್ಳೋ ಚಟ ನಿಮಗೆ. ಐಪಿಎಲ್ ಟ್ರೋಫಿಗೆ ಮುತ್ತು ಕೊಟ್ರಲ್ಲಾ, ಜನ ಸತ್ತ ನಂತರವೂ ಕ್ರೀಡಾಂಗಣಕ್ಕೆ ಹೋದ ಡಿಕೆಶಿ ವಿರುದ್ಧ ಕ್ರಮವಾಗಬೇಕಲ್ವಾ? ಎಂದು ಅವರು ಪ್ರಶ್ನಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮದಲ್ಲಿ
ಜೆಡಿಎಸ್, ಬಿಜೆಪಿ ರಾಜಕೀಯ ಮಾಡುತ್ತಿವೆ
ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ

ಬೆಂಗಳೂರು, ಜೂ. 6(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಹಿನ್ನೆಲೆಯಲ್ಲಿ ಕೆಲವು ಪೊಲೀಸ್ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮ ಕುರಿತು ಬಿಜೆಪಿ ಮತ್ತು ಜೆಡಿಎಸ್ ನಾಯಕರು ರಾಜಕೀಯ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟೀಕಿಸಿದ್ದಾರೆ.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕರಿಂದ ಪೊಲೀಸ್ ಅಧಿಕಾರಿಗಳನ್ನು ಬಲಿಪಶು ಮಾಡಲಾಗಿದೆ ಎಂಬ ಆರೋಪ ರಾಜಕೀಯ ಉದ್ದೇಶಿತ. ಆದರೆ, ನಾನು ರಾಜಕೀಯ ಮಾಡುವುದಿಲ್ಲ, ಮೇಲ್ನೋಟಕ್ಕೆ ತಪ್ಪು ಕಂಡುಬಂದಿರುವುದರಿಂದ ಜವಾಬ್ದಾರಿ ನಿರ್ವಹಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 43ನೇ ಪುಣ್ಯಸ್ಮರಣೆ ಸಂದರ್ಭದಲ್ಲಿ ಭಾವಚಿತ್ರಕ್ಕೆ ಮಾಲಾರ್ಪಣೆ ನಂತರ ಮಾತನಾಡಿದ ಅವರು, ದೇವರಾಜ ಅರಸು ರಾಜ್ಯ ಕಂಡಂತಹ ಮುತ್ಸದ್ಧಿ ರಾಜಕಾರಣಿ. ಬಡವರು, ಅನ್ಯಾಯ ಮತ್ತು ತುಳಿತಕ್ಕೊಳಗಾದ, ಅವಕಾಶ ವಂಚಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು.

ಸಮಾಜದ ಶೋಷಿತ ವರ್ಗಕ್ಕೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿ ಕೊಟ್ಟರು. ಹಾವನೂರು ಆಯೋಗ ವರದಿ ಜಾರಿ ಮಾಡುವ ಮೂಲಕ ಉದ್ಯೋಗದಲ್ಲಿ ಮೀಸಲಾತಿ ಕೊಟ್ಟರು.

ಸಾಮಾಜಿಕ ನ್ಯಾಯದಲ್ಲಿ ಬಲವಾದ ನಂಬಿಕೆ ಇಟ್ಟ ದೇವರಾಜ ಅರಸು, ನಿರ್ಗತಿಕರು, ಭೂರಹಿತರಿಗೆ ನ್ಯಾಯ ಕೊಡಿಸಿದರು. ಉಳುವವನೇ ಭೂಮಿಯ ಒಡೆಯ ಕಾನೂನು ಜಾರಿ ಮೂಲಕ ಭೂರಹಿತರನ್ನು ಜಮೀನಿನ ಒಡೆಯರಾಗಿಸಿದರು.

ಜೀತ ಪದ್ಧತಿ, ಮಲ ಹೊರುವ ಪದ್ಧತಿ ರದ್ದು ಮಾಡಿದರು. ಅವರ ಕಲ್ಯಾಣ ಕಾರ್ಯಕ್ರಮಗಳ ಉದ್ದ ಪಟ್ಟಿಯೇ ಇದೆ. ಅಲ್ಲದೆ, ದೀರ್ಘ ಕಾಲ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು.

ಮೈಸೂರು ರಾಜ್ಯಕ್ಕೆ 1973ರಲ್ಲಿ ಕರ್ನಾಟಕ ಎಂದು ನಾಮಕರಣ ಮಾಡಿದರು. ಅವರ ಕೆಲಸಗಳು ನಮಗೆ ಸ್ಫೂರ್ತಿ ಮತ್ತು ಪ್ರೇರಣೆ. ನಮ್ಮ ಸರ್ಕಾರ ಅವರಿಂದ ಸ್ಫೂರ್ತಿ ಪಡೆದು ಸಾಮಾಜಿಕ ನ್ಯಾಯದೆಡೆಗೆ ದೃಢವಾದ ಹೆಜ್ಜೆಗಳನ್ನು ಇರಿಸಿದ್ದೇವೆ ಎಂದರು.

ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ; ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ರೈತರ ಭಾರೀ ವಿರೋಧ
ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ಈ ಯೋಜನೆಗೆ ಅವಕಾಶ ಕೊಡಲ್ಲ; ಪಟ್ಟು

ಮಂಡ್ಯ, ಜೂ. 6– ಕೆಆರ್‌ಎಸ್‌ನಲ್ಲಿ ರಾಜ್ಯ ಸರ್ಕಾರದ ಉದ್ದೇಶಿತ ಕಾವೇರಿ ಆರತಿ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಯೋಜನೆಗೆ ರೈತರು ಭಾರೀ ವಿರೋಧ ವ್ಯಕ್ತಪಡಿಸಿದ್ದು, ಅಣೆಕಟ್ಟೆಯ ಸುರಕ್ಷತೆಗೆ ಧಕ್ಕೆ ತರುವಂತಹ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲಾ ಪಂಚಾಯ್ತಿ ಕಾವೇರಿ ಸಭಾಂಗಣದಲ್ಲಿ ಇಂದು ಸಂಜೆ ಕಾವೇರಿ ಆರತಿ ಮತ್ತು ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಯೋಜನೆ ಕುರಿತು ರೈತರ ಅಭಿಪ್ರಾಯ ಸಂಗ್ರಹ ಸಭೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದಾಗ ರೈತರು ಮತ್ತು ಜನಪ್ರತಿನಿಧಿಗಳ ನಡುವೆ ವಾಕ್ಸಮರವೇ ನಡೆಯಿತು.



ಮಂಡ್ಯ ಜಿಲ್ಲಾ ಪಂಚಾಯ್ತಿ ಕಾವೇರಿ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಕಾವೇರಿ ಆರತಿ ಮತ್ತು ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಯೋಜನೆ ಕುರಿತು ರೈತರ ಅಭಿಪ್ರಾಯ ಸಂಗ್ರಹ ಸಭೆ

ಕಾವೇರಿ ಆರತಿ ಕಾರ್ಯಕ್ರಮಕ್ಕೆ ರೈತ ಮುಖಂಡರು ವಿರೋಧ ವ್ಯಕ್ತಪಡಿಸಿದಾಗ ಶಾಸಕ ರವಿಕುಮಾರ್ ಗಣಿಗ 'ಯಾರೇ ವಿರೋಧ ಮಾಡಿದರೂ ನಾವು ಕಾವೇರಿ ಆರತಿ ಮಾಡುತ್ತೇವೆ' ಎಂದು ಸವಾಲು ಹಾಕಿದಾಗ ರೈತ ಮುಖಂಡರು ಮತ್ತು ಶಾಸಕರ ನಡುವೆ ವಾಕ್ಸಮರ ನಡೆಯಿತು.

ಸಭೆಯ ಆರಂಭದಲ್ಲಿ ಮಾತನಾಡಿದ ಜಿಲ್ಲಾ ಹಿತ ರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ, ಈ ಸಭೆಯ ಬಗ್ಗೆ 10 ದಿನ ಮುಂಚಿತವಾಗಿ ನಮಗೆ ತಿಳಿಸಬೇಕಾಗಿತ್ತು. ನಿನ್ನೆ ಸಂಜೆಯಷ್ಟೇ ಮಾಹಿತಿ ನೀಡಲಾಗಿದೆ. ಹೀಗಾಗಿ ಮೈಸೂರು–ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಒಳಗೊಂಡಿರದ ಈ ಸಭೆ ಅಪೂರ್ಣ ಎಂದು ಆಕ್ಷೇಪ ವ್ಯಕ್ತಪಡಿಸಿದರು.

92 ಕೋಟಿ ರೂ. ವೆಚ್ಚ ಮಾಡಿ ಕೆಆರ್‌ಎಸ್‌ನಲ್ಲಿ ಕರ್ಪೂರದ ಆರತಿ ಮಾಡುವುದು ಸರಿಯೇ? ಎಂದು ಪ್ರಶ್ನಿಸಿದ ಅವರು, ಈ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಸೇರಿದರೆ ಜಲ ಮಾಲಿನ್ಯ ಹಾಗೂ ವಾಯು ಮಾಲಿನ್ಯ ಉಂಟಾಗಿ ಅಣೆಕಟ್ಟೆಯ ಸುರಕ್ಷತೆಗೆ ಧಕ್ಕೆ ಉಂಟಾಗುತ್ತದೆ. ಅಲ್ಲದೇ ಇದರ ವಿರುದ್ಧ ಈಗಾಗಲೇ ನಾವು ನ್ಯಾಯಾಲಯದ ಮೆಟ್ಟಿಲೇರಿದ್ದೇವೆ. ಯಾವುದೇ ಕಾರಣಕ್ಕೂ ಕಾವೇರಿ ಆರತಿ ಮಾಡಲು ಬಿಡುವುದಿಲ್ಲ ಎಂದರು.

ಕನ್ನಂಬಾಡಿ ಕಟ್ಟಿದವರು ಇಂಜಿನಿಯರ್‌ಗಳು ಈಗ ಈ ಅಣೆಕಟ್ಟೆಗೆ ಧಕ್ಕೆ ತರಲು ಹೊರಟಿರುವುದೂ ಕೂಡ ಇಂಜಿನಿಯರ್‌ಗಳೇ ಎಂದ ಅವರು, ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಮತ್ತು ಕಾವೇರಿ ಆರತಿ ಕಾರ್ಯಕ್ರಮದಿಂದ ಅಣೆಕಟ್ಟೆಯ ಸುರಕ್ಷತೆಗೆ ಧಕ್ಕೆ ಉಂಟಾಗುತ್ತದೆ ಎಂದು ಇಂಜಿನಿಯರ್‌ಗಳು ಸರ್ಕಾರದ ಗಮನಕ್ಕೆ ತರಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ರೈತ ಮುಖಂಡ ರಾಜೇಗೌಡ ಮಾತನಾಡಿ, ಈ ಯೋಜನೆಗಳಿಂದ ಕಾವೇರಿ ನೀರು ಕಲುಷಿತವಾಗುತ್ತದೆ. ಈವಾಗಲೇ ಕೆ.ಆರ್.ಪೇಟೆಯಲ್ಲಿ ಕಾರ್ಖಾನೆಗಳಿಂದ ಹರಿಯುವ ತ್ಯಾಜ್ಯ ಮತ್ತು ಒಳ ಚರಂಡಿ ನೀರು ಹೇಮಾವತಿ ಒಡಲು ಸೇರುತ್ತಿದ್ದು, ನದಿಗಳನ್ನು ಉಳಿಸುವ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕು ಎಂದರು.

ಯಾರೇ ವಿರೋಧ ಮಾಡಿದರೂ ಕಾವೇರಿ ಆರತಿ ಮಾಡುತ್ತೇವೆ ಎಂದು ಸವಾಲು ಹಾಕಿದ ಶಾಸಕ ರವಿಕುಮಾರ್ ಗಣಿಗ ವಿರುದ್ಧ ರೈತರು ಸಿಡಿದೆದ್ದಾಗ ಅವರನ್ನು ಸಮಾಧಾನಪಡಿಸಿದ ಸಚಿವ ಚಲುವರಾಯಸ್ವಾಮಿ, ಶಾಸಕರು ಸರ್ಕಾರದ ಭಾಗವಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಹೀಗೇ ಮಾತನಾಡಿ ಎಂದು ಶಾಸಕರಿಗೆ ಹೇಳಲು ಸಾಧ್ಯವಿಲ್ಲ. ಆದರೆ, ಹೀಗೆ ಒರಟಾಗಿ ವರ್ತಿಸಬಾರದು ಎಂದು ತಿಳಿಹೇಳುತ್ತೇನೆ ಎಂದರಲ್ಲದೆ, ಈ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಮನಕ್ಕೆ ತರಲಾಗುವುದು ಎಂದರು.

ಸಂಸದರನ್ನು ಏಕೆ ಕರೆದಿಲ್ಲ: ಈ ಭಾಗದ ಸಂಸದರಾಗಿರುವ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಸಭೆಗೆ ಕರೆಯದೇ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಕೆಆರ್‌ಎಸ್ ಗ್ರಾಮ ಪಂಚಾಯ್ತಿ ಸದಸ್ಯ ಮಂಜುನಾಥ್ ಆಕ್ಷೇಪ ವ್ಯಕ್ತಪಡಿಸಿದಾಗ ಸಭೆಯಲ್ಲಿ ಗದ್ದಲ ಉಂಟಾಯಿತು. ಸಚಿವ ಚಲುವರಾಯಸ್ವಾಮಿ ಅವರು ಸಭೆಗೆ ಬರಬೇಡಿ ಎಂದು ಯಾರಿಗೂ ಹೇಳಿಲ್ಲ. ಈ ಹಿಂದೆ ನಾವು ಕರೆದಿದ್ದ ಎಷ್ಟು ಕಾರ್ಯಕ್ರಮಗಳಿಗೆ ಸಂಸದರು ಬಂದಿದ್ದಾರೆ ಎಂಬುದರ ಬಗ್ಗೆ ನಮ್ಮ ಬಳಿ ದಾಖಲೆಗಳಿವೆ. ರೈತರು ಏರು ಧ್ವನಿಯಲ್ಲಿ ಮಾತನಾಡಿದರೂ ಕೇಳುತ್ತೇವೆ, ನಮ್ಮ ಕೊರಳ ಪಟ್ಟಿ ಹಿಡಿದರೂ ಸುಮ್ಮನಿರುತ್ತೇವೆ. ಆದರೆ ನೀನೊಬ್ಬ ಜನಪ್ರತಿನಿಧಿಯಾಗಿ (ಗ್ರಾಪಂ ಸದಸ್ಯ) ಹೀಗೆ ಮಾತನಾಡುವುದು ಸರಿಯಲ್ಲ ಎಂದರು. ಈ ವೇಳೆ ಸಭೆ ಗದ್ದಲದ ಗೂಡಾಯಿತು. ಪೊಲೀಸರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಸಭೆಯಲ್ಲಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ದರ್ಶನ್ ಪುಟ್ಟಣ್ಣಯ್ಯ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಉಪ ಮುಖ್ಯಮಂತ್ರಿಗಳ ತಾಂತ್ರಿಕ ಸಲಹೆಗಾರ ಕೆ.ಜಯಪ್ರಕಾಶ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಜಿಲ್ಲಾಧಿಕಾರಿ ಡಾ. ಕುಮಾರ, ಜಿಪಂ ಸಿಇಓ ನಂದಿನಿ, ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಅಧಿಕಾರಿಗಳು ಹಾಗೂ ರೈತ ಮುಖಂಡರು ಉಪಸ್ಥಿತರಿದ್ದರು.

ಡಿ.ಜಿ.ಸಾಗರ್, ಅಮೀನ್ ಮಟ್ಟು, ರಮೇಶ್‌ಬಾಬು, ಆರತಿ ಕೃಷ್ಣ ಪರಿಷತ್‌ಗೆ ನಾಮಕರಣಕ್ಕೆ ಶಿಫಾರಸು



ರಮೇಶ್ ಬಾಬು, ಡಿ.ಜಿ.ಸಾಗರ್, ಆರತಿ ಕೃಷ್ಣ, ಅಮೀನ್ ಮಟ್ಟು

ಬೆಂಗಳೂರು, ಜೂ. 6(ಕೆಎಂಶಿ)– ದಲಿತ ಮುಖಂಡ ಡಿ.ಜಿ.ಸಾಗರ್, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸೇರಿದಂತೆ ನಾಲ್ಕು ಮಂದಿ ವಿಧಾನಪರಿಷತ್‌ಗೆ ನಾಮಕರಣಗೊಳ್ಳುವುದು ಬಹುತೇಕ ನಿಶ್ಚಿತವಾಗಿದೆ.

ಇವರೊಂದಿಗೆ ಕಾಂಗ್ರೆಸ್ ವಕ್ತಾರ ರಮೇಶ್ ಬಾಬು ಮತ್ತು ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯರ ವೇದಿಕೆ ಉಪಾಧ್ಯಕ್ಷೆ ಆರತಿ ಕೃಷ್ಣ ಹೆಸರುಗಳನ್ನು ಪರಿಷತ್‌ಗೆ ನಾಮಕರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದಾರೆ.

ಡಿ.ಜಿ.ಸಾಗರ್ ಹಲವು ದಶಕಗಳಿಂದ ದಲಿತ ಚಳವಳಿ ಸೇರಿದಂತೆ ಸಾಮಾಜಿಕ ಹೋರಾಟಗಳಲ್ಲಿ ಸಕ್ರಿಯರಾಗಿದ್ದಾರೆ. ದಿನೇಶ್ ಅಮೀನ್ ಮಟ್ಟು 2013 ರಿಂದ 2018ರವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು.

ಕಾಂಗ್ರೆಸ್ ವಕ್ತಾರರಾಗಿರುವ ರಮೇಶ್ ಬಾಬು ಈ ಹಿಂದೆ ಜೆಡಿಎಸ್‌ನಲ್ಲಿದ್ದು ನಂತರ ಪಕ್ಷದ ನಾಯಕರ ಧೋರಣೆ ವಿರುದ್ಧ ಬಂಡಾಯವೆದ್ದು ಕೈ ಪಾಳಯ ಸೇರಿದ್ದರು. ನಾಲ್ಕು ಮಂದಿ ಹೆಸರು ಅಂತಿಮಗೊಂಡಿದ್ದು, ವಿಧಾನಪರಿಷತ್‌ಗೆ ನಾಮಕರಣ ಮಾಡಿ ಯಾವುದೇ ಕ್ಷಣದಲ್ಲಿ ಆದೇಶ ಹೊರಬೀಳುವ ಸಾಧ್ಯತೆ ಇದೆ.

'ನಾನು ರಾಜ್ಯದ ಸಿಎಂ ಹೇಳ್ತಿದ್ದೇನೆ... ವಿಧಾನಸೌಧ ಕಾರ್ಯಕ್ರಮಕ್ಕೆ ಭದ್ರತೆ ಕೊಡಿ...'

ಬೆಂಗಳೂರು, ಜೂ.6–ವಿಧಾನಸೌಧ ಕಾರ್ಯಕ್ರಮಕ್ಕೆ ಭದ್ರತೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆಸಿ, 'ನಾನು ರಾಜ್ಯದ ಸಿಎಂ, ಆದೇಶ ಮಾಡುತ್ತಿದ್ದೇನೆ. ವಿಧಾನಸೌಧ ಕಾರ್ಯಕ್ರಮಕ್ಕೆ ಭದ್ರತೆ ಕೊಡಿ' ಎಂದು ಗದರಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.



ಜೂ.4ರಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಅವರು ಪೊಲೀಸ್ ಆಯುಕ್ತರಿಗೆ ಕರೆ ಮಾಡಿ ವಿಧಾನಸೌಧ ಕಾರ್ಯಕ್ರಮಕ್ಕೆ ಭದ್ರತೆ ನೀಡಬೇಕು ಎಂದು ಒತ್ತಡ ಹಾಕಿದ್ದಾರೆ. ಅದಕ್ಕೆ ಆಯುಕ್ತರು ರಾತ್ರಿಯಿಡೀ ನಿದ್ದೆಗೆಟ್ಟು ಪೊಲೀಸರು ಕೆಲಸ ಮಾಡಿದ್ದಾರೆ. 2–3 ಕಡೆ ಕಾರ್ಯಕ್ರಮ ಮಾಡಿದರೆ ಭದ್ರತೆ ನೀಡಲು ಕಷ್ಟವಾಗುತ್ತದೆ. ಒಂದೇ ಕಡೆ ಕಾರ್ಯಕ್ರಮ ಮಾಡಿ ಎಂದು ಸಲಹೆ ನೀಡಿದ್ದಲ್ಲದೇ, ವಿಧಾನಸೌಧ ಕಾರ್ಯಕ್ರಮಕ್ಕೆ ಭದ್ರತೆ ನೀಡಲು ಸಾಧ್ಯವಿಲ್ಲ ಎಂದು ಖಡಕ್ ಆಗೇ ಹೇಳಿದ್ದಾರೆ.

ನಂತರ ಗೋವಿಂದರಾಜು ಅವರು ಮುಖ್ಯಮಂತ್ರಿಗಳಿಗೆ ಈ ವಿಚಾರ ತಿಳಿಸಲಾಗಿ, ಅವರು ಪೊಲೀಸ್ ಆಯುಕ್ತರನ್ನು ಕರೆಸಿ 'ನಾನು ಚಿನ್ನಸ್ವಾಮಿ ಸ್ಟೇಡಿಯಂಗೆ ಹೋಗಲ್ಲ. ವಿಧಾನಸೌಧದಲ್ಲೇ ಕಾರ್ಯಕ್ರಮ ಮಾಡಬೇಕು. ರಾಜ್ಯದ ಸಿಎಂ, ಆದೇಶ ಮಾಡುತ್ತಿದ್ದೇನೆ. ವಿಧಾನಸೌಧ ಕಾರ್ಯಕ್ರಮಕ್ಕೆ ಭದ್ರತೆ ಕೊಡಿ' ಎಂದು ಗದರಿದ್ದಾರೆ. ಆಗ ಅನಿವಾರ್ಯವಾಗಿ ಪೊಲೀಸ್ ಆಯುಕ್ತರು ವಿಧಾನಸೌಧಕ್ಕೆ ಭದ್ರತೆ ನೀಡಿದ್ದಾರೆ. ಅದೂ ಕಾಟಾಚಾರಕ್ಕೆ ಮೂರ್‍ನಾಲ್ಕು ತುಕಡಿ ಪೊಲೀಸರನ್ನು ನಿಯೋಜಿಸಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

ಇದು ಒಂದು ಭಾಗವಾದರೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕನಕಪುರದ ಯಾವುದೋ ಕೇಸ್ ಸಂಬಂಧ ಕೋರ್ಟ್‌ನಲ್ಲಿ ಹಾಜರಿದ್ದಾಗ ಯಾರೋ ಒಬ್ಬರು ಫೋನ್ ಮಾಡಿ ವಿಧಾನಸೌಧ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುತ್ತಾರೆ. ತಕ್ಷಣವೇ ಅವರು ಕೋರ್ಟ್‌ನಿಂದ ನೇರವಾಗಿ ಹೆಚ್‌ಎಎಲ್‌ಗೆ ಹೋಗಿ ಆರ್‌ಸಿಬಿ ತಂಡವನ್ನು ಸ್ವಾಗತಿಸಿ, ಅಲ್ಲಿಂದ ಕಾರಿನಲ್ಲಿ ಅವರೇ ಆರ್‌ಸಿಬಿ ಧ್ವಜ ಹಿಡಿದುಕೊಂಡು ತಂಡವನ್ನು ತಾವೇ ಗೆಲ್ಲಿಸಿ ಬಂದವರ ಹಾಗೆ ಫೋಸ್ ಕೊಟ್ಟುಕೊಂಡು ಬಂದಿದ್ದಾರೆ ಎಂದರು.

ವಿಧಾನಸೌಧದಲ್ಲಿ ಶಾಲು, ಮೈಸೂರು ಪೇಟ ಇಲ್ಲದೇ ಸನ್ಮಾನ ಮಾಡಿದ್ದಾರೆ. ಕೊನೆಗೆ ಶಾಲೂ ಕೂಡ ಇಲ್ಲದೇ ಪರದಾಡಿ ಅದ್ಯಾವುದೋ ಶಾಲು ತಂದು ಬೇಕಾಬಿಟ್ಟಿಯಾಗಿ ಆಟಗಾರರಿಗೆ ಹಾಕಿದ್ದಾರೆ. ಒಬ್ಬ ಶಾಸಕರನ್ನು ಎಳೆದಾಡುವ ಮೂಲಕ ಡಿಸಿಎಂ ಭದ್ರತಾ ಕೆಲಸವನ್ನೂ ಮಾಡಿದ್ದಾರೆ. ಈ ಕಾರ್ಯಕ್ರಮ ನಡೆಯುವಾಗಲೇ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಅಭಿಮಾನಿಗಳು ಮೃತಪಟ್ಟ ಸುದ್ದಿ ಬಂದರೂ ಕಾರ್ಯಕ್ರಮವನ್ನು ಮುಂದುವರೆಸಿದ್ದಾರೆ. ನಂತರ ಡಿಸಿಎಂ ಸ್ಟೇಡಿಯಂಗೆ ಹೋಗಿ ಟ್ರೋಫಿಗೂ ಮುತ್ತು ಕೊಟ್ಟು ಬಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜುಗೆ ಗೇಟ್ ಪಾಸ್
ಗುಪ್ತಚರ ಮುಖ್ಯಸ್ಥ ಹೇಮಂತ್ ನಿಂಬಾಳ್ಕರ್ ಎತ್ತಂಗಡಿ

ಬೆಂಗಳೂರು, ಜೂ. 6(ಕೆಎಂಶಿ)– ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜು ಅವರನ್ನು ತಮ್ಮ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿತ್ತೊಗೆದಿದ್ದಾರೆ.



ಗೋವಿಂದರಾಜು



ನಿಂಬಾಳ್ಕರ್

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಲ್ತುಳಿತ ಘಟನೆಯಲ್ಲಿ ಗುಪ್ತಚರ ವಿಭಾಗದ ವೈಫಲ್ಯ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಕಾರಣ ಎಂದು ದೂರಿದ್ದರು.

ಅವರು ಪತ್ರಿಕಾಗೋಷ್ಠಿ ಮುಗಿಸಿದ ಎರಡು ಗಂಟೆಯೊಳಗೆ ಗೋವಿಂದರಾಜು ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಿದ್ದಲ್ಲದೆ, ಗುಪ್ತಚರ ವಿಭಾಗದ ಮುಖ್ಯಸ್ಥರಾಗಿದ್ದ ಎಡಿಜಿಪಿ ಹೇಮಂತ್ ನಿಂಬಾಳ್ಕರ್ ಅವರನ್ನು ಹುದ್ದೆಯಿಂದ ತೆಗೆದುಹಾಕಲಾಗಿದೆ. ಈಗ ಅವರು ವಾರ್ತಾ ಮತ್ತು ಪ್ರಸಾರ ಇಲಾಖೆ ಆಯುಕ್ತರಾಗಿ ಮಾತ್ರ ಕಾರ್ಯ ನಿರ್ವಹಿಸಲಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಸೇರಿದಂತೆ ಕೆಲವು ಪೊಲೀಸ್ ಅಧಿಕಾರಿಗಳನ್ನು ನಿನ್ನೆ ರಾತ್ರಿಯಷ್ಟೇ ಅಮಾನತು ಮಾಡಲಾಗಿತ್ತು.

ದಯಾನಂದ್ ಅಮಾನತು: ಸರ್ಕಾರದ ನಡೆ ಖಂಡಿಸಿ ಅಂಬೇಡ್ಕರ್ ಫೋಟೋ ಹಿಡಿದು ಹೆಡ್ ಕಾನ್‌ಸ್ಟೇಬಲ್ ಪ್ರತಿಭಟನೆ

ಬೆಂಗಳೂರು, ಜೂ.6– ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರನ್ನು ಅಮಾನತುಗೊಳಿಸಿದ ಸರ್ಕಾರ ಆದೇಶದ ವಿರುದ್ಧ ಮಡಿವಾಳ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಒಬ್ಬರು ರಾಜಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದ್ದಾರೆ.



ಹೆಡ್ ಕಾನ್‌ಸ್ಟೇಬಲ್ ನರಸಿಂಹರಾಜು ಅವರು ಸರ್ಕಾರದ ನಡೆ ಖಂಡಿಸಿ, ಅಂಬೇಡ್ಕರ್ ಫೋಟೋ ಹಿಡಿದು, ಕಪ್ಪು ಪಟ್ಟಿ ಧರಿಸಿ ರಾಜಭವನದ ಎದುರು ಪ್ರತಿಭಟನೆ ನಡೆಸಿದ್ದಾರೆ. ದೂರಿನಲ್ಲಿ ಪೊಲೀಸ್ ಅಧಿಕಾರಿಗಳ ಅಮಾನತು ಆದೇಶ ರದ್ದುಪಡಿಸಬೇಕು. ಈ ಮೂಲಕ ಪೊಲೀಸ್ ಇಲಾಖೆಗೆ ನೈತಿಕ ಸ್ಥೈರ್ಯ ತುಂಬಬೇಕು ಎಂದು ಬರೆದಿದ್ದಾರೆ. ಅವರನ್ನು ವಿಧಾನಸೌಧ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬುಧವಾರ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಭೀಕರ ಕಾಲ್ತುಳಿತಕ್ಕೆ 11 ಅಭಿಮಾನಿಗಳು ಸಾವನ್ನಪ್ಪಿದ್ದರು. ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ವಿಧಾನಸೌಧ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಾಗರೋಪಾದಿಯಲ್ಲಿ ಜನ ನೆರೆದಿದ್ದರು. ಜನರಲ್ಲಿ ನೂಕುನುಗ್ಗಲಿಂದ ಕಾಲ್ತುಳಿತ ಉಂಟಾಗಿ ಈ ದುರಂತ ಸಂಭವಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸ್ ಕಮಿಷನರ್ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿ ಸರ್ಕಾರ ಗುರುವಾರ ಆದೇಶ ಹೊರಡಿಸಿತ್ತು.

ಪುಣೆಯಲ್ಲೂ ಆರ್‌ಸಿಬಿ ಸಂಭ್ರಮಾಚರಣೆ: 40 ಮಂದಿಯ ವಿರುದ್ಧ ಪ್ರಕರಣ ದಾಖಲು

ಪುಣೆ, ಜೂ.6– ಮಹಾರಾಷ್ಟ್ರದ ಪುಣೆಯಲ್ಲೂ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಸಂಭ್ರಮಾಚರಣೆಯನ್ನು ಅದ್ದೂರಿಯಾಗಿ ಮಾಡಲಾಗಿದೆ. ಜೂನ್ 3 ರಂದು ನಡೆದ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಸೋಲಿಸಿ ಆರ್‌ಸಿಬಿ ಟ್ರೋಫಿ ಮುಡಿಗೇರಿಸಿಕೊಳ್ಳುತ್ತಿದ್ದಂತೆಯೇ ಪುಣೆಯ ನಾಮ್ದಾರ್ ಗೋಪಾಲ ಕೃಷ್ಣ ಗೋಖಲೆ ಚೌಕದಲ್ಲಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮಿಸಲಾಗಿದೆ.



ಈ ಹಿನ್ನೆಲೆಯಲ್ಲಿ 40 ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆರ್‌ಸಿಬಿ ಸಂಭ್ರಮಾಚರಣೆ ವೇಳೆಯಲ್ಲಿ ಪಟಾಕಿ ಸಿಡಿಸಿ, ಗದ್ದಲ ಉಂಟುಮಾಡಿದ್ದರಿಂದ ಪ್ರಕರಣ ದಾಖಲಿಸಲಾಗಿದೆ ಎಂದು ಡೆಕ್ಕನ್ ಪೊಲೀಸ್ ಠಾಣೆ ಅಧಿಕಾರಿಗಳು ತಿಳಿಸಿದ್ದಾರೆ.

ಪಟಾಕಿ ಸಿಡಿಸುವ ಮೂಲಕ ಶಾಂತಿಗೆ ಭಂಗ ತಂದ, ಸಾರ್ವಜನಿಕ ವಾಹನಗಳು ಹಾಗೂ ನಾಗರಿಕರಿಗೆ ತೊಂದರೆ ನೀಡಿದ ಆರೋಪದ ಮೇರೆಗೆ ಮಹಾರಾಷ್ಟ್ರ ಪೊಲೀಸ್ ಕಾಯ್ದೆಯ ನಿಬಂಧನೆಗಳಡಿ ಸುಮಾರು 40 ವ್ಯಕ್ತಿಗಳ ಮೇಲೆ ಆರೋಪ ಹೊರಿಸಲಾಗಿದೆ. ಸಂಭ್ರಮಾಚರಣೆಯಿಂದ ವಾಹನ ಸವಾರರಿಗೆ ಅನಾನುಕೂಲವಾಗಿತ್ತು.

ವಿರಾಟ್ ಕೊಹ್ಲಿ ವಿರುದ್ಧವೂ ದೂರು ದಾಖಲು

ಬೆಂಗಳೂರು, ಜೂ.6–ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮದಲ್ಲಿ ಸಂಭವಿಸಿದ ಕಾಲ್ತುಳಿತದಿಂದ 11 ಮಂದಿ ಸಾವನ್ನಪ್ಪಿದ ಘಟನೆಗೆ ಸಂಬಂಧಪಟ್ಟಂತೆ ಆರ್‌ಸಿಬಿ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ವಿರುದ್ಧ ನೈಜ ಹೋರಾಟಗಾರರ ವೇದಿಕೆಯ ಹೆಚ್.ಎಂ.ವೆಂಕಟೇಶ್ ಕಬ್ಬನ್ ಪಾರ್ಕ್ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಈಗಾಗಲೇ ಈ ಪ್ರಕರಣದಲ್ಲಿ ಆರ್‌ಸಿಬಿ, ಡಿಎನ್‌ಎ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಕೆಎಸ್‌ಸಿಎ ವಿರುದ್ಧ ಇದೇ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಇದೀಗ ವಿರಾಟ್ ಕೊಹ್ಲಿ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕೆಂದು ಹೆಚ್.ಎಂ.ವೆಂಕಟೇಶ್ ಪಟ್ಟು ಹಿಡಿದಿದ್ದು, ಪೊಲೀಸರು ಅವರ ದೂರನ್ನು ಸ್ವೀಕರಿಸಿ, ಈಗಾಗಲೇ ದಾಖಲಾಗಿರುವ ಎಫ್‌ಐಆರ್ ಜೊತೆ ಕೊಹ್ಲಿ ವಿರುದ್ಧದ ದೂರನ್ನು ಪರಿಗಣಿಸುವುದಾಗಿ ಹಿಂಬರಹ ನೀಡಿದ್ದಾರೆ.



'ಅರೆಸ್ಟ್ ವಿರಾಟ್ ಕೊಹ್ಲಿ' ಅಭಿಯಾನ: ವಿರಾಟ್ ಕೊಹ್ಲಿ ಮತ್ತು ಅವರ ಪತ್ನಿ ಅನುಷ್ಕಾ ಶರ್ಮಾ ಲಂಡನ್‌ಗೆ ತೆರಳಿದ್ದಾರೆ ಎಂಬ ವದಂತಿ ಹಬ್ಬಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅರೆಸ್ಟ್ ವಿರಾಟ್ ಕೊಹ್ಲಿ ಅಭಿಯಾನ ಪ್ರಾರಂಭವಾಗಿದೆ. ಇಂತಹ ದುಃಖದ ಸಮಯದಲ್ಲಿ ಈ ಜೋಡಿ ವಿದೇಶ ಪ್ರವಾಸ ಕೈಗೊಳ್ಳಲು ಹೇಗೆ ಸಾಧ್ಯ ಎಂದು ಖಾರವಾಗಿ ಪ್ರಶ್ನಿಸಲಾಗುತ್ತಿದೆ. ವಿಜಯೋತ್ಸವದ ವೇಳೆ 11 ಮಂದಿ ಪ್ರಾಣ ಕಳೆದುಕೊಂಡಿದ್ದರೂ, ವಿರಾಟ್ ಕೊಹ್ಲಿ ಮತ್ತು ತಮಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಲಂಡನ್ ಪ್ರವಾಸ ಕೈಗೊಂಡಿದ್ದಾರೆ. ಮೃತರಿಗೆ ಸಂತಾಪ ಸೂಚಿಸಿ ಆರ್‌ಸಿಬಿ ಹಾಕಿರುವ ಪೋಸ್ಟ್ ಅನ್ನೇ ಕೊಹ್ಲಿ ರೀ–ಪೋಸ್ಟ್ ಮಾಡಿದ್ದಾರೆಯೇ ಹೊರತು ಪ್ರತ್ಯೇಕವಾಗಿ ಪೋಸ್ಟ್ ಹಾಕಿಲ್ಲ ಎಂದು ಸಾಮಾಜಿಕ ಜಾಲ ತಾಣದಲ್ಲಿ ಆಕ್ರೋಶ ವ್ಯಕ್ತವಾಗಿದೆ.

'ಕಾಶ್ಮೀರದಿಂದ ಕನ್ಯಾಕುಮಾರಿ' ವಾಸ್ತವ ರೂಪಕ್ಕೆ ಬಂದಿದೆ
ವಿಶ್ವದ ಅತೀ ಎತ್ತರದ ರೈಲು ಸೇತುವೆ ಉದ್ಘಾಟಿಸಿದ ಪ್ರಧಾನಿ ಮೋದಿ

ಶ್ರೀನಗರ, ಜೂ.6– 'ಕಾಶ್ಮೀರದಿಂದ ಕನ್ಯಾಕುಮಾರಿ'ಯವರೆಗೆ ಎಂಬ ಮಾತು ರೈಲು ಸಂಪರ್ಕ ಜಾಲದಲ್ಲಿ ವಾಸ್ತವವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಜಮ್ಮು ಕಾಶ್ಮೀರದಲ್ಲಿ ಚಿನಾಬ್ ನದಿಗೆ ಅಡ್ಡಲಾಗಿ ನಿರ್ಮಿಸಲಾದ ವಿಶ್ವದ ಅತೀ ಎತ್ತರದ ರೈಲ್ವೆ ಸೇತುವೆಯನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಜಮ್ಮು–ಕಾಶ್ಮೀರದ ಲಕ್ಷಾಂತರ ಜನರ ಕನಸು ನನಸಾಗಿದೆ. ಒಳ್ಳೆಯ ಕೆಲಸಗಳು ನನಗೆ ಪೂರ್ಣಗೊಳಿಸಲು ಮಾತ್ರ ಉಳಿದಿದೆ. ನಮ್ಮ ಅಧಿಕಾರಾವಧಿಯಲ್ಲಿ ಈ ಯೋಜನೆ ವೇಗವನ್ನು ಪಡೆದುಕೊಂಡಿದ್ದು ನಮ್ಮ ಸರ್ಕಾರದ ಅದೃಷ್ಟ, ಅದನ್ನು ಪೂರ್ಣಗೊಳಿಸಿದ್ದೇವೆ. ಇದು ಸವಾಲಿನ ಯೋಜನೆಯಾಗಿತ್ತು. ನಮ್ಮ ಸರ್ಕಾರ ಯಾವಾಗಲೂ ಸವಾಲನ್ನು ಮಾರ್ಗವಾಗಿ ಬದಲಾಯಿಸುತ್ತದೆ. ಜಮ್ಮು– ಕಾಶ್ಮೀರದಲ್ಲಿ ನಿರ್ಮಿಸಲಾಗುತ್ತಿರುವ ಎಲ್ಲಾ ಹವಾಮಾನ ಯೋಜನೆಗಳು ಇದಕ್ಕೆ ಉದಾಹರಣೆಯಾಗಿದೆ ಎಂದು ಹೇಳಿದರು.



ಚಿನಾಬ್ ನದಿಗೆ ಅಡ್ಡಲಾಗಿ ನಿರ್ಮಿಸಲಾದ ರೈಲ್ವೆ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.

ನಂತರ ಪ್ರಧಾನಿ ತ್ರಿವರ್ಣ ಧ್ವಜವನ್ನು ಹಿಡಿದು ಸೇತುವೆಯ ಮೇಲೆ ನಡೆದರು. ಚಿನಾಬ್ ಸೇತುವೆಯ ಉದ್ಘಾಟನೆ ನಂತರ ಮೋದಿ ಅವರು ಅಂಜಿ ನದಿಯ ಮೇಲೆ ಭಾರತದ ಮೊದಲ ಕೇಬಲ್–ಸ್ಟೇಡ್ ರೈಲು ಸೇತುವೆಯನ್ನು ಉದ್ಘಾಟಿಸಿದರು. ಉದ್ಘಾಟನೆಗೆ ಮೊದಲು ಮೋದಿ ರೈಲು ಎಂಜಿನ್ ಕೋಚ್‌ನಲ್ಲಿ ಪ್ರಯಾಣಿಸಿದರು.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಉದ್ಘಾಟನೆಯ ನಂತರ ಕತ್ರಾದಲ್ಲಿ ನಡೆದ ರ್‍ಯಾಲಿಯಲ್ಲಿ, ಬೃಹತ್ ಮೂಲಸೌಕರ್ಯ ಯೋಜನೆಗಳ ಉದ್ಘಾಟನೆಯು ಜಮ್ಮು– ಕಾಶ್ಮೀರದ ಅಭಿವೃದ್ಧಿ ಪ್ರಯಾಣದಲ್ಲಿ ಒಂದು ಮಹತ್ವದ ತಿರುವು ಎಂದು ಮೋದಿ ಹೇಳಿದರು. ಅತ್ಯಾಧುನಿಕ ಚಿನಾಬ್ ಸೇತುವೆ ಜಮ್ಮು ಮತ್ತು ಶ್ರೀನಗರ ನಡುವಿನ ಸಂಪರ್ಕವನ್ನು ಸುಧಾರಿಸುತ್ತದೆ ಎಂದು ಅವರು ಹೇಳಿದರು.

ಉಧಂಪುರ–ಶ್ರೀನಗರ–ಬಾರಾಮುಲ್ಲಾ ರೈಲು ಮಾರ್ಗವು ಹೊಸ, ಸಬಲೀಕರಣಗೊಂಡ ಜಮ್ಮು–ಕಾಶ್ಮೀರದ ಸಂಕೇತವಾಗಿದೆ. ಭಾರತದ ಬೆಳೆಯುತ್ತಿರುವ ಶಕ್ತಿಯ ಪ್ರತಿಧ್ವನಿಸುವ ಘೋಷಣೆಯಾಗಿದೆ. ಚಿನಾಬ್ ಮತ್ತು ಅಂಜಿ ಸೇತುವೆಗಳು ಜಮ್ಮು–ಕಾಶ್ಮೀರದ ಸಮೃದ್ಧಿಯ ದ್ವಾರಗಳಾಗಿ ಕಾರ್ಯನಿರ್ವಹಿಸುತ್ತವೆ ಎಂದರು.

ನದಿಯಿಂದ 359 ಮೀಟರ್ ಎತ್ತರದಲ್ಲಿರುವ ವಾಸ್ತುಶಿಲ್ಪದ ಅದ್ಭುತ ಚಿನಾಬ್ ರೈಲು ಸೇತುವೆಯು ವಿಶ್ವದ ಅತಿ ಎತ್ತರದ ರೈಲ್ವೆ ಕಮಾನು ಸೇತುವೆಯಾಗಿದೆ. ಇದು ಭೂಕಂಪ ಮತ್ತು ಪ್ರಬಲ ಗಾಳಿಯ ಪರಿಸ್ಥಿತಿಗಳನ್ನು ತಡೆದುಕೊಳ್ಳುವಂತೆ ವಿನ್ಯಾಸಗೊಳಿಸಲಾದ 1,315 ಮೀಟರ್ ಉದ್ದದ ಉಕ್ಕಿನ ಕಮಾನು ಸೇತುವೆಯಾಗಿದೆ. ಸೇತುವೆಯ ಮೇಲೆ ಚಲಿಸುವ ವಂದೇ ಭಾರತ್ ರೈಲು ಮೂಲಕ, ಕತ್ರಾ ಮತ್ತು ಶ್ರೀನಗರ ನಡುವೆ ಪ್ರಯಾಣಿಸಲು ಕೇವಲ 3 ಗಂಟೆಗಳು ಬೇಕಾಗುತ್ತದೆ, ಇದು ಈಗಿನ ಪ್ರಯಾಣದ ಸಮಯವನ್ನು 2–3 ಗಂಟೆಗಳಷ್ಟು ಕಡಿಮೆ ಮಾಡುತ್ತದೆ.

ಬ್ರಿಟಿಷರು ಮಾಡಲು ಸಾಧ್ಯವಾಗದ್ದನ್ನ ನೀವು ಪೂರ್ಣಗೊಳಿಸಿದ್ದೀರಿ...!

ಶ್ರೀನಗರ, ಜೂ.6– ಕತ್ರಾದಿಂದ ಶ್ರೀನಗರಕ್ಕೆ ಮೊದಲ ವಂದೇ ಭಾರತ್ ರೈಲಿಗೆ ಪ್ರಧಾನಿ ಚಾಲನೆ ನೀಡಿದ ನಂತರ ಕತ್ರಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರೊಂದಿಗೆ ಸಂವಾದ ನಡೆಸಿದರು.



ಒಮರ್

ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮಾತನಾಡುತ್ತಾ, ಈ ರೈಲು ಸೇವೆಯ ಬಗ್ಗೆ ಅನೇಕ ಜನರು ಕನಸು ಕಂಡಿದ್ದರು. ಬ್ರಿಟಿಷರು ಮಾಡಲು ಸಾಧ್ಯವಾಗದ್ದನ್ನು ನೀವು ಪೂರ್ಣಗೊಳಿಸಿದ್ದೀರಿ. ಕಾಶ್ಮೀರ ಕಣಿವೆ ಈಗ ದೇಶದ ಉಳಿದ ಭಾಗಗಳೊಂದಿಗೆ ಸಂಪರ್ಕ ಹೊಂದಿದೆ. ಈ ಸಂದರ್ಭದಲ್ಲಿ ನಾನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಉಲ್ಲೇಖಿಸಿ ಧನ್ಯವಾದ ಹೇಳದಿದ್ದರೆ ಅದು ತಪ್ಪಾಗುತ್ತದೆ. ಈ ಯೋಜನೆಗೆ ಅಡಿಪಾಯ ಹಾಕಿದಾಗ ನಾನು 8 ನೇ ತರಗತಿಯಲ್ಲಿ ಓದುತ್ತಿದ್ದೆ. ಈಗ ನನಗೆ 55 ವರ್ಷ, ಮತ್ತು ಇದನ್ನು ಅಂತಿಮವಾಗಿ ಉದ್ಘಾಟಿಸಲಾಗಿದೆ. ಅಟಲ್ ಬಿಹಾರಿ ವಾಜಪೇಯಿ ಇದಕ್ಕೆ 'ರಾಷ್ಟ್ರೀಯ ಮಹತ್ವದ ಯೋಜನೆ' ಸ್ಥಾನಮಾನವನ್ನು ನೀಡಿದಾಗ ಮತ್ತು ಅದರ ಬಜೆಟ್ ಅನ್ನು ಹೆಚ್ಚಿಸಿದ್ದಕ್ಕಾಗಿ ಇದು ಸಾಧ್ಯವಾಗಿದೆ. ಇದು ಜಮ್ಮು ಮತ್ತು ಕಾಶ್ಮೀರದ ಜನರಿಗೆ ಎಲ್ಲಾ ರೀತಿಯಲ್ಲೂ ಹೆಚ್ಚಿನ ಪ್ರಯೋಜನವನ್ನು ನೀಡುತ್ತದೆ ಎಂದು ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಜಮ್ಮು ರಿಂಗ್ ರಸ್ತೆ, ಶ್ರೀನಗರ ರಿಂಗ್ ರಸ್ತೆ, ದೆಹಲಿ–ಅಮೃತಸರ–ಕತ್ರಾ ಎಕ್ಸ್‌ಪ್ರೆಸ್‌ವೇ, ಜಮ್ಮು–ಶ್ರೀನಗರ ನಾಲ್ಕು ಪಥ ಹೆದ್ದಾರಿ, ಜಮ್ಮು ಮತ್ತು ಶ್ರೀನಗರ ವಿಮಾನ ನಿಲ್ದಾಣಗಳ ವಿಸ್ತರಣೆ ಮತ್ತು ರೈಲ್ವೆ ನೆಟ್‌ವರ್ಕ್ ವಿಸ್ತರಣೆ ಸೇರಿದಂತೆ ಅನೇಕ ಮೂಲಸೌಕರ್ಯ ಯೋಜನೆಗಳು ವೇಗವಾಗಿ ಪೂರ್ಣಗೊಳ್ಳುತ್ತಿವೆ. ಅದು ವಿಕಸಿತ ಜಮ್ಮು ಮತ್ತು ಕಾಶ್ಮೀರ – ವಿಕಸಿತ ಭಾರತ ಎಂಬ ನಮ್ಮ ಗುರಿಯನ್ನು ಸಾಧಿಸಲು ನಾವು ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿದ್ದೇವೆ. ಪ್ರಧಾನಮಂತ್ರಿಯವರೇ, ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಜನರ ಪರವಾಗಿ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಒಮರ್ ಅಬ್ದುಲ್ಲಾ ತಿಳಿಸಿದ್ದಾರೆ.

ಮೈಸೂರು ಮಿತ್ರ ಶನಿವಾರ 7 ಜೂನ್ 2025

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ

ಮಂಡ್ಯದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ



ಮಂಡ್ಯದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಮಂಡ್ಯಜೂ.6–ಆರ್‌ಸಿಬಿ ತಂಡ ಐಪಿಎಲ್ ಕಪ್ ಗೆದ್ದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆಗಾಗಿ ಅಭಿಮಾನಿಗಳು ಸೇರಿದ್ದ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಧಾರುಣವಾಗಿ ಸಾವನ್ನಪ್ಪಿ ಹಲವರು ಗಾಯಗೊಂಡಿರುವ ಪ್ರಕರಣದಲ್ಲಿ ಸರ್ಕಾರದ ಬೇಜವಾಬ್ದಾರಿ ವರ್ತನೆಯೇ ಕಾರಣ ಎಂದು ಆರೋಪಿಸಿ ಜಿಲ್ಲಾ ಬಿಜೆಪಿ ಘಟಕವು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ನೇತೃತ್ವದಲ್ಲಿ ಶುಕ್ರವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ನೂರಾರು ಕಾರ್ಯಕರ್ತರು ಜಮಾವಣೆಗೊಂಡು ರಾಜ್ಯ ಸರ್ಕಾರ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜೀನಾಮೆಗೆ ಆಗ್ರಹಿಸಿದರು.

> ಪೊಲೀಸರನ್ನು ಈ ಪ್ರಕರಣ ಸಂಬಂಧ ಸಸ್ಪೆಂಡ್ ಮಾಡಿರುವುದು ಸರಿಯಲ್ಲ. ಆರ್‌ಸಿಬಿ, ಕೆಎಸ್‌ಸಿಎ ಮೇಲೆ ಕೇಸ್ ಹಾಕಿದರೆ ಏನು ಪ್ರಯೋಜನ? ಈ ಸರ್ಕಾರಕ್ಕೆ ಮಾನ ಮರ್ಯಾದೆ ಇಲ್ಲದಂತಾಗಿದೆ. 50 ವರ್ಷದ ರಾಜಕೀಯ ಅನುಭವ ಇರುವ ಸಿದ್ದರಾಮಯ್ಯ ಹಸಿ ಸುಳ್ಳು ಹೇಳುತ್ತಾರೆ. ಅತ್ತ ಡಿಕೆಶಿ ಮೊಸಳೆಯ ಕಣ್ಣೀರು ಹಾಕುತ್ತಾರೆ. ಆಟಗಾರರನ್ನು ಕರೆ ತರಲು ಡಿಕೆಶಿ ಏನು ವಾಹನ ಚಾಲಕನಾಗಿ ಹೋಗಿದ್ದರೇ? ಸಾವು ನೋವು ಆಗುತ್ತಿದ್ದರೂ ಕಪ್‌ಗೆ ಮುತ್ತಿಕ್ಕುತ್ತಿದ್ದದ್ದು ನಾಚಿಕೇಗೇಡಿನ ಸಂಗತಿ. – ಡಾ.ಸಿ.ಎನ್.ಅಶ್ವತ್ಥ್ ನಾರಾಯಣ.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಡಾ. ಸಿ.ಎನ್.ಅಶ್ವತ್ಥ್ ನಾರಾಯಣ, ಹೆಣದ ಮೇಲೆ ರಾಜಕೀಯ ಮಾಡುವುದು ಕಾಂಗ್ರೆಸ್‌ನ ಸಂಸ್ಕೃತಿಯಾಗಿದೆ. ಸರ್ಕಾರದ ನಿರ್ಲಕ್ಷ್ಯದಿಂದ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಸಾವಾಗಿದೆ. ಈ ಸಾವಿಗೆ ಸಿಎಂ, ಡಿಸಿಎಂ, ಗೃಹ ಸಚಿವರೇ ನೇರ ಕಾರಣ ಎಂದು ಆರೋಪಿಸಿದರು.

ಸರ್ಕಾರದ ಪ್ರಚಾರದ ಗೀಳಿಗಾಗಿ ಜನರು ಬಲಿಯಾಗಿದ್ದಾರೆ. ಇವರು ಆರ್‌ಸಿಬಿಗೆ ಅಭಿನಂದನೆ ಮಾಡಿಲ್ಲ. ಬದಲಾಗಿ ಸಿಎಂ, ಸಚಿವರ ಕುಟುಂಬಕ್ಕೆ ಅಭಿನಂದನೆಯಾಗಿದೆ. 11 ಜನರು ಸಾವನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ. ಇನ್ನೂ ಹಲವರು ನಾಪತ್ತೆಯಾಗಿದ್ದಾರೆ. ಇನ್ನೂ ಎಷ್ಟು ಸತ್ಯವನ್ನು ಇವರು ಮುಚ್ಚಿ ಹಾಕಿದ್ದಾರೆ ಎಂಬುದು ಗೊತ್ತಿಲ್ಲ. ಈ ಬಗ್ಗೆ ಉನ್ನತ ತನಿಖೆ ಮಾಡಬೇಕು. ಕೋರ್ಟ್‌ನಲ್ಲಿ ಸುಮೋಟೋ ಕೇಸ್ ಹಾಕಿಕೊಂಡ ಮೇಲೆ ಸರ್ಕಾರಕ್ಕೆ ವಾಂತಿ ಬೇದಿ ಬಂದಿದೆ ಎಂದು ಲೇವಡಿ ಮಾಡಿದರು.

ಪ್ರಕರಣದಲ್ಲಿ ಎ1 ಸಿದ್ದರಾಮಯ್ಯ, ಎ2 ಡಿ.ಕೆ.ಶಿವಕುಮಾರ್, ಎ3 ಪರವಮೇಶ್ವರ್ ಆಗಬೇಕಿತ್ತು ಮೊದಲು ಇವರುಗಳು ರಾಜೀನಾಮೆ ನೀಡಬೇಕು. ಇದನ್ನು ಬಿಟ್ಟು ಆರ್‌ಸಿಬಿ, ಕೆಎಸ್‌ಸಿಎ ಮೇಲೆ ಕೇಸ್ ಹಾಕಿದ್ದಾರೆ. ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದು ತಪ್ಪು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಹೆಣದ ಮೇಲೆ ರಾಜಕೀಯ ಮಾಡೋದು ಕಾಂಗ್ರೆಸ್ ಸಂಸ್ಕೃತಿಯಾಗಿದೆ. ದೇಶದ ಯುದ್ಧ ಆದಾಗಲೂ ಇದು ಸಣ್ಣ ಯುದ್ಧ ಎನ್ನುತ್ತಾರೆ. ಕುಂಭಮೇಳದ ಗಂಗಾ ನದಿಯಲ್ಲಿ ಮುಳುಗಿದರೆ ಒಳ್ಳೆಯದು ಆಗುತ್ತಾ ಅಂತಾರೆ. ಇದು ಕಾಂಗ್ರೆಸ್‌ನವರ ಮಸ್ಥಿತಿ ಎಂದು ಕಿಡಿಕಾರಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಆಟಗಾರರನ್ನು ಏರ್ಪೋರ್ಟ್‌ಗೆ ಹೋಗಿ ಕರೆದುಕೊಂಡು ಬಂದಿದ್ದಾರೆ ಇವರಿಗೆ ಎಷ್ಟು ಜನರು ಬರ್ತಾರೆ ಅಂತಾ ಗೊತ್ತಿರಲಿಲ್ಲವೇ? ಇವರಿಗೆ ಕ್ರಿಕೆಟ್ ಬಗ್ಗೆ ಆಸಕ್ತಿ ಇದ್ದರೆ ಅದೆಲ್ಲಾ ಗೊತ್ತಾಗುತ್ತಾ ಇರುತ್ತಿತ್ತು. ಈ ಸಲ ಕಪ್ ನಮ್ಮದು ಎನ್ನುವ ಬದಲು ತಪ್ಪು ನಮ್ಮದು ಅಂತಾ ಇದಾರೆ ಇವರು. ಡಿಕೆಶಿ ಕಪ್‌ಗೆ ಮುತ್ತು ಕೊಟ್ಟು ಕಣ್ಣೀರು ಹಾಕುತ್ತಾರೆ. ಅಲ್ಲಿ ಜನರು ಸಾಯುತ್ತಾ ಇದ್ದರೂ ಕಾರ್ಯಕ್ರಮ ಮುಗಿಯುವವರೆಗೂ ಅಲ್ಲಿಗೆ ಹೋಗಲಿಲ್ಲ ಹೆಚ್‌ಎಎಲ್‌ನಿಂದ ಚಿನ್ನಸ್ವಾಮಿ ಕ್ರೀಡಾಂಗಣದವರೆಗೆ ವಿಜಯೋತ್ಸವ ಮೆರವಣಿಗೆ ಮಾಡಬೇಕಾಗಿತ್ತು. ಇವರಿಗೆ ಆರ್‌ಸಿಬಿ ನಾಯಕ ಯಾರು ಅಂತಾ ಗೊತ್ತಿಲ್ಲ. ಇಂತಹ ಮಹಾನ್ ನಾಯಕರು ಒಂದು ವಿಜಯೋತ್ಸವವನ್ನು ಯಶಸ್ವಿಯಾಗಿ ಹೇಗೆ ಮಾಡಲು ಸಾಧ್ಯ? ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಶ್ರೀಧರ್, ಅಶೋಕ್ ಜಯರಾಂ, ಡಾ.ಸಿದ್ದರಾಮಯ್ಯ, ಸಿ.ಟಿ. ಮಂಜುನಾಥ್, ಶಿವಕುಮಾರ್ ಆರಾಧ್ಯ, ವಿವೇಕ್, ವಸಂತ್, ನಾಗಾನಂದ್, ಅರವಿಂದ್, ಸದಾನಂದ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಸಾಧಕರನ್ನು ನೋಡಿ ದೇಶಕ್ಕೆ ಕೊಡುಗೆ ನೀಡಿ



ಸಮಾರಂಭದಲ್ಲಿ ಸಾಧಕರು ಮತ್ತು ಪ್ರತಿಭಾನ್ವಿತರನ್ನು ಸನ್ಮಾನಿಸಲಾಯಿತು.

ಮಂಡ್ಯ: ಭಾರತ ದೇಶದಲ್ಲಿ ಬಹಳಷ್ಟು ಸಾಧಕರಿದ್ದಾರೆ. ವಿದ್ಯಾರ್ಥಿಗಳು ಸಾಧಕರ ಮಾರ್ಗ ಅನುಸರಿಸಿ ದೇಶಕ್ಕೆ ಕೊಡುಗೆ ನೀಡಿ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು. ಶುಕ್ರವಾರ ನಗರದ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸರ್ಕಾರದ ವತಿಯಿಂದ ಎಲ್ಲ ಸಾಧಕರನ್ನು ಗೌರವಿಸಲು ಸಾಧ್ಯವಾಗುವುದಿಲ್ಲ. ಸಂಘ ಸಂಸ್ಥೆಗಳು ಸಾಧಕರನ್ನು ಗುರುತಿಸಿ, ಗೌರವಿಸುತ್ತಿರುವ ಕೆಲಸ ಶ್ಲಾಘನೀಯ ಎಂದರು.

ಕರ್ನಾಟಕ ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಹಾಗೂ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಮಾತನಾಡಿದರು. ಆದಿಚುಂಚನಗಿರಿ ಕ್ಷೇತ್ರದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ, ಅದೇ ರೀತಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರಿಗೆ ಅವರ ತಾಯಿ ಕೆಂಪರಾಜಮ್ಮ ಮತ್ತು ಅವರ ಪತ್ನಿ ಪ್ರತಾಪ ಕುಮಾರ ದೇವಿ ನಿಂತಿದ್ದರು. ಅವರ ತಾಯಿ ಕೆಂಪರಾಜಮ್ಮ ತನ್ನ ಮಗನಿಗೆ ಶಿಕ್ಷಣವನ್ನು ನೀಡಲು ವಿದೇಶದಿಂದ ಶಿಕ್ಷಕರನ್ನು ಕರೆಯಿಸಿ ಶಿಕ್ಷಣ ಕೊಡಿಸಿದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೊಮ್ಮೇರಹಳ್ಳಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪುರುಷೋತ್ತಮಾನಂದನಾಥ ಸ್ವಾಮೀಜಿ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಮಾಜಿ ಉಪ ಮುಖ್ಯಮಂತ್ರಿ ಅಶ್ವಥ್ ನಾರಾಯಣ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳೀಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ನಾಲ್ವಡಿ ಕೃಷ್ಣರಾಜ ಟ್ರಸ್ಟ್‌ನ ಅಧ್ಯಕ್ಷ ವೆಂಕಟೇಶ್, ಮುಖಂಡರಾದ ಬಸವರಾಜು, ವಿನಯ್, ಯೋಗೇಶ್ ಉಪಸ್ಥಿತರಿದ್ದರು.

ದೇಗುಲ ಪ್ರವೇಶ ವಿಚಾರದಲ್ಲಿ ಎರಡು ಸಮುದಾಯಗಳ ನಡುವೆ ಸಂಘರ್ಷ

ಅಧಿಕಾರಿಗಳಿಂದ ಶಾಂತಿ ಸಭೆ, ಕಾರು ಧ್ವಂಸ, ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲು

ಮಂಡ್ಯ, ಜೂ.6– ಗ್ರಾಮದ ದೇವಸ್ಥಾನ ಪ್ರವೇಶದ ವಿಚಾರವಾಗಿ ಎರಡು ಸಮುದಾಯಗಳ ನಡುವೆ ಸಂಘರ್ಷ ನಡೆದು ಒಂದು ಸಮುದಾಯದವರು ಇನ್ನೊಂದು ಸಮುದಾಯದವರಿಗೆ ದೇಗುಲ ಪ್ರವೇಶಕ್ಕೆ ಬಿಡುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ. ಜೊತೆಗೆ ಈ ಬಗ್ಗೆ ಅಧಿಕಾರಿಗಳಿಂದ ಶಾಂತಿ ಸಭೆಯು ಸಹ ನಡೆದಿದ್ದು, ದೇಗುಲ ಪ್ರವೇಶ ವಿಚಾರವಾಗಿ ಘರ್ಷಣೆ ನಡೆದು ಓರ್ವನ ಕಾರು ಜಖಂಗೊಂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿರುವ ಘಟನೆ ತಾಲೂಕಿನ ಎಲೆಚಾಕನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮಾರಮ್ಮ ದೇವಾಲಯದಲ್ಲಿ ಒಂದು ಸಮುದಾಯದವರು ಪೂಜೆ ಸಲ್ಲಿಸಿದರು ಎಂಬ ಕಾರಣಕ್ಕೆ ಗ್ರಾಮದ ಇನ್ನೊಂದು ಸಮುದಾಯದವರು ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆಂಬ ಆರೋಪ ಕೇಳಿ ಬಂದಿದ್ದು, ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಶಿವಕುಮಾರ್ ಬಿರಾದರ್ ನೇತೃತ್ವದಲ್ಲಿ ನಡೆದ ಗ್ರಾಮದ ಮುಖಂಡರ ಶಾಂತಿಸಭೆ ಫಲ ನೀಡಿಲ್ಲ.

ಊರಿನ ಗ್ರಾಮ ಠಾಣಾ ಜಾಗದಲ್ಲಿರುವ ಮಾರಮ್ಮನ ದೇವಾಲಯಕ್ಕೆ ನಮಗೂ





ಪ್ರವೇಶ ನೀಡಬೇಕೆಂದು ಒಂದು ಸಮುದಾಯದವರು ಒತ್ತಾಯ ಮಾಡಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ಅವರಿಗೆ ಪ್ರವೇಶ ನೀಡುವುದಿಲ್ಲ ಎಂದು ಇನ್ನೊಂದು ಸಮುದಾಯದವರು ಪಟ್ಟು ಹಿಡಿದಿದ್ದಾರೆ. ಸರ್ಕಾರಿ ಅಧಿಕಾರಿಗಳ ಸಮ್ಮುಖದಲ್ಲಿಯೇ ತಮ್ಮನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆಂದು ಮುಖಂಡರು ಆರೋಪಿಸಿದ್ದು, ಗ್ರಾಮದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದರೂ, ವಾತಾವರಣ ಬಿಗುವಿನಿಂದ ಕೂಡಿದೆ.

ಈ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಬೂದಿ ಮುಚ್ಚಿದ ಕೆಂಡದಂತಹ ವಾತಾವರಣ ನಿರ್ಮಾಣವಾಗಿದ್ದು, ಮತ್ತೆ ಎರಡು ಸಮುದಾಯಗಳ ನಡುವೆ ಸಂಘರ್ಷ ನಡೆಯುವ ಆತಂಕ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದಾರೆ. ಈ ನಡುವೆ ಗ್ರಾಮದಲ್ಲಿ ವಾತಾವರಣ ಹದಗೆಟ್ಟಿರುವುದರಿಂದ ಕಳೆದ ಜೂ.3ರ ಮಧ್ಯರಾತ್ರಿ 12.30 ಸಂದರ್ಭದಲ್ಲಿ ಒಂದು ಸಮುದಾಯದ ವಿಜಯಕುಮಾರ್ ಬಿನ್ ನಟರಾಜ್ ಎಂಬಾತನ ಕಾರಿನ ಗಾಜನ್ನು ಹೊಡೆದು ಹಾಕಿದ್ದು, ಈ ಸಂಬಂಧ ದಲಿತ ಯುವಕ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ದೂರಿನ ಆಧಾರದ ಮೇಲೆ ಶಿವಲಿಂಗ ಬಿನ್ ಕರಿಗೌಡ ಅಲಿಯಾಸ್ ಪಾಪು, ದಿನೇಶ್ ಬಿನ್ ಮಾದೇಗೌಡ, ಜನಾರ್ದನ ಬಿನ್ ತಿಮ್ಮೇಗೌಡ, ಚೇತನ್ ಕುಮಾರ್ ಬಿನ್ ಪುಟ್ಟಸ್ವಾಮಿ, ರೋಪೇಶ ಬಿನ್ ಚಿಕ್ಕಣ್ಣ ಹಾಗೂ ಮನು ಬಿನ್ ಮಾದೇಗೌಡ ಸೇರಿದಂತೆ ಇತರರ ಮೇಲೆ ಎಫ್‌ಐಆರ್ ದಾಖಲಾಗಿದೆ.

ಮಾಹಿತಿ ಕೊಡುವಲ್ಲಿ ಪೊಲೀಸ್ ಇಲಾಖೆ ವಿಫಲ

ಮಂಡ್ಯ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ಸರ್ಕಾರಕ್ಕೆ ಕೆಲವು ಮಾಹಿತಿ ಕೊಡುವುದರಲ್ಲಿ ವಿಫಲವಾಗಿದೆ ಎಂದು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಕ್ಯಾಬಿನೆಟ್‌ನಲ್ಲಿ ಸುದೀರ್ಘ ಚರ್ಚೆ ನಂತರ ಅಮಾನತು ತೀರ್ಮಾನ ಕೈಗೊಂಡಿದ್ದು, ಪೊಲೀಸರು ಕೆಟ್ಟವರಲ್ಲ, ಈ ಘಟನೆ ಸ್ವಲ್ಪ ಎಲ್ಲರಿಗೂ ನೋವು ತಂದಿದೆ. ಜೊತೆಗೆ ಅಮಾನತ್ತೇ ಅಂತಿಮವಲ್ಲ, ಹಾಗಂತ ಯಾರನ್ನೂ ಸರಿ ಎನ್ನುವ ಪ್ರಶ್ನೆಯೂ ಇಲ್ಲ ಎಂದು ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಇಂತಹ ಸಾವು–ನೋವಲ್ಲೂ ರಾಜಕಾರಣ ಮಾಡುವವರಿಗೆ ಏನು ಹೇಳಲು ಆಗುತ್ತದೆ. ದೇವರು ಅವರಿಗೆ ಒಳ್ಳೆ ಬುದ್ದಿ ಕೊಡಬೇಕಷ್ಟೇ. ಪೊಲೀಸ್ ಇಲಾಖೆ ಜನರನ್ನು ನಿಯಂತ್ರಣ ಮಾಡಬೇಕಿತ್ತು ಸರ್ಕಾರ ಪೊಲೀಸ್ ಇಲಾಖೆಗೆ ಜವಾಬ್ದಾರಿ ಕೊಡುತ್ತದೆ ಆದರೆ ಅವರ ವಿಫಲತೆ ಇದ್ದದ್ದರಿಂದ ಅಮಾನತು ಮಾಡಲಾಗಿದೆ ಎಂದು ಅಮಾನತು ವಿಚಾರವನ್ನು ಸಮರ್ಥಿಸಿಕೊಂಡರು.

ರಾಗಿ ತೆನೆ ಒಕ್ಕಣೆ ವೇಳೆ ದುರಂತ

ಮದ್ದೂರು ಬಳಿ ಕೈ ಕಟ್ಟಾಗಿ ರೈತ ಸಾವು

ಮದ್ದೂರು: ರಾಗಿ ತೆನೆ ಒಕ್ಕಣೆ ಮಾಡುವ ಸಂದರ್ಭದಲ್ಲಿ ಮಿಷನ್‌ಗೆ ಕೈ ಕೊಟ್ಟು ತೀವ್ರವಾಗಿ ಗಾಯಗೊಂಡಿದ್ದ ರೈತ ಚಿಕಿತ್ಸೆಗೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲೂಕಿನ ಚನ್ನೇಗೌಡನದೊಡ್ಡಿಯಲ್ಲಿ ಶುಕ್ರವಾರ ಸಂಭವಿಸಿದೆ.



ಚನ್ನೇಗೌಡನದೊಡ್ಡಿ ನಿವಾಸಿ ರೈತ ನಾಗೇಶ್(50) ಮೃತ ದುರ್ದೈವಿ. ಇವರು ಗುರುವಾರ ಮಧ್ಯಾಹ್ನ ಜಮೀನಿನ ಬಳಿ ರಾಗಿ ತೆನೆಯನ್ನು ಮಿಷನ್‌ನಲ್ಲಿ ಒಕ್ಕಣೆ ಮಾಡುವ ಸಂದರ್ಭದಲ್ಲಿ ತೆನೆ ಜೊತೆ ಚೀಲ ಹೋದಾಗ ಚೀಲ ಹಿಡಿದುಕೊಳ್ಳಲು ಹೋಗಿ ಕೈ ಸಿಕ್ಕಿ ಹಾಕಿಕೊಂಡಿತ್ತು. ಇದರಿಂದ ಕೈ ಕಟ್ಟಾಗಿ ಗಾಯಗೊಂಡ ಹಿನ್ನೆಲೆಯಲ್ಲಿ ಪಟ್ಟಣದ ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆ, ಮಂಡ್ಯದ ಜಿಲ್ಲಾಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು, ಆದರೆ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಸೂಕ್ತ ಪರಿಹಾರ ನೀಡಲು ಮನವಿ: ರೈತ ನಾಗೇಶ್ ಮೃತ ಪಟ್ಟಿರುವುದರಿಂದ ಸರ್ಕಾರ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಬೇಕೆಂದು ಕುಟುಂಬ ವರ್ಗದವರು ಮನವಿ ಮಾಡಿದ್ದಾರೆ. ಮೃತರ ಅಂತ್ಯಕ್ರಿಯೆ ಚನ್ನೇಗೌಡನದೊಡ್ಡಿ ಶುಕ್ರವಾರ ಸಂಜೆ ನೆರವೇರಿತು.

ಒಂದನೇ ಪುಟದಿಂದ

ಸಿಎಂ, ಡಿಸಿಎಂ ಕಿತ್ತಾಕಲಿ...

ಮುಖ್ಯಮಂತ್ರಿ ಸಿದ್ದರಾಮಯ್ಯ ಜನಾರ್ದನ ಹೋಟೆಲ್‌ಗೆ ತೆರಳಿ ಮೊಮ್ಮಗನ ಜೊತೆ ಮಸಾಲೆ ದೋಸೆ ತಿನ್ನುತ್ತಿದ್ದರು.

ನರಳಾಟ, ಚೀರಾಟ ಇಡೀ ದೇಶದಲ್ಲಿ ಪ್ರತಿಧ್ವನಿಸುತ್ತಿದ್ದರೂ, ಇದರ ಪರಿವೆಯೇ ಇವರಿಗೆ ಇರಲಿಲ್ಲ. ಇದು ನಿಮ್ಮ ಮುಖ್ಯಮಂತ್ರಿ ಕಾರ್ಯವೈಖರಿ ಎಂದರು. ಸಂಭ್ರಮಾಚರಣೆ ಮತ್ತು ರೋಡ್ ಶೋ ನಡೆಸಲು ಪೊಲೀಸ್ ಇಲಾಖೆ ಅವಕಾಶ ಸಾಧ್ಯವಿಲ್ಲ ಎಂಬುದಾಗಿ ಕ್ರಿಕೆಟ್ ಸಂಸ್ಥೆ ಮತ್ತು ಸರ್ಕಾರಕ್ಕೆ ತಿಳಿಸಿದ್ದರೂ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರತಿಷ್ಠೆಗಾಗಿ ವಿಜಯೋತ್ಸವ ನಡೆಸಿ ಅಮಾಯಕರ ಬಲಿ ಪಡೆದರು.

ಸ್ವತಃ ಪೊಲೀಸ್ ಕಮಿಷನರ್ ಅವರೇ ಕೆಎಸ್‌ಸಿಎ ಮತ್ತು ವಿಧಾನಸೌಧದ ಬಳಿ ಸಂಭ್ರಮಾಚರಣೆಗೆ ಅವಕಾಶ ಇಲ್ಲ ಎಂಬುದಾಗಿ ನೇರವಾಗಿ ಮುಖ್ಯಮಂತ್ರಿ ಅವರಿಗೆ ಹೇಳಿದ್ದಾರೆ. ಆದರೆ, ವಿಧಾನ ಪರಿಷತ್ ಸದಸ್ಯ ಹಾಗೂ ಮುಖ್ಯಮಂತ್ರಿ ಅವರ ಜೊತೆ ಸದಾ 24 ಗಂಟೆ ಅಂಟಿಕೊಂಡೇ ಇರುವ ಗೋವಿಂದ ರಾಜು ಪಟ್ಟು ಹಿಡಿದು, ಸಿದ್ದರಾಮಯ್ಯ ಅವರ ದಿಕ್ಕುತಪ್ಪಿಸಿ, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಮಾರಂಭ ನಡೆಸಿದರು. ಕೆಎಸ್‌ಸಿಎ ಬಳಿ ಮಧ್ಯಾಹ್ನ 3.10ಕ್ಕೆ ಒಬ್ಬ ವ್ಯಕ್ತಿ ಕಾಲ್ತುಳಿತಕ್ಕೆ ಸಿಲುಕಿ ಪ್ರಾಣ ಕಳೆದುಕೊಂಡಿದ್ದರು. ಅದರ ಮಾಹಿತಿಯನ್ನು ಸರ್ಕಾರಕ್ಕೆ ತಲುಪಿಸಲಾಯಿತಾದರೂ, ಅದನ್ನೂ ಕಡೆಗಣಿಸಿ ಮೆಟ್ಟಿಲುಗಳ ಮೇಲೆ ಸಮಾರಂಭ ನಡೆಸಿದರು. ವಿಜಯೋತ್ಸವ ಸಾಧ್ಯವಿಲ್ಲ ಎಂಬುದಾಗಿ ಸರ್ಕಾರಕ್ಕೆ ಸಲಹೆ ನೀಡಿದ್ದ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರನ್ನು ಸಂಪುಟ ಸಭೆಯಲ್ಲಿ ಪಟ್ಟು ಹಿಡಿದು ಅಮಾನತು ಮಾಡಿಸಿದರು. ಇದರಲ್ಲಿ ಗೋವಿಂದ ರಾಜು ಪಾತ್ರವಿದೆ.

ರಾಜ್ಯ ಹೈಕೋರ್ಟ್ ಚಾಟಿ ಬೀಸುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿ, ಏನು ಮಾಡಬೇಕೆಂದು ತೋಚದೆ, ಮಾಜಿಸ್ಟ್ರೇಟ್‌ರಿಂದ ವಿಚಾರಣೆ, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ಅಲ್ಲದೆ, ಸಿಐಡಿ ತನಿಖೆಗೂ ಆದೇಶ ಮಾಡಿದರು.

ಅಲ್ಲದೆ, ತಮ್ಮ ತಪ್ಪು ಮುಚ್ಚಿಕೊಳ್ಳಲು ಅಮಾಯಕ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದಿರಿ. ಈಗ ಮೂರರಲ್ಲಿ ಯಾವ ತನಿಖೆ ನಡೆಸಿ ಕ್ರಮಕೈಗೊಳ್ಳುತ್ತೀರಿ ಎಂದು ಪ್ರಶ್ನಿಸಿದರು.

ಅಧಿಕಾರಿಗಳ ಹರಕೆಯ ಕುರಿ ಮಾಡಿದ್ರು

ಡಿ.ಕೆ.ಶಿವಕುಮಾರ್ ಆರೋಪಿ ನಂಬರ್ 2 ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆರೋಪಿ ನಂಬರ್ 3 ಎಂದರು.

ರಾಜ್ಯ ಹೈಕೋರ್ಟ್ ಸ್ವಯಂಪ್ರೇರಿತ ಮೊಕದ್ದಮೆ ದಾಖಲಿಸಿಕೊಂಡ ನಂತರ ಎಚ್ಚೆತ್ತುಕೊಂಡ ಸರ್ಕಾರ, ಪೊಲೀಸ್ ಅಧಿಕಾರಿಗಳನ್ನು ಹರಕೆಯ ಕುರಿ ಮಾಡಿದೆ. ಮುಖ್ಯಮಂತ್ರಿ ರಾತ್ರಿ ಪತ್ರಿಕಾಗೋಷ್ಠಿ ನಡೆಸಿ, ಬೆಂಗಳೂರು ಪೊಲೀಸ್ ಕಮಿಷನರ್ ಸೇರಿದಂತೆ ಐವರು ಅಧಿಕಾರಿಗಳನ್ನು ಅಮಾನತು ಮಾಡುವ ಮೂಲಕ ದುರ್ಘಟನೆಗೆ ರಾಜ್ಯ ಸರ್ಕಾರದಿಂದ ತಪ್ಪಾಗಿದೆ ಎಂಬುದನ್ನು ಒಪ್ಪಿಕೊಂಡಂತಾಗಿದೆ

ಸಂಭ್ರಮಾಚರಣೆ ಸಮಾರಂಭಕ್ಕೆ 30ರಿಂದ 40 ಸಾವಿರ ಜನರು ಬರುವ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ 2ರಿಂದ 3 ಲಕ್ಷ ಜನರನ್ನು ನಿರೀಕ್ಷೆ ಮಾಡಿರಲಿಲ್ಲ ಎನ್ನುವ ಮೂಲಕ ಬೇಹುಗಾರಿಕಾ ದಳದ ವೈಫಲ್ಯವನ್ನೂ ಸ್ವತಃ ಮುಖ್ಯಮಂತ್ರಿ ಒಪ್ಪಿಕೊಂಡಿದ್ದಾರೆ.

ಐಪಿಎಲ್ ಫೈನಲ್ ಪಂದ್ಯದಲ್ಲಿ ಗೆದ್ದು ಬೀಗಿದ ಹೆಮ್ಮೆಯ ಆರ್‌ಸಿಬಿ ತಂಡಕ್ಕೆ ಅಭಿನಂದನೆ, ರಾಜ್ಯ ಹೆಮ್ಮೆ ಪಡುವ ಕೆಲಸವನ್ನು ಆರ್‌ಸಿಬಿ ತಂಡ ಮಾಡಿದೆ. ಇವರನ್ನು ಸಂಜೆ 4 ಗಂಟೆಗೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಅಭಿನಂದಿಸಲಿದ್ದೇವೆ. ಈ ಐತಿಹಾಸಿಕ ಕ್ಷಣದಲ್ಲಿ ನೀವೂ ಭಾಗಿಯಾಗಿ ಎಂದು ಸ್ವತಃ ಮುಖ್ಯಮಂತ್ರಿಗಳೇ ಸಾಮಾಜಿಕ ಜಾಲತಾಣದ ಮೂಲಕ ಕರೆ ಕೊಟ್ಟಿದ್ದರು. ಐಪಿಎಲ್ ಫೈನಲ್ ಪಂದ್ಯಕ್ಕೆ ಮೊದಲೇ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಡಿಎನ್‌ಎ ಏಜೆನ್ಸಿ ಕಡೆಯಿಂದ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಅನುಮತಿಗೆ ಹೋಗಿದ್ದಾಗ ಲಕ್ಷಗಟ್ಟಲೆ ಅಭಿಮಾನಿಗಳು ಬರುವ ಕಾರಣ ನಾಳೆಯೇ ಸಂಭ್ರಮಾಚರಣೆಗೆ ಅನುಮತಿ ಕೊಡಲಾಗದು ಎಂಬುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದರು.

ಸಂಭ್ರಮಾಚರಣೆಗೆ ಪೊಲೀಸ್ ಇಲಾಖೆ ಅನುಮತಿ ಕೊಟ್ಟಿರಲಿಲ್ಲ, ವಿಧಾನಸೌಧದ ಬಳಿ ಸಮಾರಂಭ ನಡೆಸಲು ರಾಜ್ಯ ಸರ್ಕಾರಕ್ಕೆ ಯಾರು ಅನುಮತಿ ಕೊಟ್ಟರು. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅನುಮತಿ ಕೊಟ್ಟಿರಲಿಲ್ಲ, ಕಾನೂನುಬಾಹಿರ ಕಾರ್ಯಕ್ರಮ ನಡೆದಿದೆ ಎಂಬುದಾಗಿ ಎಫ್‌ಐಆರ್ ಮಾಡಲಾಗಿದೆ, ಅನುಮತಿ ಇಲ್ಲದಿದ್ದರೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿನ್ನಸ್ವಾಮಿ ಸ್ಟೇಡಿಯಂಗೆ ತೆರಳಿ ಸಂಭ್ರಮಾಚರಣೆಯಲ್ಲಿ ಭಾಗವಹಿಸಿ, ಕಪ್ ಹಿಡಿದು ಮುತ್ತಿಕ್ಕುವ ಕೆಲಸ ಹೇಗೆ ಮಾಡಿದರು ಎಂದರು. ವಿಜಯೋತ್ಸವ ಸರ್ಕಾರಕ್ಕೆ ಏಕೆ ಬೇಕಿತ್ತು ಎಂಬುದಾಗಿ ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ ಪ್ರಶ್ನಿಸಿದ್ದಾರೆ, ಆರ್‌ಸಿಬಿ ಗೆಲುವು ಸಾಧಿಸಿದೆ, ಅದಕ್ಕೆ ಸರ್ಕಾರದ ಸಂಭ್ರಮಾಚರಣೆ ಏಕೆ ಎಂದು ಪ್ರಶ್ನೆ ಮಾಡಿದ್ದಾರೆ ಎಂದರು.

ಬಿಜೆಪಿಯದು ಜನಹಿತ ರಾಜಕಾರಣ: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ರಾಜ್ಯದ ಜನರ ಹಿತಕ್ಕಾಗಿ ಬಿಜೆಪಿ ರಾಜಕೀಯ ಮಾಡುತ್ತದೆ.

ಕ್ರಿಕೆಟ್ ಬಗ್ಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಎಬಿಸಿಡಿನೂ ಗೊತ್ತಿಲ್ಲ. ಟ್ರೋಫಿ ಆಟಗಾರರ ಕೈಯ್ಯಲ್ಲಿ ಇರಲಿಲ್ಲ, ಇವರ ಕೈಯ್ಯಲ್ಲೇ ಇತ್ತು. ವರ್ಷಾನುಗಟ್ಟಲೇ ತಯಾರಿ ಮಾಡಿ ಆಟ ಆಡಿದ್ದ ಆಟಗಾರರು ಬೇಜಾರಾಗಿ ಹೊರಟು ಹೋದರು, ವಿರಾಟ್ ಕೊಹ್ಲಿ, ಆರ್‌ಸಿಬಿ ತಂಡದ್ದು ಇದರಲ್ಲಿ ತಪ್ಪಿಲ್ಲ ಎಂದರು.

ಮುಂಬರುವ ಭಾರತ–ಇಂಗ್ಲೆಂಡ್ ಸರಣಿಗೆ ತೆಂಡೂಲ್ಕರ್– ಆಂಡರ್ಸನ್ ಟ್ರೋಫಿ ಹೆಸರು

ಬೆಂಗಳೂರು, ಜೂ.6– ಭಾರತ ಮತ್ತು ಇಂಗ್ಲೆಂಡ್ ನಡುವೆ ಜೂ.20ರಿಂದ ಆರಂಭವಾಗುವ ಟೆಸ್ಟ್ ಸರಣಿಗೆ ಹೊಸ ಟ್ರೋಫಿ ನೀಡಲಾಗುತ್ತಿದ್ದು, ಇದಕ್ಕೆ ಸಚಿನ್ ತೆಂಡೂಲ್ಕರ್– ಜೇಮ್ಸ್ ಆಂಡರ್ಸನ್ ಟ್ರೋಫಿ ಎಂದು ಹೆಸರಿಡಲಾಗಿದೆ.

ಇದೇ ತಿಂಗಳ ಜೂ.20ರಂದು ಇಂಗ್ಲೆಂಡ್‌ನ ಹೆಡಿಂಗ್ಲೆಯಲ್ಲಿ ಮೊದಲ ಟೆಸ್ಟ್ ಆರಂಭವಾಗುತ್ತಿದ್ದು, ಅದಕ್ಕೂ ಮೊದಲು ಮೊದಲು ಟ್ರೋಫಿ ಅನಾವರಣ ನಡೆಯಲಿದೆ ಎಂದು ಬಿಬಿಸಿ ವರದಿ ಮಾಡಿದೆ. ಆದರೆ ಈ ಬಗ್ಗೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಬೋರ್ಡ್ (ಇಸಿಬಿ) ಪ್ರತಿಕ್ರಿಯೆ



ನೀಡಲು ನಿರಾಕರಿಸಿದೆ ಎನ್ನಲಾಗಿದೆ.

ಈ ಮೊದಲು ಭಾರತ ಮತ್ತು ಇಂಗ್ಲೆಂಡ್ ನಡುವಣ ಇಂಗ್ಲೆಂಡ್‌ನಲ್ಲಿ ನಡೆಯುತ್ತಿದ್ದ ಟೆಸ್ಟ್ ಸರಣಿಗೆ ಪಟೌಡಿ ಟ್ರೋಫಿ ಎಂಬ ಹೆಸರಿತ್ತು ಭಾರತ ತಂಡಕ್ಕೆ ಆಡಿದ್ದ ಇಫ್ತಿಕಾರ್ ಅಲಿ ಖಾನ್ ಪಟೌಡಿ ಮತ್ತು ಅವರ ಪುತ್ರ ಮನ್ಸೂರ್ ಅಲಿ ಖಾನ್ ಪಟೌಡಿ ನೆನಪಿನಲ್ಲಿ ಈ ಹೆಸರು ಇಡಲಾಗಿತ್ತು.

ಈ ಟ್ರೋಫಿಗೆ 'ನಿವೃತ್ತಿ' ನೀಡಲು ಬಯಸುವುದಾಗಿ ಇಸಿಬಿ ಕಳೆದ ಮಾರ್ಚ್‌ನಲ್ಲಿ ಪಟೌಡಿ ಕುಟುಂಬಕ್ಕೆ ಪತ್ರ ಬರೆದಿತ್ತು.

ಕ್ರಿಕೆಟ್ ದಿಗ್ಗಜರಾದ 52 ವರ್ಷ ವಯಸ್ಸಿನ ಸಚಿನ್ ತೆಂಡೂಲ್ಕರ್ 1989ರಿಂದ 2013ರ ನಡುವೆ 200 ಟೆಸ್ಟ್‌ಗಳನ್ನು ಆಡಿದ್ದು, 15921 ರನ್ ಕಲೆ ಹಾಕಿದ್ದಾರೆ. ಜಿಮ್ಮಿ ಆಂಡರ್ಸನ್ ಟೆಸ್ಟ್‌ನಲ್ಲಿ ಅತಿ ಹೆಚ್ಚು 704 ವಿಕೆಟ್‌ಗಳನ್ನು ಪಡೆದ ವೇಗದ ಬೌಲರ್ ಎನಿಸಿದ್ದಾರೆ. 42 ವರ್ಷ ವಯಸ್ಸಿನ ಅವರು ವೇಗದ ಬೌಲಿಂಗ್ ಕನ್ಸಲ್ಟೆಂಟ್ ಆಗಿದ್ದಾರೆ.

14 ಟೆಸ್ಟ್‌ಗಳಲ್ಲಿ ಇವರಿಬ್ಬರು ಮುಖಾಮುಖಿ ಆಗಿದ್ದು, ಆಂಡರ್ಸನ್ 9 ಸಲ ತೆಂಡೂಲ್ಕರ್ ಅವರ ವಿಕೆಟ್ ಪಡೆದಿದ್ದಾರೆ. ಬೇರಾವುದೇ ಬೌಲರ್ ಇಷ್ಟೊಂದು ಸಲ ಅವರ ವಿಕೆಟ್ ಪಡೆದಿಲ್ಲ.

ನಾಲ್ವರ ಬಂಧನ

10ರ ಬಳಿ ಮಧ್ಯಾಹ್ನ 1 ಗಂಟೆಗೆ ಟಿಕೆಟ್ ಸಿಗುತ್ತದೆ ಎಂದು, 1 ಗಂಟೆ ಆದರೂ ಟಿಕೆಟ್ ವಿತರಣೆ ಆಗದಿರುವುದು. ಬಳಿಕ ಮಧ್ಯಾಹ್ನ 3 ಗಂಟೆಗೆ ಸ್ಟೇಡಿಯಂಗೆ ಅಭಿಮಾನಿಗಳ ಉಚಿತ ಪ್ರವೇಶ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಧಿಕೃತ ಖಾತೆಯಲ್ಲಿ ಪೋಸ್ಟ್ ಮಾಡಿದ್ದ ಕಾರಣಕ್ಕೆ ಆರ್‌ಸಿಬಿ ಮಾರ್ಕೆಟಿಂಗ್ ಮುಖಸ್ಥ ನಿಖಿಲ್ ಸೋಸಲೆ ಸೇರಿ ಈ ನಾಲ್ವರನ್ನೂ ಬಂಧಿಸಲಾಗಿದೆ.

ಸೋಸಲೆ ಪತ್ನಿ

ಬಂಧನ ಮಾಡಲಾಗಿದೆ ಇದು ಸಂವಿಧಾನದ 19ನೇ ವಿಧಿಯ ಅಡಿಯಲ್ಲಿ ಅವರ ಸ್ವಾತಂತ್ರ್ಯದ ಹಕ್ಕಿನ ಉಲ್ಲಂಘನೆ ಹಾಗೂ ನೈಸರ್ಗಿಕ ನ್ಯಾಯದ ತತ್ವಗಳ ಉಲ್ಲಂಘನೆಯಾಗಿದೆ. ಯಾವುದೇ ತನಿಖೆಯ ನಡೆಸದೇ ದುರಂತ ವೈಫಲ್ಯದ ಹೊಣೆಯನ್ನು ಆರ್‌ಸಿಬಿ ಮತ್ತು ಅದರ ಅಧಿಕಾರಿಗಳ ಮೇಲೆ ವರ್ಗಾಯಿಸುವ ಪ್ರಯತ್ನದ ಭಾಗವಾಗಿ ಬಂಧನ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಬರುವವರಿಗೆ ಆನ್‌ಲೈನ್ ಮೂಲಕ ಉಚಿತ ಪಾಸ್ ವ್ಯವಸ್ಥೆ ಮಾಡಲಾಗಿತ್ತು. ಪಾಸ್ ಇದ್ದವರಿಗಷ್ಟೇ ಚಿನ್ನಸ್ವಾಮಿ ಸ್ಟೇಡಿಯಂ ಒಳಗೆ ಅವಕಾಶ ಕಲ್ಪಿಸಲಾಗಿತ್ತು. ಖುದ್ದು ಡಿಸಿಎಂ ಆಟಗಾರರನ್ನು ವಿಮಾನನಿಲ್ದಾಣಕ್ಕೆ ತೆರಳಿ ಸ್ವಾಗತಿಸಿದ್ದರು. ವಿಧಾನಸೌಧದಲ್ಲಿ ಸರ್ಕಾರವೇ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸಿದೆ. ನಂತರ ಚಿನ್ನಸ್ವಾಮಿ ಸ್ಟೇಡಿಯಂನ ಸಂಭ್ರಮಾಚರಣೆಯಲ್ಲಿ ಡಿಸಿಎಂ ಭಾಗಿಯಾಗಿದ್ದರು.

ದುರ್ಘಟನೆಯ ಮಾಹಿತಿ ಪ್ರಕಟವಾದ ತಕ್ಷಣ ಆರ್‌ಸಿಬಿಯಿಂದ ಕಾರ್ಯಕ್ರಮ ಸ್ಥಗಿತಗೊಳಿಸಲಾಗಿದೆ. ನನ್ನ ಪತಿ ಯಾವುದೇ ಲೋಪ ಎಸಗಿಲ್ಲ. ಹೀಗಾಗಿ ಅವರ ಬಂಧನವನ್ನು ಕಾನೂನುಬಾಹಿರವೆಂದು ಘೋಷಿಸಬೇಕು ಮತ್ತು ಕೂಡಲೇ ಅವರನ್ನು ಬಂಧನದಿಂದ ಬಿಡುಗಡೆ ಮಾಡುವಂತೆ ಆದೇಶ ನೀಡಬೇಕೆಂದು ಅರ್ಜಿಯಲ್ಲಿ ಕೋರಿದ್ದಾರೆ.

ಆರ್‌ಸಿಬಿ ವಿಜಯೋತ್ಸವ ಪರೇಡ್‌ಗೆ ತೆರಳಿದ್ದ ಅಂಬಾರಿ ಬಸ್ ಮೈಸೂರಲ್ಲಿ ಸಂಚಾರ!





ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯೋತ್ಸವ ಪರೇಡ್‌ಗೆ ತೆರಳಿದ್ದ ಅಲಂಕೃತ ಕೆಎಸ್‌ಟಿಡಿಸಿಯ ಅಂಬಾರಿ ಬಸ್

ಮೈಸೂರು, ಜೂ. 6(ಆರ್‌ಕೆ)– ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವ ಪರೇಡ್‌ಗೆಂದು ವಿಶೇಷವಾಗಿ ಅಲಂಕಾರಗೊಂಡು ಬೆಂಗಳೂರಿಗೆ ತೆರಳಿದ್ದ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ)ದ ಓಪನ್ ಟಾಪ್ ಡಬಲ್ ಡೆಕ್ಕರ್ ಬಸ್, ಈಗ ಅದೇ ವಿನ್ಯಾಸದೊಂದಿಗೆ ಮೈಸೂರು ನಗರ ಪ್ರದಕ್ಷಿಣೆ ಮಾಡುತ್ತಿದೆ.

ಜೂನ್ 4ರಂದು ಪರೇಡ್ ರದ್ದಾಯಿತಾದರೂ ಅದಕ್ಕಾಗಿ ಆರ್‌ಸಿಬಿ ತಂಡವನ್ನು ಪ್ರದರ್ಶಿಸುವ ಸ್ಟಿಕ್ಕರ್ ಹಾಕಿ ವರ್ಣರಂಜಿತವಾಗಿ ಶೃಂಗರಿಸಿದ್ದ ಅಂಬಾರಿ ಬಸ್, ಅದೇ ದಿನ ರಾತ್ರಿ 11.30 ಗಂಟೆಗೆ ಮೈಸೂರಿಗೆ ಹಿಂದಿರುಗಿತಾದರೂ, ಮೇ 5 ಮತ್ತು ಮೇ 6ರ ಮಧ್ಯಾಹ್ನದವರೆಗೆ ಅದೇ ಅಲಂಕಾರದಲ್ಲಿ ಮೈಸೂರಲ್ಲಿ ಸಂಚರಿಸಿದೆ.


2025ರ ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡದ ಚಾಂಪಿಯನ್ಸ್ ಪೋಸ್ಟರ್ ಹೊಂದಿದ್ದ ಬಸ್‌ನ ಸ್ಟಿಕ್ಕರ್ ಅನ್ನು ತೆಗೆಯದೇ ಅದೇ ಸ್ಥಿತಿಯಲ್ಲಿ ಒಂದೂ ವರೆ ದಿನ ಮೈಸೂರಲ್ಲಿ ಸಂಚರಿಸಿದೆ. ಕೆಎಸ್‌ಟಿಡಿಸಿ ಬಸ್‌ನಲ್ಲಿ ಆರ್‌ಸಿಬಿ ಗೆದ್ದ ಸಂಭ್ರಮದ ಚಿತ್ರಗಳನ್ನು ಹೊಂದಿದ ಸ್ಟಿಕ್ಕರ್‌ನೊಂದಿಗೆ ತಡರಾತ್ರಿ ಮೈಸೂರು ತಲುಪಿದ್ದು, ಎಂದಿನಂತೆ ಮೈಸೂರು ನಗರದಲ್ಲಿ ಸಂಜೆಗೆ ಪ್ರವಾಸಿಗರನ್ನು ಕರೆದೊಯ್ದುದಾಗ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಅಲ್ಲದೆ ಆಟಗಾರರ ಸ್ಟಿಕ್ಕರ್ ಅನ್ನು ತೆಗೆದು ಹಾಕುವಂತೆ ಜನ ಆಗ್ರಹಿಸಿದ್ದರಿಂದ ಇಂದು ಬೆಳಗ್ಗೆಯೇ ಅಂಬಾರಿ ಬಸ್ ಅನ್ನು ಕೆಎಸ್‌ಟಿಡಿಸಿ ಅಧಿಕಾರಿಗಳು ವಶಕ್ಕೆ ಪಡೆದು ಮೈಸೂರಿನ ಮಯೂರ ಹೊಯ್ಸಳ ಹೋಟೆಲ್ ಆವರಣದಲ್ಲಿ ನಿಲ್ಲಿಸಲಾಗಿದೆ.

ಬಸ್ ಮುಂದೆ, ಹಿಂದೆ ಹಾಗೂ ಎರಡೂ ಬದಿಗಳಲ್ಲಿ ಅಂಟಿಸಿರುವ ಡೆಕೋರೇಟೆಡ್ ಸ್ಟಿಕ್ಕರ್‌ಅನ್ನು ಆರ್‌ಸಿಬಿ ಪ್ರತಿನಿಧಿಗಳೇ ಬಸ್ಸಿನ ಮೂಲ ಬಣ್ಣಕ್ಕೆ ಧಕ್ಕೆಯಾಗದಂತೆ ತೆಗೆದು ಹಾಕುತ್ತಾರೆಂದು ನಿರೀಕ್ಷಿಸಲಾಗಿತ್ತಾದರೂ, ಅದು ಸಾಕಾರವಾಗದ ಕಾರಣ, ಕೆಎಸ್‌ಟಿಡಿಸಿ ಅಧಿಕಾರಿಗಳು ಡಬಲ್ ಡೆಕ್ಕರ್ ಅಂಬಾರಿ ಬಸ್ ಅನ್ನು ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಆವರಣಕ್ಕೆ ತಂದು ನಿಲ್ಲಿಸಲಾಗಿದೆ.

ಇಂದು ಮಧ್ಯಾಹ್ನ ತಜ್ಞರನ್ನು ಕರೆಸಿ ಬಸ್ಸಿಗೆ ಅಂಟಿಸಿರುವ ಸ್ಟಿಕ್ಕರ್ ಅನ್ನು ತೆರವುಗೊಳಿಸುತ್ತೇವೆ. ಅಲ್ಲಿಯವರೆಗೂ ಅಂಬಾರಿ ಬಸ್ ಅನ್ನು ಸಂಚಾರಕ್ಕೆ ಬಿಡುವುದಿಲ್ಲ ಎಂದು ಕೆಎಸ್‌ಟಿಡಿಸಿ ವ್ಯವಸ್ಥಾಪಕ ಮಧುಸೂದನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಜೂನ್ 3ರಂದು ಸಂಜೆ ಬೆಂಗಳೂರು ತಲುಪಿದ್ದ ಅಂಬಾರಿ ಬಸ್‌ಗೆ ಅಂದು ರಾತ್ರಿ ಸ್ಟಿಕ್ಕರ್ ಅಂಟಿಸಿ ಶೃಂಗಾರ ಮಾಡಲಾಗಿತ್ತು. ಬಸ್‌ಗೆ ಬಾಡಿಗೆ ಹಣ ಪಾವತಿಸಿಕೊಂಡು ಆರ್‌ಸಿಬಿ ಪ್ರತಿನಿಧಿಗಳ ಕೋರಿಕೆ ಮೇರೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಸೂಚನೆಯಂತೆ ಬೆಂಗಳೂರಿನ ವಿಜಯೋತ್ಸವ ಪರೇಡ್‌ಗೆ ಕಳುಹಿಸಲಾಗಿತ್ತು. ಅಲ್ಲಿ ಪರೇಡ್‌ಗೆ ಅನುಮತಿ ನೀಡದ ಕಾರಣ ನಾವು ಅಂಬಾರಿ ಬಸ್ ಅನ್ನು ಸುರಕ್ಷಿತವಾಗಿ ಮೈಸೂರಿಗೆ ತಂದಿದ್ದೇವೆ ಎಂದು ತಿಳಿಸಿದರು.

ಈಗ ಬಸ್ ಅನ್ನು ನಮ್ಮ ಕಚೇರಿ ಆವರಣದಲ್ಲಿ ನಿಲ್ಲಿಸಲಾಗಿದ್ದು, ಆರ್‌ಸಿಬಿ ವಿಜಯೋತ್ಸವದ ಸ್ಟಿಕ್ಕರ್ ಅನ್ನು ತೆಗೆದ ನಂತರವೇ ಪುನಃ ಸಂಚಾರ ಆರಂಭಿಸುತ್ತೇವೆ ಎಂದು ಮಧುಸೂದನ್ ತಿಳಿಸಿದ್ದಾರೆ.


ಮಾಜಿ ಮೇಯರ್ ರವಿಕುಮಾರ್‌ಗೆ ಅಭಿನಂದನೆ



ಮೈಸೂರು ನಗರಪಾಲಿಕೆ ಮಾಜಿ ಮೇಯರ್ ರವಿಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಭೈರವ ಕಾಂಪ್ಲೆಕ್ಸ್ ಮಾಲೀಕರಾದ ಮಹದೇವ್, ಕುಮಾರ್ ಅಭಿನಂದಿಸಿ, ಶುಭಾಶಯ ಕೋರಿದರು. ಮುಖಂಡರಾದ ಬಂದೀಗೌಡ, ಕಿಟ್ಟಪ್ಪ, ಬಾಬು, ಅಂಚೆಕುಮಾರ್, ಜೈರಾಮ್, ಶಿವಕುಮಾರ್, ಸ್ವಾಮಿ, ಕುಮಾರ್ ಮತ್ತಿತರರಿದ್ದರು.

ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆಯವರ ಪತ್ನಿ ಭಾರತಿ ನಿಧನ

ಮೈಸೂರು, ಜೂ.6–ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಅವರ ಪತ್ನಿ ಭಾರತಿ ಹೆಗ್ಡೆ ಅವರು ಗುರುವಾರ ನಿಧನ ಹೊಂದಿದ್ದಾರೆ.



78 ವರ್ಷ ವಯಸ್ಸಿನ ಭಾರತಿ ಹೆಗ್ಡೆ ಕಳೆದ ಕೆಲದಿನಗಳಿಂದ ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂದು ತಿಳಿದು ಬಂದಿದೆ. ಪುತ್ರಿ ವಿದೇಶದಲ್ಲಿದ್ದು, ಅವರು ಮೈಸೂರಿಗೆ ಆಗಮಿಸಿದ ನಂತರ ಭಾನುವಾರ ಬೆಳಗ್ಗೆ ವಿಜಯನಗರದ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಸಲಾಗುತ್ತದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸೇರಿ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರಲ್ಲಿ ಬಹು ಉಪಯುಕ್ತ ಕಲಾ, ಸಾಂಸ್ಕೃತಿಕ ಕೇಂದ್ರ

'ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್'

● ಈ ಅತ್ಯಾಧುನಿಕ ಕಲಾ, ಸಾಂಸ್ಕೃತಿಕ ಕೇಂದ್ರದ ವೆಬ್‌ಸೈಟ್‌ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿ ಚಾಲನೆ ● ಮೈಸೂರಿನ ಕಲಾ ಪ್ರೇಮಿಗಳಿಗೆ ಹೆಸರಾಂತ ಉದ್ಯಮಿ ಜಗನ್ನಾಥ ಶೆಣೈ ಅವರ ಉಡುಗೊರೆ; ಶ್ಲಾಘನೆ



ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್–ಜೆಸಿಎಸಿ(ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ)

ಮೈಸೂರು, ಜೂ.6(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಕಲೆ, ಸಾಹಿತ್ಯ, ಸಾಂಸ್ಕೃತಿಕ ಸಮಾರಂಭ ಹಾಗೂ ಸಮ್ಮೇಳನಗಳ ಆಯೋಜನೆಗೆ ಅನುಕೂಲವಾಗುವಂತೆ ವಿಶಿಷ್ಟ ಕಲಾಶೈಲಿಯೊಂದಿಗೆ ನಿರ್ಮಿಸಿರುವ 'ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್–ಜೆಸಿಎಸಿ(ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ) ವೆಬ್‌ಸೈಟ್ ಅನ್ನು ಶುಕ್ರವಾರ ಲೋಕಾರ್ಪಣೆಗೊಳಿಸಲಾಯಿತು.

ಮಂಗಳೂರು ಗಣೇಶ ಬೀಡಿ ವರ್ಕ್ಸ್‌ನ ಅಂಗ ಸಂಸ್ಥೆಯಾದ ಸರಸ್ವತಿ ಎಜುಕೇಶನ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ಸುಮಾರು 1 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ ಬಹು ಉಪಯುಕ್ತ ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದ ವೆಬ್‌ಸೈಟ್ ಅನ್ನು ಬಟನ್ ಒತ್ತುವ ಮೂಲಕ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಅಪರೂಪದ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದ ವೆಬ್‌ಸೈಟ್ ಅನ್ನು ಉದ್ಘಾಟಿಸಿದ್ದೇವೆ. 1970 ರಿಂದಲೂ ಮೈಸೂರಿನೊಂದಿಗೆ ನಿಕಟ ಸಂಬಂಧ ಹೊಂದಿರುವ ನಾನು, ಪತ್ರಕರ್ತನಾಗಿ ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೆಲಸ ಮಾಡಿದವರ ಜೊತೆಗಿದ್ದುದ್ದರಿಂದ ನನಗೂ ಕಲೆ, ಸಾಹಿತ್ಯ, ಸಂಗೀತದ ಮೇಲಿನ ಆಸಕ್ತಿ ಹೆಚ್ಚಾಯಿತು. ಸಂಜೆ ವೇಳೆ ಯಾವುದಾದರೂ ಥಿಯೇಟರ್‌ಗೆ ಹೋಗಿ ನಾಟಕ ನೋಡೋಣ, ಮ್ಯೂಸಿಯಂ ಅಥವಾ ಚಿತ್ರಕಲಾ ಗ್ಯಾಲರಿಗೆ ಹೋಗೋಣವೆಂದರೆ ಜಗನ್ಮೋಹನ ಅರಮನೆ ಮತ್ತು ಟೌನ್‌ಹಾಲ್ ಬಿಟ್ಟರೆ ಇತರೆ ಸಾಂಸ್ಕೃತಿಕ ಸಭಾಂಗಣಗಳೇ ಇರಲಿಲ್ಲ. ಅಲ್ಲದೆ ಕಲೆ, ಸಾಹಿತ್ಯಕ್ಕೆ ಮೈಸೂರು ಮಹಾರಾಜರು ಕೊಟ್ಟಂತಹ ಕೊಡುಗೆಯನ್ನು ಯಾವ ಉದ್ಯಮಿಗಳು ಕೊಡುವ ಪ್ರಯತ್ನ ಮಾಡಲಿಲ್ಲ. ಆಗಿನ ಕಾಲಕ್ಕೆ ಕೆಲ ಉದ್ಯಮಿಗಳು ಇದ್ದರೂ ಅವರು ಕಲೆ, ಸಾಹಿತ್ಯ, ಸಂಸ್ಕೃತಿಗೆ ಕೊಟ್ಟ ಕೊಡುಗೆ ಬಹಳ ಕಡಿಮೆ ಎಂದು ತಿಳಿಸಿದರು.


1980–82 ರಲ್ಲಿ ಗುಂಡೂರಾಯರು (ಆರ್.ಗುಂಡೂರಾವ್) ಮುಖ್ಯಮಂತ್ರಿಯಾಗಿದ್ದಾಗ ಕಲಾಮಂದಿರ ಕಟ್ಟಿಸಿದರು. ಆ ಸಂದರ್ಭದಲ್ಲಿ ನಾನು ಹಾಗೂ ಕೆಲ ಕಲಾವಿದರು ಸೇರಿ ಗುಂಡೂರಾಯರನ್ನು ಭೇಟಿ ಮಾಡಿ ಕಲಾಮಂದಿರ ವಿಚಾರವನ್ನು ಪ್ರಸ್ತಾಪಿಸಿದ್ದರಿಂದ ಕರ್ನಾಟಕ ಕಲಾಮಂದಿರ ನಿರ್ಮಾಣವಾಯಿತು. ಹಾಗೆಯೇ ರಾಜಶೇಖರ ಕೋಟಿ ಸೇರಿದಂತೆ ನಾವು ನಾಲ್ಕೈದು ಜನ ಸೇರಿ ಆರ್ಟ್ ಗ್ಯಾಲರಿಯೊಂದನ್ನು ಸ್ಥಾಪಿಸುವ ಪ್ರಯತ್ನ ಮಾಡಿ ಸ್ಥಳವನ್ನೂ ಗುರ್ತಿಸಿದ್ದೆವು. ಆದರೆ, ದುರಾದೃಷ್ಟವಶಾತ್ ಕೋಟಿಯವರು ನಮ್ಮನ್ನಗಲಿದ್ದರಿಂದ ಪ್ರಯತ್ನ ಅಷ್ಟಕ್ಕೆ ನಿಂತುಹೋಯಿತು. ರಂಗಾಯಣ ಬಂದರೂ ಮೈಸೂರಿನ ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆಗಳೇ ಸಾಕಾಗುತ್ತಿರಲಿಲ್ಲ. ಈ ಕೊರತೆಯನ್ನು ಜಗನ್ನಾಥ ಶೆಣೈ ಅವರು ನೀಗಿಸಿದ್ದಾರೆ. ಇದು ಕಲೆಗೆ ಅವರು ಕೊಟ್ಟಂತಹ ಮಹತ್ವದ ಸೇವೆ. ಹಾಗೆಯೇ ಕೊಡುಗೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವ್ಯಾಪಕ ಪ್ರಚಾರ ಅಗತ್ಯವಿದೆ: ಕಾಮಾಕ್ಷಿ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ.ಸಿ.ಜಿ.ನರಸಿಂಹನ್ ಮಾತನಾಡಿ, ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಮಾತ್ರವಲ್ಲದೆ ವಿವಿಧ ಸಮಾವೇಶಗಳು, ಕಾರ್ಪೊರೇಟ್ ಕಾರ್ಯಕ್ರಮಗಳನ್ನು ನಡೆಸಬಹುದು. ಇಂತಹ ಸ್ಥಳವನ್ನು ನಿರ್ಮಾಣ ಮಾಡಿರುವ ಜಗನ್ನಾಥ ಶೆಣೈ ಅವರಿಗೆ ಧನ್ಯವಾದಗಳು. ಮೈಸೂರು ಇವರ ಕೊಡುಗೆಯನ್ನು ಎಂದಿಗೂ ನೆನಪಿಸಿಕೊಳ್ಳುತ್ತದೆ. ಇಂತಹ ಬಹು ಉಪಯುಕ್ತ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದ ಬಗ್ಗೆ ವ್ಯಾಪಕ ಪ್ರಚಾರದ ಅಗತ್ಯವಿದೆ. ಕಲಾವಿದರು ಈ ಕೇಂದ್ರವನ್ನು ಸದ್ಬಳಕೆ ಮಾಡಿಕೊಳ್ಳುವಂತಾಗಬೇಕು ಎಂದು ಸಲಹೆ ನೀಡಿದರು.

ಮೈಸೂರಿಗೆ ಜಗನ್ನಾಥರ ಉಡುಗೊರೆ: ಉದ್ಯಮಿಗಳೂ ಆದ ರೋಟೇರಿಯನ್ ಸ್ಯಾಮ್ ಚೆರಿಯನ್ ಮಾತನಾಡಿ, ಆಕರ್ಷಕ ವಿನ್ಯಾಸದೊಂದಿಗೆ ನಿರ್ಮಾಣವಾಗಿರುವ ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ ಮೈಸೂರಿಗೆ ಅವರ ಉಡುಗೊರೆಯಾಗಿದೆ. ಈ ಕೇಂದ್ರವು ಮೈಸೂರಿನಲ್ಲಿಯೇ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಲಿದ್ದು, ಹೆಚ್ಚೆಚ್ಚು ಕಾರ್ಯಕ್ರಮಗಳು, ರಾಷ್ಟ್ರೀಯ ಸಮ್ಮೇಳನಗಳು ನಡೆಯುವುದರಿಂದ ಮೈಸೂರಿನ ಹಿರಿಮೆ ಮತ್ತಷ್ಟು ವಿಶಾಲವಾಗಲಿದೆ. ಮೈಸೂರಿನ ಕಲೆ, ಸಂಸ್ಕೃತಿಗೆ ತಮ್ಮದೇ ಕೊಡುಗೆ ನೀಡುತ್ತಿರುವ ಜಗನ್ನಾಥ ಶೆಣೈ ಅವರನ್ನು 'ಮೈಸೂರು ರತ್ನ' ಎನ್ನಬೇಕು ಎಂದು ಗುಣಗಾನ ಮಾಡಿದರು.

ಬಹು ಉಪಯುಕ್ತ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ...!

ಸುಮಾರು 1 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ 'ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ' 3 ಆಂಪಿ ಥಿಯೇಟರ್‌ಗಳು, 350 ಆಸನಗಳ ವ್ಯವಸ್ಥೆ ಇರುವ ಬೃಹತ್ ಸಭಾಂಗಣ, ಎಕ್ಸಿಬಿಷನ್ ಹಾಲ್, ಆರ್ಟ್ ಗ್ಯಾಲರಿ ಹಾಗೂ ಕೆಫೆಟೇರಿಯಾ ಒಳಗೊಂಡಿದೆ. ವಿಶಾಲವಾಗಿರುವ ಆಂಪಿ ಥಿಯೇಟರ್‌ನಲ್ಲಿ ಬಯಲಾಟ, ಯಕ್ಷಗಾನ, ನಾಟಕ, ಸೆಮಿನಾರ್, ಸಮ್ಮೇಳನ, ಯೋಗ ಮತ್ತು ನೃತ್ಯ ತರಬೇತಿ ಶಿಬಿರಗಳನ್ನು ನಡೆಸಲು ಅತ್ಯುಪಯುಕ್ತವಾಗಿದೆ. ಕಲೆ, ಸಾಹಿತ್ಯ, ಸಾಂಸ್ಕೃತಿಕ ಮಾತ್ರವಲ್ಲದೆ ಕಾರ್ಪೊರೇಟ್ ಸಮಾರಂಭಗಳಿಗೂ ಸೂಕ್ತ ವೇದಿಕೆಯಾಗಿದೆ. ಕೇಂದ್ರದ ಕುರಿತ ಹೆಚ್ಚಿನ ಮಾಹಿತಿಯನ್ನು https://jcacmysuru.com ಮೂಲಕ ಪಡೆದುಕೊಳ್ಳಬಹುದಾಗಿದೆ.


350 ಆಸನ ವ್ಯವಸ್ಥೆಯುಳ್ಳ ಹವಾನಿಯಂತ್ರಿತ ಸಭಾಂಗಣ



ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಸರಸ್ವತಿ ಎಜುಕೇಶನ್ ಅಂಡ್ ಕಲ್ಚರಲ್ ಟ್ರಸ್ಟ್‌ನ ವತಿಯಿಂದ ನಿರ್ಮಿಸಿರುವ 'ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್–ಜೆಸಿಎಸಿ(ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ) ವೆಬ್‌ಸೈಟ್ ಅನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಶುಕ್ರವಾರ ಲೋಕಾರ್ಪಣೆಗೊಳಿಸಿದರು. (ಎಡದಿಂದ) ರೋಟೇರಿಯನ್ ಸ್ಯಾಮ್ ಚೆರಿಯನ್, ಕಾಮಾಕ್ಷಿ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ.ಸಿ.ಜಿ.ನರಸಿಂಹನ್, ಸರಸ್ವತಿ ಎಜುಕೇಶನ್ ಅಂಡ್ ಕಲ್ಚರಲ್ ಟ್ರಸ್ಟ್ ಅಧ್ಯಕ್ಷರಾದ ಡಾ.ಎಂ.ಜಗನ್ನಾಥ ಶೆಣೈ, ವಾಸ್ತುಶಿಲ್ಪಿ ರವಿಕುಮಾರ್ ಉಪಸ್ಥಿತರಿದ್ದರು.

ಕಲಾವಿದರಿಗಾಗಿಯೇ ಹೊರತು ಕಮರ್ಷಿಯಲ್ ಅಲ್ಲ...


ದೂರ ದೃಷ್ಟಿಯಿಂದ ಎಲ್ಲಾ ವ್ಯವಸ್ಥೆಯೊಂದಿಗೆ ಆಧುನಿಕ ಶೈಲಿಯಲ್ಲಿ ನಿರ್ಮಾಣಗೊಂಡಿರುವ 'ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್' ಆಧುನಿಕತೆಯನ್ನು ಮುಂದುವರೆಸಿಕೊಂಡು ಹೋಗಲಿದೆ. ಕಲಾವಿದರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಈ ಕೇಂದ್ರವನ್ನು ಜಗನ್ನಾಥ ಶೆಣೈ ಅವರು ಕಮರ್ಷಿಯಲ್ ಉದ್ದೇಶದಿಂದ ನಿರ್ಮಿಸಿದ್ದಾರೆ ಎಂಬುದನ್ನು ನಾನು ಒಪ್ಪುವುದಿಲ್ಲ. ಅದರ ಅಗತ್ಯವೂ ಅವರಿಗಿಲ್ಲ. ಜ್ಞಾನದಿಂದ ಜ್ಞಾನವೃದ್ಧಿ ಎಂಬಂತೆ ಕಲೆ, ಕಲಾವಿದರನ್ನು ಗಮನದಲ್ಲಿಟ್ಟುಕೊಂಡು ಈ ಕೇಂದ್ರ ನಿರ್ಮಿಸಲಾಗಿದೆ.

– ಡಾ.ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'

ಮೈಸೂರಲ್ಲೇ ಮೊದಲ ಬಹು ಉಪಯುಕ್ತ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರ: ಜಗನ್ನಾಥ ಶೆಣೈ

ಮೈಸೂರು ಮಹಾರಾಜರು ಕಲೆ, ಸಾಹಿತ್ಯ, ಸಂಸ್ಕೃತಿಗೆ ನೀಡಿರುವ ಅಪಾರ ಕೊಡುಗೆಯಿಂದಾಗಿ ಮೈಸೂರು ಸಾಂಸ್ಕೃತಿಕ ನಗರಿ ಎಂಬ ಹೆಗ್ಗಳಿಕೆ ಪಡೆದಿದೆ. ಮೈಸೂರಿನಲ್ಲಿ 15–20ಕ್ಕೂ ಹೆಚ್ಚು ಸಾಂಸ್ಕೃತಿಕ ಸಂಸ್ಥೆಗಳಿದ್ದು, ನಿರಂತರವಾಗಿ ಕಲೆ, ಸಾಹಿತ್ಯ ಕುರಿತ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಮೈಸೂರಲ್ಲಿ ಹಲವು ಸಾಂಸ್ಕೃತಿಕ ವೇದಿಕೆಗಳಿದ್ದರೂ ಏಕ ಕಾಲದಲ್ಲಿ ಒಂದೇ ಸೂರಿನಡಿ ನಾಲ್ಕೈದು ಕಾರ್ಯಕ್ರಮಗಳನ್ನು ನಡೆಸಬಹುದಾದ ಕೇಂದ್ರ ಇಲ್ಲ. ಹಾಗಾಗಿ ಮೈಸೂರಿನ ಕಲಾವಿದರ ಅನುಕೂಲತೆಗೆ ಅನುಗುಣವಾಗಿ, ಕಲೆ, ಸಾಹಿತ್ಯವನ್ನು ಉಳಿಸಿ, ಬೆಳೆಸಿ, ಪ್ರೋತ್ಸಾಹಿಸುವ ದೃಷ್ಟಿಯಿಂದ ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಲಾಗಿದೆ.

– ಎಂ.ಜಗನ್ನಾಥ್ ಶೆಣೈ, ಅಧ್ಯಕ್ಷರು, ಸರಸ್ವತಿ ಎಜುಕೇಶನ್ ಅಂಡ್ ಕಲ್ಚರಲ್ ಟ್ರಸ್ಟ್


ವಿಶಿಷ್ಟ ಶೈಲಿಯ ನಟರಾಜ ಮೂರ್ತಿ

ಬೆಂಗಳೂರಿನ ಕಾಲ್ತುಳಿತ: ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ವಿರುದ್ಧ ಸ್ನೇಹಮಯಿ ಕೃಷ್ಣ ದೂರು

ಬೆಂಗಳೂರು, ಜೂ.6– ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತಂಡದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಶಿವಕುಮಾರ್ ಮತ್ತು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಪದಾಧಿಕಾರಿಗಳ ವಿರುದ್ಧ ದೂರು ದಾಖಲಿಸಿದ್ದು, ಈ ದುರಂತಕ್ಕೆ ಸರ್ಕಾರದ ಬೇಜವಾಬ್ದಾರಿಯೇ ಕಾರಣ ಎಂದು ಆರೋಪಿಸಿದ್ದಾರೆ.

ಸ್ನೇಹಮಯಿ ಕೃಷ್ಣ ಅವರು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಸಿಎಂ, ಡಿಸಿಎಂ ವಿರುದ್ಧ ದೂರು ನೀಡಿದ್ದು, ಇದು ಸರ್ಕಾರದ ಬೇಜವಾಬ್ದಾರಿಯಿಂದ ಉಂಟಾದ ದುರಂತ. ಆರ್‌ಸಿಬಿ ರಾಜ್ಯವನ್ನು ಪ್ರತಿನಿಧಿಸುವ ತಂಡವಲ್ಲ. ಇದು ಮದ್ಯ ಮಾರಾಟಗಾರರು ಖರೀದಿಸಿದ ಖಾಸಗಿ ತಂಡ. ಹೀಗಾಗಿ ರಾಜ್ಯ ಸರ್ಕಾರ ಅವರನ್ನು ಆಹ್ವಾನಿಸಿ ಸನ್ಮಾನಿಸುವ ಅಗತ್ಯವಿರಲಿಲ್ಲ ಎಂದು ಹೇಳಿದ್ದಾರೆ.

ಕಾನೂನು ಮತ್ತು ಸುರಕ್ಷತೆಯ ಬಗ್ಗೆ ಯಾವುದೇ ಪೂರ್ವ ಸಿದ್ಧತೆ ಇಲ್ಲದೆ ಈ ದುರಂತ ಸಂಭವಿಸಿದೆ. ಈ ದುರಂತಕ್ಕೆ ಸಿಎಂ ಮತ್ತು ಡಿಸಿಎಂ ಅವರೇ ಹೊಣೆ ಎಂದು ಅವರು ಆರೋಪಿಸಿದ್ದಾರೆ.

ಬೆಂಗಳೂರಲ್ಲಿ ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ

ಪೊಲೀಸರ ಅಮಾನತು ಖಂಡಿಸಿ ಬಿಜೆಪಿ ಮೈಸೂರಲ್ಲಿ ಪ್ರತಿಭಟನೆ

ಸಿಎಂ ಎ1, ಡಿಸಿಎಂ ಎ2, ಹೋಂ ಮಿನಿಸ್ಟರ್ ಎ3 ಎಂದು ಪ್ರಕರಣ ದಾಖಲಿಸಲು ಒತ್ತಾಯ

ಮೈಸೂರು, ಜೂ.6(ಜಿಎ)–ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತದ ಸಂಬಂಧ ಪೊಲೀಸ್ ಆಯುಕ್ತರು ಸೇರಿದಂತೆ ಸಿಬ್ಬಂದಿಗಳನ್ನು ಅಮಾನತು ಮಾಡಿರುವುದನ್ನು ಖಂಡಿಸಿ, ಮೈಸೂರಿನಲ್ಲಿ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸೇರಿದ ಬಿಜೆಪಿ ಮುಖಂಡರು ಕಾಲ್ತುಳಿತ ದುರಂತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎ1, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಎ2, ಗೃಹ ಸಚಿವ ಡಾ.ಜಿ.ಪರಮೇಶ್ವರ ಎ3 ಆರೋಪಿಗಳನ್ನಾಗಿ ಮಾಡಬೇಕು. ಅಲ್ಲದೇ, ಈ ಮೂವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ತಮ್ಮ ಪ್ರಚಾರಕ್ಕೆ 11 ಮಂದಿ ಅಮಾಯಕರ ಬಲಿ ಪಡೆದ ಕೆಟ್ಟ ಸರ್ಕಾರ', 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ', 'ದೇಶ ಕಂಡ ಕಡು ಭ್ರಷ್ಟ ಸಿಎಂ ಸಿದ್ದರಾಮಯ್ಯಗೆ ಧಿಕ್ಕಾರ', ಎಂದು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾಧ್ಯಮಗಳೊಂದಿಗೆ ಮಾತನಾಡಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ದುರಂತಕ್ಕೆ ಪೊಲೀಸ್ ಅಧಿಕಾರಿಗಳು ಹೊಣೆ ಅಂತ ಅಮಾನತು ಮಾಡಿದ್ದಾರೆ. ಅದೇ ಮೈಸೂರು ಮುಡಾ ಹಗರಣದಲ್ಲಿ ಅಧಿಕಾರಿಗಳ ಮೇಲೆ ಯಾಕೆ ಕ್ರಮ ಆಗಿಲ್ಲ ಎಂದು ಪ್ರಶ್ನಿಸಿದರು.

ಸಿಎಂ ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ತಮ್ಮ ಲಾಭ ಹಾಗೂ ಅನುಕೂಲಕ್ಕೆ ತಕ್ಕಂತೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರ ಪ್ರಚಾರವಾದರೆ ಸಾಕು. ಅಧಿಕಾರಿಗಳು ಏನಾದರು ಇವರಿಗೆ ಏನು ಇಲ್ಲ. ಈ ರೀತಿಯ ನಡೆಯನ್ನು ನಾವು ಖಂಡಿಸುತ್ತೇವೆ ಎಂದು ಕಿಡಿಕಾರಿದರು.

ವಿಧಾನಸೌಧದ ಬಳಿ ಕಾರ್ಯಕ್ರಮ ಮಾಡಲು ಅನುಮತಿ ಕೊಟ್ಟವರು ಯಾರು? ಒಂದೇ ದಿನ ಎರಡು ಕಡೆ ಕಾರ್ಯಕ್ರಮ ಮಾಡಿರುವುದು ಸರಿಯೇ? ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಆರ್‌ಸಿಬಿ ಬಾವುಟ ಹಿಡಿದು ತಮ್ಮ ಪ್ರಚಾರವನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ. 11 ಮಂದಿ ಸಾವಿಗೆ ನೇರ ಹೊಣೆ ಸಿಎಂ ಹಾಗೂ ಡಿಸಿಎಂ. ತಮ್ಮ ತಪ್ಪು ಮುಚ್ಚಿಕೊಳ್ಳಲು ಪೊಲೀಸ್ ಇಲಾಖೆಯನ್ನೇ ಬಲಿ ಪಶು ಮಾಡಿದ್ದಾರೆ ಎಂದು ದೂರಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಬೆಂಗಳೂರಿನಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಸಂಬಂಧ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದು, ಕೋತಿ ತಿಂದು ಮೇಕೆ ಬಾಯಿಗೆ ಒರೆಸಿದಂತಾಗಿದೆ ಎಂದು ಟೀಕಿಸಿದರು.

ಸಿಎಂ, ಡಿಸಿಎಂ, ಸೇರಿದಂತೆ ಸಚಿವರ ಮಕ್ಕಳು, ಮೊಮ್ಮಕ್ಕಳು ಐಪಿಎಲ್ ಕಪ್ ಗೆದ್ದ ಆರ್‌ಸಿಬಿ ಆಟಗಾರರ ಜತೆಗೆ ಫೋಟೋ ತೆಗೆದುಕೊಳ್ಳಲು ವಿಧಾನಸೌಧದ ಮುಂಭಾಗಕ್ಕೆ ಕರೆಸಿಕೊಂಡಿದ್ದಾರೆ. ಇವರ ಕುಟುಂಬ ಸದಸ್ಯರ ಫೋಟೋ ತೆಗೆಸಲು ಹಾಗೂ ಇವರ ಪ್ರಚಾರಕ್ಕೆ 11 ಮಂದಿ ಅಮಾಯಕರು ಬಲಿಯಾಗಿದ್ದಾರೆ. ಆರ್‌ಸಿಬಿ ಅಭಿಮಾನಿಗಳ ಸಾವಿಗೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಿದೆ. ಆದರೆ, ಈಗ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಆರ್.ರಘು ಕೌಟಿಲ್ಯ, ಮಿರ್ಲೆ ಶ್ರೀನಿವಾಸ್ ಗೌಡ, ರಘು, ನಿಶಾಂತ್, ಲೋಹಿತ್, ಪಡುವಾರಹಳ್ಳಿ ರಾಮಕೃಷ್ಣ, ಬಿ.ವಿ.ಮಂಜುನಾಥ್, ಜೋಗಿಮಂಜು, ಅನಿಲ್ ಥಾಮಸ್, ಗಿರಿಧರ್, ಗೋಕುಲ್ ಗೋವರ್ಧನ್, ಕಿರಣ್‌ಗೌಡ, ಮಂಗಳ ಸೋಮಶೇಖರ್, ಕೇಬಲ್ ಮಹೇಶ್, ಮಾಜಿ ಮೇಯರ್ ಶಿವಕುಮಾರ್ , ಮಾಜಿ ಉಪಮೇಯರ್ ಶೈಲೇಂದ್ರ ಮತ್ತಿತರರು ಪಾಲ್ಗೊಂಡಿದ್ದರು.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತದ ಸಂಬಂಧ ಪೊಲೀಸ್ ಆಯುಕ್ತರು ಸೇರಿದಂತೆ ಸಿಬ್ಬಂದಿಗಳನ್ನು ಅಮಾನತು ಮಾಡಿರುವುದನ್ನು ಖಂಡಿಸಿ, ಮೈಸೂರಿನಲ್ಲಿ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು.

ಆ. 3 ರಂದು ನೀಟ್–ಪಿಜಿ 2025 ಪರೀಕ್ಷೆ: ಸುಪ್ರೀಂ ಕೋರ್ಟ್ ಒಪ್ಪಿಗೆ

ನವದೆಹಲಿ, ಜೂ. 6– ಆಗಸ್ಟ್ 3 ರಂದು ನೀಟ್–ಪಿಜಿ 2025 ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ ಒಪ್ಪಿಗೆ ನೀಡಿದೆ.

ಪರೀಕ್ಷೆಯನ್ನು ನಡೆಸಲು ರಾಷ್ಟ್ರೀಯ ಪರೀಕ್ಷಾ ಮಂಡಳಿ ಎರಡು ತಿಂಗಳಿಗಿಂತ ಹೆಚ್ಚು ಸಮಯ ಕೋರಿದ್ದನ್ನು ಆರಂಭದಲ್ಲಿ ಪ್ರಶ್ನಿಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಆಗಸ್ಟೀನ್ ಜಾರ್ಜ್ ಮಸಿಹ್ ಅವರನ್ನೊಳಗೊಂಡ ನ್ಯಾಯಪೀಠವು, ಆಗಸ್ಟ್ 3 ರಂದು ನೀಟ್–ಪಿಜಿ 2025 ಅನ್ನು ನಡೆಸಬಹುದು ಎಂದು ಹೇಳಿದೆ

ಅದಕ್ಕಿಂತ ಹೆಚ್ಚಿನ ಸಮಯವನ್ನು ನೀಡಲಾಗುವುದಿಲ್ಲ ಎಂದು ಕೂಡ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಸುಪ್ರೀಂ ಕೋರ್ಟ್ ಮೇ 30 ರ ಆದೇಶದ ಪ್ರಕಾರ ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಲು ಸುಮಾರು 1,000 ಪರೀಕ್ಷಾ ಕೇಂದ್ರಗಳು ಬೇಕಾಗುತ್ತವೆ ಎಂದು ಎನ್‌ಬಿಇ ವಾದಿಸಿತ್ತು.

ಜೂನ್ 15 ರಂದು ನಡೆಯಬೇಕಿದ್ದ ಪರೀಕ್ಷೆಯನ್ನು ಆಗಸ್ಟ್ 3 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 12.30 ರವರೆಗೆ ನಡೆಸುವುದಾಗಿ ಎನ್ ಬಿಇ ಅರ್ಜಿಯಲ್ಲಿ ತಿಳಿಸಿತ್ತು. ಇದು ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಲಿಮಿಟೆಡ್ ನೀಡಿದ ಆರಂಭಿಕ ದಿನಾಂಕವಾಗಿದೆ.

ದೇಶ – ವಿದೇಶ

ವಿಯೆಟ್ನಾಂನಲ್ಲಿ ಭೀಕರ ಅಪಘಾತ; ಭಾರತೀಯ ಮೂಲದ ವಿದ್ಯಾರ್ಥಿ ಸಾವು




ವಿಯೆಟ್ನಾಂ: ವಿಯೆಟ್ನಾಂನ ಕ್ಯಾನ್ ಥೋ ನಗರದಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಭಾರತೀಯ ಮೂಲದ ವೈದ್ಯಕೀಯ ವಿದ್ಯಾರ್ಥಿ ಸಾವನ್ನಪ್ಪಿದ್ದಾರೆ. ಮೃತನನ್ನು ಮೂರನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಅರ್ಷಿದ್ ಆಶ್ರಿತ್ ಎಂದು ಗುರುತಿಸಲಾಗಿದೆ. ಮೃತ ಅರ್ಷಿದ್ ಆಶ್ರಿತ್ ತೆಲಂಗಾಣದ ಕುಮುರಂ ಭೀಮ್ ಆಸಿಫಾಬಾದ್ ಜಿಲ್ಲೆಯ ಕಾಗಜ್‌ನಗರದ ನಿವಾಸಿಯಾಗಿದ್ದಾರೆ.

ಮಳೆಯಿಂದಾಗಿ ತೇವವಾಗಿದ್ದ ರಸ್ತೆಯಲ್ಲಿ ವೇಗವಾಗಿ ಸಂಚರಿಸುತ್ತಿದ್ದ ಅರ್ಷಿದ್ ಬೈಕ್ ನಿಯಂತ್ರಣ ತಪ್ಪಿ ತಡೆಗೋಡೆಗೆ ಢಿಕ್ಕಿ ಹೊಡೆದಿದೆ. ಘಟನೆಯಲ್ಲಿ ಹಿಂಬದಿ ಸವಾರನಾಗಿದ್ದ ಆತನ ಸ್ನೇಹಿತ ಗಂಭೀರವಾಗಿ ಗಾಯಗೊಂಡಿದ್ದಾನೆ. ಸಿಸಿಟಿವಿ ಕ್ಯಾಮೆರಾದಲ್ಲಿ ಅಪಘಾತದ ಭಯಾನಕ ದೃಶ್ಯಗಳು ಸೆರೆಯಾಗಿದೆ.

ತೆಲಂಗಾಣ ಶಾಸಕ ಡಾ.ಪಿ.ಹರೀಶ್ ಬಾಬು ಅವರು ಆಶ್ರಿತ್ ಅವರ ನಿವಾಸಕ್ಕೆ ಭೇಟಿ ನೀಡಿ ದುಃಖಿತ ಪೋಷಕರಿಗೆ ಸಾಂತ್ವನ ಹೇಳಿದ್ದಾರೆ. ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಮೃತದೇಹವನ್ನು ಭಾರತಕ್ಕೆ ಕರೆತರಲು ಅನುಕೂಲ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.

ಭಾರತ, ಪಾಕ್ ಸಂಘರ್ಷದ ಬಗ್ಗೆ ಪುಟಿನ್–ಟ್ರಂಪ್ ದೂರವಾಣಿ ಮಾತುಕತೆ; ಮಹತ್ವದ ಚರ್ಚೆ




ಮಾಸ್ಕೋ: ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ದೂರವಾಣಿ ಸಂಭಾಷಣೆಯಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಇತ್ತೀಚಿನ ಸಂಘರ್ಷದ ಬಗ್ಗೆ ಮಹತ್ವದ ಚರ್ಚೆ ನಡೆಸಿದ್ದಾರೆ ಎಂದು ಕ್ರೆಮ್ಲಿನ್ ಸಹಾಯಕರು ತಿಳಿಸಿದ್ದಾರೆ.

ಸಂಭಾಷಣೆಯ ಸಮಯದಲ್ಲಿ ಇಬ್ಬರು ನಾಯಕರು ಉಕ್ರೇನ್ ಬಗ್ಗೆ ಚರ್ಚಿಸಿದರು ಮತ್ತು ಇತರ ಕೆಲವು ವಿಷಯಗಳ ಬಗ್ಗೆಯೂ ಪ್ರಸ್ತಾಪಿಸಿದರು ಎಂದು ಕ್ರೆಮ್ಲಿನ್ ಸಹಾಯಕ ಯೂರಿ ಉಷಾಕೋವ್ ಬ್ರೀಫಿಂಗ್‌ನಲ್ಲಿ ತಿಳಿಸಿದ್ದಾರೆ.

ಉಭಯ ನಾಯಕರೂ ಮಧ್ಯಪ್ರಾಚ್ಯ ಮತ್ತು ಭಾರತ ಮತ್ತು ಪಾಕಿಸ್ತಾನ ನಡುವಿನ ಸಶಸ್ತ್ರ ಸಂಘರ್ಷವನ್ನು ಸಹ ಪ್ರಸ್ತಾಪಿಸಿದರು. ಭಾರತ– ಪಾಕ್ ನಡುವಿನ ಸಂಘರ್ಷವನ್ನು ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ವೈಯಕ್ತಿಕ ಭಾಗವಹಿಸುವಿಕೆಯೊಂದಿಗೆ ನಿಲ್ಲಿಸಲಾಯಿತು ಎಂದು ಉಷಾಕೋವ್ ಅವರ ಹೇಳಿಕೆಯನ್ನು ರಷ್ಯಾದ ಸರ್ಕಾರಿ ಸ್ವಾಮ್ಯದ TASS ಸುದ್ದಿ ಸಂಸ್ಥೆ ಉಲ್ಲೇಖಿಸಿದೆ.

ಏತನ್ಮಧ್ಯೆ, ಭಾರತದೊಂದಿಗಿನ ಸಂಘರ್ಷವನ್ನು ಪರಿಹರಿಸಲು ಸಹಾಯ ಮಾಡುವಂತೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್, ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಒತ್ತಾಯಿಸಿದ್ದಾರೆ ಎಂದು ಪಾಕಿಸ್ತಾನ ಪ್ರಧಾನಿಯ ವಿಶೇಷ ಸಹಾಯಕ ಸೈಯದ್ ತಾರಿಕ್ ಫತೇಮಿ ಹೇಳಿದ್ದಾರೆ.


ಟ್ರಂಪ್ ಜೊತೆಗಿನ ಮುನಿಸಿನ ಬೆನ್ನಲ್ಲೇ ಹೊಸ ರಾಜಕೀಯ ಪಕ್ಷದ ಸುಳಿವು ನೀಡಿದ ಎಲಾನ್ ಮಸ್ಕ್



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಟೆಸ್ಲಾ ಸಿಇಒ ಎಲಾನ್ ಮಸ್ಕ್ ನಡುವಿನ ಭಿನ್ನಾಭಿಪ್ರಾಯ ಬಹಿರಂಗವಾಗಿದ್ದು, ಎಲಾನ್ ಮಸ್ಕ್ ಹೊಸ ರಾಜಕೀಯ ಪಕ್ಷವನ್ನು ಪ್ರಾರಂಭಿಸುವ ಬಗ್ಗೆ ಸುಳಿವು ನೀಡಿದ್ದಾರೆ. ಡೊನಾಲ್ಡ್ ಟ್ರಂಪ್ ಅವರನ್ನು ಕೃತಜ್ಞತೆಯಿಲ್ಲದವರೆಂದು ಕರೆದಿರುವ ಎಲಾನ್ ಮಸ್ಕ್ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಡೊನಾಲ್ಡ್ ಟ್ರಂಪ್ ಎಲಾನ್ ಮಸ್ಕ್ ಅವರ ಸರ್ಕಾರಿ ಒಪ್ಪಂದಗಳನ್ನು ಕಡಿತಗೊಳಿಸುವುದಾಗಿ ಬೆದರಿಕೆ ಹಾಕಿದ್ದಾರೆ, ಮಸ್ಕ್ ಅವರನ್ನು ವಿಶ್ವಾಸದ್ರೋಹಿ ಎಂದು ಕರೆದಿದ್ದಾರೆ.

ಡೊನಾಲ್ಡ್ ಟ್ರಂಪ್ ಮತ್ತು ಎಲಾನ್ ಮಸ್ಕ್ ನಡುವಿನ ಸಾರ್ವಜನಿಕ ಬಿಕ್ಕಟ್ಟು ತೀವ್ರವಾಗಿ ಬಿರುಕು ಮೂಡಿಸಿತು. ಡೊನಾಲ್ಡ್ ಟ್ರಂಪ್ ಒನ್ ಬಿಗ್ ಬ್ಯೂಟಿಫುಲ್ ಮಸೂದೆಯನ್ನು ಅಂಗೀಕರಿಸುತ್ತಿದ್ದಂತೆ ಎಲಾನ್ ಮಸ್ಕ್ ಸಿಡಿದೆದ್ದಿದ್ದರು. ಸ್ನೇಹಿತರಾಗಿದ್ದ ಟ್ರಂಪ್ ಮತ್ತು ಮಸ್ಕ್ ಈಗ ಶತ್ರುಗಳಾಗಿದ್ದಾರೆ. ಈ ಬಗ್ಗೆ ಎಕ್ಸ್ (ಹಿಂದೆ ಟ್ವಿಟರ್)ನಲ್ಲಿ ಪೋಸ್ಟ್ ಮಾಡಿರುವ ಎಲಾನ್ ಮಸ್ಕ್, "ಅಮೆರಿಕದಲ್ಲಿ ಹೊಸ ರಾಜಕೀಯ ಪಕ್ಷವನ್ನು ರಚಿಸಲು ಇದು ಸೂಕ್ತ ಸಮಯವೇ?" ಎಂದು ಕೇಳುವ ಸಮೀಕ್ಷೆಯನ್ನು ಪೋಸ್ಟ್ ಮಾಡಿದ್ದಾರೆ.

ಆಪರೇಷನ್ ಸಿಂಧೂರ್ ಬಗ್ಗೆ ವಿವಾದಾತ್ಮಕ ಪೋಸ್ಟ್: ಗುಜರಾತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಂಧನ



ಅಹಮದಾಬಾದ್: ಆಪರೇಷನ್ ಸಿಂಧೂರ್ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ವಿವಾದಾತ್ಮಕ ಪೋಸ್ಟ್ ಹಾಕಿದ ಆರೋಪದ ಮೇಲೆ ಗುಜರಾತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಜೇಶ್ ಸೋನಿ ಅವರನ್ನು ಗಾಂಧಿನಗರ ಸೈಬರ್ ಕ್ರೈಮ್ ಬ್ರಾಂಚ್ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸೈಬರ್ ಅಪರಾಧ ವಿಭಾಗದ ಸಬ್–ಇನ್ಸ್‌ಪೆಕ್ಟರ್ ನೀಡಿದ ದೂರಿನ ಪ್ರಕಾರ ಸೋನಿ ತಮ್ಮ ಫೇಸ್‌ಬುಕ್ ಪುಟದಲ್ಲಿ ಆಪರೇಷನ್ ಸಿಂಧೂರ್, ರಫೇಲ್ ಒಪ್ಪಂದ ಮತ್ತು ಇತರ ಸೂಕ್ಷ್ಮ ವಿಷಯಗಳಿಗೆ ಸಂಬಂಧಿಸಿದ ವಿಡಿಯೋಗಳು ಮತ್ತು ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ಭಾರತೀಯ ಸೇನೆಯ ನೈತಿಕತೆಯನ್ನು ಕುಗ್ಗಿಸುವ, ಕರ್ತವ್ಯಗಳ ಬಗ್ಗೆ ಅನುಮಾನ ಮೂಡಿಸುವ, ಸಶಸ್ತ್ರ ಪಡೆಗಳ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕುಗ್ಗಿಸುವ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ರಾಷ್ಟ್ರೀಯ ಭದ್ರತೆಯ ಬಗ್ಗೆ ಮಾಹಿತಿ ನೀಡುವ ಗುರಿಯನ್ನು ಈ ಪೋಸ್ಟ್‌ಗಳು ಹೊಂದಿವೆ ಎಂದು ಆರೋಪಿಸಲಾಗಿದೆ.

ಸೋನಿ ಅವರ ಬಂಧನ ರಾಜಕೀಯ ಆರೋಪ, ಪ್ರತ್ಯಾರೋಪಗಳಿಗೆ ಕಾರಣವಾಗಿದ್ದು, ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಶಕ್ತಿಸಿನ್ಹ್ ಗೋಹಿಲ್ ಈ ಕ್ರಮ ಪ್ರತಿಪಕ್ಷಗಳ ಧ್ವನಿ ಅಡಗಿಸುವ ಸ್ಪಷ್ಟ ಪ್ರಯತ್ನ ಎಂದು ಖಂಡಿಸಿದ್ದಾರೆ.

ಹಾಸ್ಟೆಲ್ ಕಟ್ಟಡದಿಂದ ಜಿಗಿದು ಎಂಬಿಬಿಎಸ್ ಪ್ರಥಮ ವರ್ಷದ ವಿದ್ಯಾರ್ಥಿ ಆತ್ಮಹತ್ಯೆ

ಭೋಪಾಲ್: ಸರ್ಕಾರಿ ವೈದ್ಯಕೀಯ ಕಾಲೇಜಿನ ಎಂಬಿಬಿಎಸ್ ಪ್ರಥಮ ವರ್ಷದ ವಿದ್ಯಾರ್ಥಿಯೊಬ್ಬ ಹಾಸ್ಟೆಲ್ ಕಟ್ಟಡದ ನಾಲ್ಕನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಧ್ಯಪ್ರದೇಶದ ಜಬಲ್‌ಪುರ ಜಿಲ್ಲೆಯಲ್ಲಿ ಗುರುವಾರ ನಡೆದಿದೆ.

ಜಬಲ್‌ಪುರ ನೇತಾಜಿ ಸುಭಾಷ್ ಚಂದ್ರ ಬೋಸ್ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಸಂಖ್ಯೆ 4 ರ ನಾಲ್ಕನೇ ಮಹಡಿಯಿಂದ ಮಧ್ಯಾಹ್ನ 12.30 ರ ಸುಮಾರಿಗೆ ಶಿವಾಂಶ್ ಗುಪ್ತಾ ಎಂಬ ವಿದ್ಯಾರ್ಥಿ ಜಿಗಿದಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸಲಾಗಿತ್ತು.

ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಧ್ಯಾಹ್ನ 2.30ರ ಸುಮಾರಿಗೆ ಮೃತಪಟ್ಟಿದ್ದಾರೆ. ಶಿವಾಂಶ್ ಸುಮಾರು ಹದಿನೈದು ದಿನಗಳ ಕಾಲ ತೀವ್ರ ಖಿನ್ನತೆಗೆ ಒಳಗಾಗಿದ್ದರು. ಆದರೆ ಸಮಸ್ಯೆ ಏನು? ಎಂಬುದನ್ನು ಯಾರೊಂದಿಗೂ ಹಂಚಿಕೊಂಡಿರಲಿಲ್ಲ ಎಂದು ಅವರ ಬ್ಯಾಚ್‌ಮೇಟ್‌ಗಳು ಪೊಲೀಸರಿಗೆ ತಿಳಿಸಿದ್ದಾರೆ.

ಅವರ ತಂದೆ ಗುರುಗ್ರಾಮ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಆತ್ಮಹತ್ಯೆಗೂ ಮುನ್ನ ಆತ ಸ್ನೇಹಿತರಿಗೆ ಕಳುಹಿಸಿದ ಸಂದೇಶಗಳನ್ನು ಪೊಲೀಸರು ವಿಶ್ಲೇಷಿಸುತ್ತಿದ್ದಾರೆ. ಮೃತದೇಹವನ್ನು ಶವಪರೀಕ್ಷೆಗೆ ಕಳುಹಿಸಲಾಗಿದ್ದು, ಈ ಕುರಿತು ಜಬಲ್ ಪುರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಮಿತ್ರ ಶನಿವಾರ 7 ಜೂನ್ 2025

ಮೈಸೂರಲ್ಲಿ ಜೂ.27ರಿಂದ ಕೊಡವ ಹಾಕಿ ಲೀಗ್

ಹರಾಜಿನಲ್ಲಿ ಆಟಗಾರರ ಖರೀದಿಸಿ ಆರ್ಥಿಕ ಪ್ರೋತ್ಸಾಹ

● ಲೀಗ್‌ನಲ್ಲಿ 10 ಫ್ರಾಂಚೈಸಿ ತಂಡಗಳು ಭಾಗವಹಿಸಲಿವೆ ● 175 ಆಟಗಾರರು ತಂಡಕ್ಕೆ ಸೇರ್ಪಡೆ



ಕೊಡವ ಹಾಕಿ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಆಯ್ಕೆಯಾಗಿರುವ ಕ್ರೀಡಾಪಟುಗಳು

ಮೈಸೂರು, ಜೂ.6– ಮೈಸೂರು ಕೊಡವ ಸಮಾಜ ಯೂತ್ ವಿಂಗ್ ವತಿಯಿಂದ ಕೊಡವ ಪ್ರತಿಭಾವಂತ ಹಾಕಿ ಆಟಗಾರರಿಗಾಗಿ ಕೊಡವ ಹಾಕಿ ಪ್ರೀಮಿಯರ್ ಲೀಗ್ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಮೈಸೂರು ಚಾಮುಂಡಿ ವಿಹಾರ ಸ್ಟೇಡಿಯಂನಲ್ಲಿ ಜೂ.27, 28 ಹಾಗೂ 29 ರಂದು ಟೂರ್ನಿ ನಡೆಯಲಿದೆ.

ಹರಾಜಿನಲ್ಲಿ ಆಟಗಾರರನ್ನು ಖರೀದಿಸಿ ಆರ್ಥಿಕ ಪ್ರೋತ್ಸಾಹಕ್ಕೂ ಮುಂದಾಗಿದೆ. ಕೊಡವ ಆಟಗಾರರನ್ನು ಒಳಗೊಂಡ 10 ಫ್ರಾಂಚೈಸಿ ತಂಡಗಳು ಲೀಗ್‌ನಲ್ಲಿ ಪಾಲ್ಗೊಳ್ಳುತ್ತಿದ್ದು, ಇದೇ ಮೊದಲ ಬಾರಿಗೆ ಕೊಡವ ಹಾಕಿಯಲ್ಲಿ ಲೀಗ್ ಹಂತದ ಫ್ರಾಂಚೈಸಿ ತಂಡಗಳು ಭಾಗವಹಿಸುತ್ತಿವೆ.

ಮೈಸೂರು ಕೊಡವ ಸಮಾಜ ಯೂತ್ ಹಾಕಿ ಮೈಸೂರು ಹಾಗೂ ಕರ್ನಾಟಕ ಹಾಕಿ ಕ್ರೀಡೆಗೆ ಮತ್ತಷ್ಟು ಪ್ರೋತ್ಸಾಹ ಸಿಗಬೇಕು ಎಂಬ ಚಿಂತನೆ ಅನುಷ್ಠಾನಗೊಳ್ಳುತ್ತಿದೆ. ಕೊಡವ ಹಾಕಿ ನಮ್ಮೆಯಿಂದ ಸಾಕಷ್ಟು ಪ್ರತಿಭೆಗಳು ಅವಕಾಶ ಪಡೆದುಕೊಂಡಿದ್ದು, ಮತ್ತೊಂದು ಹಂತಕ್ಕೆ ಆಟಗಾರರನ್ನು ಮುನ್ನಡೆಸಲು ಸಂಸ್ಥೆ ಮುಂದಾಗಿದೆ.

ಪ್ರತಿ ತಂಡಗಳು ಮೂವರು ಐಕಾನ್ ಆಟಗಾರರನ್ನು ಮೊದಲ ತಂಡಕ್ಕೆ ಖರೀದಿಸಬೇಕಿದೆ. ಇದರೊಂದಿಗೆ ತಂಡಕ್ಕೆ ಕನಿಷ್ಠ 15 ಆಟಗಾರರು ಗರಿಷ್ಠ 18 ಆಟಗಾರರನ್ನು ಬಿಡ್ಡಿಂಗ್ ಮಾಡಲಾಗಿದೆ ಮಹಿಳಾ ಆಟಗಾರ್ತಿ ಹಾಗೂ 19 ವಯೋಮಿತಿಯ ಒಬ್ಬ ಆಟಗಾರರಿಗೆ ತಂಡವು ಕಡ್ಡಾಯವಾಗಿ ಸೇರ್ಪಡೆಗೊಳಿಸಿದೆ. ಇದರಿಂದಾಗಿ ಮಹಿಳೆ ಮತ್ತು 19 ಆಟಗಾರರಿಗೆ ಆಡಲು ಅವಕಾಶ ಸಿಕ್ಕಿದೆ.

ಹರಾಜು: ಮೈಸೂರು ಐಬಿಸ್ ಸ್ಟೈಲಿಶ್ ಹೋಟೆಲ್ ಸಭಾಂಗಣದಲ್ಲಿ ನಡೆದ ಹರಾಜು ಪ್ರಕ್ರಿಯೆಯಲ್ಲಿ 240 ಆಟಗಾರರು ಸ್ಪರ್ಧೆಯಲ್ಲಿದ್ದರು. ಒಟ್ಟು 175 ಆಟಗಾರರು ಹರಾಜು ಮೂಲಕ ತಂಡ ಸೇರಿಕೊಂಡಿದ್ದಾರೆ. ಹಿರಿಯ, ಕಿರಿಯ ಹಾಗೂ ಮಹಿಳಾ ಆಟಗಾರರು ಹರಾಜಿನಲ್ಲಿ ಮಾರಾಟವಾಗಿರುವುದು ವಿಶೇಷವಾಗಿದೆ.

ಮೈಸೂರು ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಕೋಟೇರ ವೇದಿತ್ ಉತ್ತಪ್ಪ, ಮೈಸೂರು ಕೊಡವ ಸಮಾಜ ಅಧ್ಯಕ್ಷ ಪೊಂಜಂಡ ಗಣಪತಿ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಹಾಕಿ ಮೈಸೂರು ಅಧ್ಯಕ್ಷ ಕೊಂಡ ದಿಲಿಪ್, ಮೈಸೂರು ಕೊಡವ ಸಮಾಜ ಉಪಾಧ್ಯಕ್ಷ ಕೋಟೇರ ಮುದ್ದಯ್ಯ, ಹಾಕಿ ಅಕಾಡೆಮಿ ನಿರ್ದೇಶಕ ಮುಕ್ಕಾಟೀರ ಸೋಮಯ್ಯ, ಪ್ರಸೂತಿ ತಜ್ಞೆ ಡಾ.ಅಪ್ಪನೆರವಂಡ ಸೋನಿಯ ಮಂದಪ್ಪ, ಭಾರತೀಯ ಜೂನಿಯರ್ ಹಾಕಿ ತರಬೇತುದಾರ ಬೊಳ್ಳೇಪಂಡ ಕಾರ್ಯಪ್ಪ ಐಬಿಸ್ ಸ್ಟೈಲಿಶ್ ಹೋಟೆಲ್ ಉದ್ಯಮಿ ಗಣೇಶ್ ಅಯ್ಯ, ಮೈಸೂರು ಕೊಡವ ಸಮಾಜ ಕ್ರೀಡಾ ಮತ್ತು ಸಾಂಸ್ಕೃತಿಕ ಕೇಂದ್ರದ ಉಪಾಧ್ಯಕ್ಷ ಮೇಚಂಡ ಪ್ರಕಾಶ್ ಇದ್ದರು.

> ಹಿರಿಯ, ಕಿರಿಯ ಹಾಗೂ ಹಾಕಿ ಕ್ರೀಡೆಯಲ್ಲಿ ಸಾಕಷ್ಟು ಅನುಭವ ಹೊಂದಿರುವವರ ಸಂಗಮಕ್ಕೆ ಕೊಡವ ಹಾಕಿ ಪ್ರೀಮಿಯರ್ ಲೀಗ್ ಅವಕಾಶ ನೀಡುತ್ತಿದೆ. ಅನುಭವ ಒಬ್ಬ ಆಟಗಾರನನ್ನು ಸಾಕಷ್ಟು ಬೆಳೆಸುತ್ತದೆ.
> –ಕೋಟೇರ ವೇದಿತ್ ಉತ್ತಪ್ಪ ಅಧ್ಯಕ್ಷರು, ಮೈಸೂರು ಕೊಡವ ಸಮಾಜ ಯೂತ್ ವಿಂಗ್

ಕೊಟ್ಟಂಗಡ ಆಯುಧ್ ಅಪ್ಪಣ್ಣ ಬಿಡ್ಡಿಂಗ್ ಪ್ರಕ್ರಿಯೆ ನಡೆಸಿಕೊಟ್ಟರು. ಅಜ್ಜೇಟಿರ ವಿಕ್ರಂ ಉತ್ತಪ್ಪ ನಿರ್ವಹಣೆ ಮಾಡಿದರು.

ಎಂಟಿಬಿ ರಾಯಲ್ಸ್, ಕೂರ್ಗ್ ಟೈಟನ್ಸ್, ಕಾಕೋಟ್ ಸ್ಟೈಕರ್ಸ್, ಪರ್ಳೆ ತಾಲೂಕ್, ಅಂಜಿಗೇರಿ ನಾಡ್, ಸೌತ್ ಸೈಡ್ ರೇಂಜರ್ಸ್, ಕನೆಕ್ಟಿಂಗ್ ಕೊಡವಾಸ್, ಕೂರ್ಗ್ ಯುನೈಟೆಡ್, ಕೊಡವ ವಾರಿಯರ್ಸ್, ಕೊಡವ ಟ್ರೈಬ್ ಸೇರಿದಂತೆ 10 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ.

ಐಕಾನ್ ಆಟಗಾರರಾದ ಎ.ಸಿ.ಸುಬ್ಬಯ್ಯ, ದೇಶ್ ಪೂವಣ್ಣ, ಐ.ಆರ್.ನಾಚಪ್ಪ, ಕೆ.ಸಿ.ಬೋಪಣ್ಣ, ಚಿರನ್ ಮೇದಪ್ಪ, ಮಾನವ್ ಮೇದಪ್ಪ, ಎಂ.ಟಿ.ಆರ್ಯನ್ ಉತ್ತಪ್ಪ, ಎಂ.ಎ.ಶಾನ್ ಮೊಣ್ಣಪ್ಪ ಎಂ.ಬಿ.ಕಾರ್ಯಪ್ಪ ಬಿ.ಎನ್.ಬೋಪಣ್ಣ, ಕೆ.ಆರ್.ಗೌರವ್ ಗಣಪತಿ, ಸೋಮೇಯಂಡ ಅಪ್ಪಚ್ಚು, ಸಿ.ಕೆ.ಸೋಮಯ್ಯ, ಚೆಲ್ಸಿ ಮೇದಪ್ಪ, ಬಿ.ಪಿ.ಚಿಂಗಪ್ಪ ಕೆಆರ್.ಚಿಂಗಪ್ಪ ಎಂ.ಟಿ.ಮಂಜುನಾಥ್, ಕೆ.ಪಿ.ಸುಬ್ಬಯ್ಯ, ಚೇತನ್ ಚಿಣ್ಣಪ್ಪ ಅಯ್ಯಣ್ಣ ಕೆ.ಬಿ.ತಿಮ್ಮಯ್ಯ, ಧನುಶ್ ಕಾವೇರಪ್ಪ, ಪಿ.ಆರ್.ಅಯ್ಯಪ್ಪ, ಎಂ.ಜಿ.ಪೂಣಚ್ಚ, ಅಪ್ಪಚ್ಚು ತರುಣ್ ಗಣಪತಿ, ಮಿಥುನ್ ಅಯ್ಯಪ್ಪ ಪ್ರತಿಕ್ ಪೂವಣ್ಣ, ಪಿ.ವೈ. ಅಪ್ಪಣ್ಣ, ಶರತ್ ಸೋಮಣ್ಣ ಭಾಗವಹಿಸುವರು.

ಲಯನ್ಸ್ ಪ್ರಾಂತೀಯ ಅಧ್ಯಕ್ಷರಾಗಿ ಡಾ.ಕೋಟೆರ ಸಿ.ಪಂಚಮ್ ತಿಮ್ಮಯ್ಯ

ಜಿಲ್ಲಾ ಪ್ರಾಂತೀಯ ಅಧ್ಯಕ್ಷರಾಗಿ ಡಾ.ಕೋಟೆರ ಸಿ.ಪಂಚಮ್ ತಿಮ್ಮಯ್ಯ ಅಧಿಕಾರ ವಹಿಸಿ ಕೊಂಡರು.



ನಾಪೋಕ್ಲು, ಜೂ.6–ಕೊಡಗು ಜಿಲ್ಲಾ ಪ್ರಾಂತೀಯ ಅಧ್ಯಕ್ಷರನ್ನಾಗಿ ನಾಪೋಕ್ಲು ಲಯನ್ಸ್ ಕ್ಲಬ್ಬಿನ ಡಾ.ಕೋಟೆರ ಸಿ.ಪಂಚಮ್ ತಿಮ್ಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಲಯನ್ಸ್ ಜಿಲ್ಲಾ 317 ಡಿ ಯ ಅಧೀನದಲ್ಲಿ ಬರುವ ರೆವಿನ್ಯೂ ಜಿಲ್ಲೆಯ ನೂತನ ರಾಜ್ಯಪಾಲ ಲಯನ್ ಅರವಿಂದ ಶೆಣೈ ನಾಯಕತ್ವದಲ್ಲಿ ನಡೆದ ಸಭೆಯಲ್ಲಿ ದಕ್ಷಿಣ ಕನ್ನಡ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳನ್ನು ಒಳಗೊಂಡಂತೆ ಕೊಡಗು ಪ್ರಾಂತ್ಯದಲ್ಲಿ 12 ಲಯನ್ಸ್ ಸಂಸ್ಥೆಗಳಿದ್ದು ಈತಿಂಗಳಿಂದ ವರ್ಷದ ಅವಧಿಗೆ ಇವರು ಅಧಿಕಾರದಲ್ಲಿರುತ್ತಾರೆ. ಮಡಿ ಕೇರಿಯ ಲಯನ್ಸ್ ಕ್ಲಬ್‌ನಿಂದ ನಟರಾಜ ಕೆಸ್ತೂರ್, ಗೋಣಿಕೊಪ್ಪ ಲಯನ್ಸ್ ಕ್ಲಬ್ಬಿನ ಚಿಟ್ಟಿಯಾಡ ಅಪ್ಪಣ್ಣ, ಮೂರ್ನಾಡು ಲಯನ್ಸ್ ಕ್ಲಬ್ಬಿನ ಬಡುವಂಡ ಬಿಂದು ಗಣಪತಿ ಮೊದಲಾದ ಮೂವರು ವಲಯಾಧ್ಯಕ್ಷರನ್ನು ಇವರ ಅಧೀನದಲ್ಲಿ ಬರುವಂತೆ ಆಯ್ಕೆ ಮಾಡಲಾಗಿದೆ. ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಅಧಿಕಾರ ವಹಿಸಿಕೊಂಡರು.

ಬಾಲ್ಯ ವಿವಾಹ, ಬಾಲ ಕಾರ್ಮಿಕ ಪ್ರಕರಣ ಬಗ್ಗೆ ಗಮನಹರಿಸಲು ಜಿಲ್ಲಾಧಿಕಾರಿ ಸೂಚನೆ



ಜಿಲ್ಲಾಧಿಕಾರಿ ವೆಂಕಟ್ ರಾಜಾ ವಿವಿಧ ಅಭಿವೃದ್ಧಿ ಕಾರ್ಯಗಳು ಹಾಗೂ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮಡಿಕೇರಿ: ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪ್ರಕರಣಗಳು ಕಂಡು ಬರದಂತೆ ಗಮನಹರಿಸಬೇಕು. ಈ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಅರಿವು ಮೂಡಿಸುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ಹಾಗೂ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಲು ಎಲ್ಲರೂ ಕೈಜೋಡಿಸಬೇಕು. ಇಂತಹ ಪ್ರಕರಣಗಳು ಕಂಡು ಬರದಂತೆ ಹೆಚ್ಚಿನ ಜಾಗೃತಿ ಮೂಡಿಸುವಂತೆ ನಿರ್ದೇಶನ ನೀಡಿದರು.

ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಮಾತನಾಡಿ ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳ ಬಗ್ಗೆ ಮಾಹಿತಿ ನೀಡಿದರು. ಕುಡಿಯುವ ನೀರು, ಗ್ರಾಮೀಣ ರಸ್ತೆ ಅಭಿವೃದ್ಧಿ, ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತಿತರ ಬಗ್ಗೆ ವಿವರಿಸಿದರು.

ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಸಿ.ರಂಗಧಾಮಪ್ಪ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಟರಾಜ, ಪಶುಪಾಲನೆ ಇಲಾಖೆ ಉಪನಿರ್ದೇಶಕ ಲಿಂಗರಾಜ ದೊಡ್ಡಮನಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯಾಧಿಕಾರಿ ಎಸ್. ಹೊನ್ನೇಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ತಿಪ್ಪಣ್ಣ ಪಿ.ಸಿರಸಗಿ, ಮಕ್ಕಳ ರಕ್ಷಣಾಧಿಕಾರಿ ಬಿ. ಈರಸ್ವಾಮಿ, ಕಾರ್ಮಿಕಾಧಿಕಾರಿ ಟಿ. ಕಾವೇರಿ, ಜಿಲ್ಲಾ ಕಾರ್ಮಿಕ ಯೋಜನಾ ಸೊಸೈಟಿಯ ಯೋಜನಾ ನಿರ್ದೇಶಕ ಶಿರಾಜ್ ಅಹ್ಮದ್, ಜಿ.ಪಂ ಎಂಜಿನಿಯರ್ ನಾಯಕ್, ಭಾಸ್ಕರ್, ಸಣ್ಣ ನೀರಾವರಿ ಇಲಾಖೆ ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ ಕುಮಾರಸ್ವಾಮಿ, ತಾ.ಪಂ ಇಒ ಅಪ್ಪಣ್ಣ, ತಹಶೀಲ್ದಾರ್ ಪ್ರವೀಣ್ ಕುಮಾರ್, ಕೃಷ್ಣಮೂರ್ತಿ, ಕಿರಣ್ ಗೌರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ನೆಹರು, ಜಿಲ್ಲಾ ಆಯುಷ್ ಅಧಿಕಾರಿ ಶೈಲಜಾ, ಅರುಣ್, ಇತರರು ಇಲಾಖೆಯ ಮಾಹಿತಿ ನೀಡಿದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ : ಶಶಿ ಅಚ್ಚಪ್ಪ



ವಿರಾಜಪೇಟೆ ಜೂನಿಯರ್ ಕಾಲೇಜಿನ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು.

ವಿರಾಜಪೇಟೆ, ಜೂ.6–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಹಾಗೂ ವಿರಾಜಪೇಟೆ ಜೂನಿಯರ್ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಹೋರಾಟ ಸಮಿತಿಯ ಸಂಚಾಲಕ ಶಶಿ ಅಚ್ಚಪ್ಪ ಮಾತನಾಡಿ, ಪ್ರತಿಯೊಬ್ಬರು ಗಿಡ ನೆಡುವುದರೊಂದಿಗೆ ಅದನ್ನು ರಕ್ಷಿಸಿ ಪೋಷಿಸುವುದಲ್ಲದೆ ಹೆಚ್ಚು ಗಿಡಗಳನ್ನು ನೆಡುವ ಮೂಲಕ ಪರಿಸರವನ್ನು ಸಂರಕ್ಷಿಸುವುದು ಎಲ್ಲರ ಹೊಣೆಯಾಗಿದೆ ಎಂದರು.

ಉಪನ್ಯಾಸಕ ಆರ್.ವಿನೋದ್ ಕುಮಾರ್ ಮಾತನಾಡಿ, ಪರಿಸರ ಸಂರಕ್ಷಣೆ ವಿಚಾರದಲ್ಲಿ ಯಾವುದೇ ಲಾಭವನ್ನು ಯಾರೂ ಬಯಸಬಾರದು ಪರಿಸರವನ್ನು ರಕ್ಷಿಸುವುದು ನಮ್ಮಗಳ ಕರ್ತವ್ಯವೂ ಆಗಿದೆ ಎಂದರು.

ಗಿಡನೆಡುವ ಕಾರ್ಯಕ್ರಮದಲ್ಲಿ ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿಯ ಕಾರ್ಯದರ್ಶಿ ಬಿ.ಡಿ.ಸುನಿತಾ, ಸದಸ್ಯ ತೆರೇಸಾ ವಿಕ್ಟರ್, ಚೇತನ್, ಗಾನವಿ ಹಾಗೂ ಜೂನಿಯರ್ ಕಾಲೇಜಿನ ಉಪನ್ಯಾಸಕ ರೀಟಾ ಐರಿಸ್ ಅಲ್ವರಿಸ್, ದಮಯಂತಿ, ಪವಿತ್ರ ರೈ, ಸುಜಾತ, ರೇಮಂಡ್, ತಿಮ್ಮಯ್ಯ, ಪ್ರೌಢಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್, ಶಿಕ್ಷಕ ತಮ್ಮಯ್ಯ, ಪ್ರತೀಕ, ಮದನ್, ರಂಜಿನಿ, ಎನ್‌ಎಸ್‌ಎಸ್ ಕಾಲೇಜು, ಪ್ರೌಢಶಾಲಾ ವಿದ್ಯಾರ್ಥಿಗಳಿದ್ದರು.

ಜೂ.9 ದೀಪಾ ಭಾಸ್ತಿಗೆ ಗೌರವ ಸಮರ್ಪಣೆ

ಮಡಿಕೇರಿ: ಅಂತಾರಾಷ್ಟ್ರೀಯ ಮಟ್ಟದ 'ಬೂಕರ್ ಪ್ರಶಸ್ತಿ' ಪುರಸ್ಕೃತರಾದ ದೀಪಾ ಭಾಸ್ತಿ ಅವರಿಗೆ ಗೌರವ ಸಮರ್ಪಣೆ ಸಮಾರಂಭ ಜೂ.9 ರಂದು ನಡೆಯಲಿದೆ.

ಕೊಡಗು ಜಿಲ್ಲಾ ಮಹಿಳಾ ಬರಹಗಾರರ ಸಂಘ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತ ಆಶ್ರಯದಲ್ಲಿ ನಡೆಯಲಿದೆ.

ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್, ಹಾಸನದ ಕವಿ ಮತ್ತು ಅನುವಾದಕಿ ಜ.ನಾ.ತೇಜಶ್ರೀ, ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್, ಜಿಲ್ಲಾ ಮಹಿಳಾ ಬರಹಗಾರರ ಸಂಘದ ಅಧ್ಯಕ್ಷೆ ಪುದಿಯನೆರವನ ರೇವತಿ ರಮೇಶ್, ತಾಲೂಕು ಕಸಾಪ ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್ ಪಾಲ್ಗೊಳ್ಳಲಿದ್ದಾರೆ.

ಬಸ್–ಕಾರು ಮುಖಾಮುಖಿ ಡಿಕ್ಕಿ, ಕಾರು ಚಾಲಕ ಸಾವು



ಬಸ್ ಮುಂಭಾಗ ಜಖಂಗೊಂಡಿರುವುದು.



ಕಾರಿನಲ್ಲಿ ಚಾಲಕ ಸ್ಥಳದಲ್ಲೆ ಸಾವಿಗೀಡಾಗಿರುವುದು

ಕೊಳ್ಳೇಗಾಲ. ಜೂ.6–ಮ.ಬೆಟ್ಟ ಪ್ರಾಧಿಕಾರ ಬಸ್ ಹಾಗೂ ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರು ಚಾಲಕ ಸ್ಥಳದಲ್ಲೇ ಸಾವನ್ನಪ್ಪಿದ್ದು, ಬಸ್ಸಿನಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯ ಗೊಂಡಿರುವ ಘಟನೆ ತಾಲೂಕಿನ ಧನಗೆರೆ ಸಮೀಪ ಇಂದು ಸಂಭವಿಸಿದೆ.

ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ವಿಘ್ನೇಶ್(28) ಎಂಬಾತನೇ ಮೃತಪಟ್ಟ ದುರ್ದೈವಿ. ಬಸ್ ಚಾಲಕ ರಮೇಶ್ ಹಾಗೂ ಪ್ರಯಾಣಿಕ ಪಾಳ್ಯ ಗ್ರಾಮದ ಜಯರಾಮು ಗಾಯಗೊಂಡು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತಾಲೂಕಿನ ಧನಗೆರೆ ಗ್ರಾಮದ ಮುಖ್ಯರಸ್ತೆಯಲ್ಲಿ ಬೆಳಿಗ್ಗೆ ಬೆಂಗಳೂರಿನಿಂದ ತಮಿಳುನಾಡು ಕಡೆಗೆ ಹೋಗುತ್ತಿದ್ದ ಕಾರು ಮಹದೇಶ್ವರ ಬೆಟ್ಟದಿಂದ ಬೆಂಗಳೂರಿಗೆ ಹೋಗುತಗ್ತಿದ್ದ ಮಹದೇಶ್ವರಬೆಟ್ಟ ಪ್ರಾಧಿಕಾರಕ್ಕೆ ಸೇರಿದ ಬಸ್ ನಡುವೆ ಡಿಕ್ಕಿ ಸಂಭವಿಸಿದೆ ಸುದ್ದಿ ತಿಳಿದು ಸ್ಥಳಕ್ಕೆ ತೆರಳಿದ ಎಸ್‌ಐ ಸುಪ್ರೀತ್ ಹಾಗೂ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬೈಕ್‌ಗೆ ಪಿಕಪ್ ವಾಹನ ಡಿಕ್ಕಿ: ಸವಾರ ಸಾವು



ಚಾಮರಾಜನಗರ, ಜೂ.6 – ಬೈಕ್‌ಗೆ ಪಿಕಪ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಉಡಿಗಾಲದ ಬಳಿ ನಡೆದಿದೆ.

ತಾಲೂಕಿನ ಉಗನೇದಹುಂಡಿ ಗ್ರಾಮದ ನಿವಾಸಿ ಸಿದ್ದರಾಜು(22) ಮೃತಪಟ್ಟ ಸವಾರ. ಈತ ತೆರಕಣಾಂಬಿಯಿಂದ ಸ್ವ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಚಾಮರಾಜನಗರದಿಂದ ಗುಂಡ್ಲುಪೇಟೆಗೆ ಹೋಗುತ್ತಿದ್ದ ಪಿಕಪ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಸಿದ್ದರಾಜು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ನಗರದ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲೆಮಹದೇಶ್ವರಬೆಟ್ಟದಲ್ಲಿ ತಿರುಪತಿ ಮಾದರಿ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣ

ಹನೂರು: ಧಾರ್ಮಿಕ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ತಿರುಪತಿ ಮಾದರಿಯಲ್ಲಿ ದರ್ಶನ ಸರತಿ (ಕ್ಯೂ) ವ್ಯವಸ್ಥೆಯನ್ನು ಕಲ್ಪಿಸಲು ಶ್ರೀಮಲೆ ಮಹದೇಶ್ವರ ಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಮುಂದಾಗಿದ್ದು, ಈ ನಿಟ್ಟಿನಲ್ಲಿ ನೂತನ ಕ್ಯೂ ಕಾಂಪ್ಲೆಕ್ಸ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

2021ರ ಆಗಸ್ಟ್‌ನಲ್ಲಿ ಅಂದಾಜು 24 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಲು ಅನುಮೋದನೆ ಪಡೆದುಕೊಳ್ಳಲಾಗಿತ್ತು. ಆದರೆ ಭಕ್ತಾದಿಗಳಿಗೆ ಹೆಚ್ಚಿನ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಪುನರ್ ಕ್ರಿಯಾ ಯೋಜನೆ ತಯಾರಿಸಿ 45.85 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಪ್ರಸ್ತುತ ಶೇ.70 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ವರ್ಷಾಂತ್ಯದಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆಯಿದೆ.

ಪ್ರಸ್ತುತ ನಿರ್ಮಾಣವಾಗುತ್ತಿರುವ ಸರತಿ ಸಾಲಿನ ಸಂಕೀರ್ಣದ ನೆಲ ಮಹಡಿ ಹಾಗೂ ಮೊದಲ ಅಂತಸ್ತಿನಲ್ಲಿ ಒಂದು ಬ್ಲಾಕ್‌ನಲ್ಲಿ 500 ಜನರಂತೆ ಒಟ್ಟು 8 ಬ್ಲಾಕ್‌ಗಳನ್ನು ನಿರ್ಮಿಸಲಾಗುತ್ತಿದೆ. ಪ್ರತಿ ಬ್ಲಾಕ್‌ನಲ್ಲಿಯೂ ಮಹಿಳೆಯರು, ಪುರುಷರು, ಅಂಗವಿಕಲರಿಗೆ ಪ್ರತ್ಯೇಕ ಶೌಚಗೃಹ, ಶುದ್ಧ ಕುಡಿಯುವ ನೀರು, ಫ್ಯಾನ್, ತಿಂಡಿ ವ್ಯವಸ್ಥೆ ಒದಗಿಸುವ ಉದ್ದೇಶ ಹೊಂದಲಾಗಿದೆ.

ಸಂಕೀರ್ಣದಿಂದ ದೇಗುಲದ ಆಲಂಬಾಡಿ ದ್ವಾರದವರೆಗೆ 6 ಮೀಟರ್ ಸುರಂಗ ಮಾರ್ಗ ಹಾಗೂ ಮೆಟ್ಟಿಲುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಭಕ್ತರ ಅನುಕೂಲಕ್ಕಾಗಿ ಈ ಮಾರ್ಗದಲ್ಲಿ ಗಣಕೀಕೃತ ಎಲ್‌ಇಡಿ ಪರದೆಯ ಮೇಲೆ ಉಪಯುಕ್ತ ಮಾಹಿತಿ ನೀಡುವ ವ್ಯವಸ್ಥೆ ಮಾಡಲಾಗಿದೆ. ಹಾಗಾಗಿ ಈ ಯೋಜನೆ ಪೂರ್ಣಗೊಂಡರೆ ಕ್ಷೇತ್ರಕ್ಕೆ ಬರುವಂತಹ ಭಕ್ತಾದಿಗಳು ಯಾವುದೇ ತೊಂದರೆ ಇಲ್ಲದೆ ಮಾದಪ್ಪನ ದರ್ಶನ ಪಡೆಯಲು ಅನುಕೂಲವಾಗಲಿದೆ.

ದಾಸೋಹ ಭವನ: ಬೆಟ್ಟಕ್ಕೆ ಇತ್ತೀಚಿನ ದಿನಗಳಲ್ಲಿ ಭೇಟಿ ನೀಡುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದು, ಈ ನಿಟ್ಟಿನಲ್ಲಿ 90 ಕೋಟಿ ವೆಚ್ಚದಡಿ ಅತ್ಯಾಧುನಿಕವಾದ ಬೃಹತ್ ದಾಸೋಹ ಭವನ ನಿರ್ಮಿಸಲಾಗುತ್ತಿದ್ದು, ಈ ಭವನದಲ್ಲಿ ಒಂದೇ ಬಾರಿಗೆ ಸುಮಾರು 4 ಸಾವಿರ ಜನರು ಊಟ ಮಾಡುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪರಿಸರ ಸಂರಕ್ಷಣೆಗೆ ಪೂರಕ ಚಟುವಟಿಕೆಯಿಂದ ಸಮಾಜಕ್ಕೆ ಕೊಡುಗೆ ನೀಡಿ: ನ್ಯಾಯಾಧೀಶ ಈಶ್ವರ್



ಕೆ.ಡಿ.ಪಿ. ಸಭಾಂಗಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಗಿಡಕ್ಕೆ ನೀರೆರೆಯುವುದರ ಮೂಲಕ ಗಣ್ಯರು ಉದ್ಘಾಟಿಸಿದರು

ಚಾಮರಾಜನಗರ, ಜೂ.6– ಪರಿಸರ ಸಂರಕ್ಷಣೆಗೆ ಪೂರಕ ಚಟುವಟಿಕೆ ಕೈಗೊಳ್ಳುವ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ ಸಲಹೆ ನೀಡಿದ್ದಾರೆ.

ನಗರದ ಹಳೇ ಕೆ.ಡಿ.ಪಿ. ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಅರಣ್ಯ ಇಲಾಖೆ, ನಗರಸಭೆ, ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮೈಸೂರಿನ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ 'ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗಾಣಿಸುವ' ಘೋಷವಾಕ್ಯದೊಂದಿಗೆ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರ ಆರೋಗ್ಯಯುತ ಬದುಕಿಗೆ ಪರಿಸರವೇ ಕಾರಣವಾಗಿದೆ. ನಮ್ಮನ್ನು ರಕ್ಷಿಸುವ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕು. ಈ ಬಗ್ಗೆ ಇತರರಿಗೂ ಜಾಗೃತಿ ಮೂಡಿಸಬೇಕು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಮೂಲಭೂತ ಕರ್ತವ್ಯವೂ ಆಗಿದೆ ಎಂದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ ಪರಿಸರದ ಮೌಲ್ಯಯುತ ಚಿಂತನೆಗಳನ್ನು ಮಕ್ಕಳಿಗೆ ಬಾಲ್ಯದಿಂದಲೇ ತುಂಬಬೇಕು. ಪ್ರಸ್ತುತ ಚಂಡೀಗಡ ದೇಶದ ಸ್ವಚ್ಛನಗರಗಳ ಸಾಲಿನಲ್ಲಿ ಮೊದಲ ಸ್ಥಾನದಲ್ಲಿದೆ. ಚಂಡೀಗಡ ಸ್ವಚ್ಛ ನಗರವಾಗಲು ಅಲ್ಲಿನ ಮಕ್ಕಳೇ ಸ್ವಚ್ಛತಾ ರಾಯಭಾರಿಗಳಾಗಿದ್ದಾರೆ. ನಮ್ಮ ಮಕ್ಕಳಲ್ಲೂ ಪರಿಸರ ಸ್ವಚ್ಛತೆಯ ಕಾಳಜಿಯನ್ನು ಮೂಡಿಸಬೇಕಾಗಿದೆ ಎಂದರು. ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಪಿ.ಸಿ. ಶ್ರೀನಿವಾಸ ಮಾತನಾಡಿದರು.

ಪಟ್ಟಣದಲ್ಲಿ 15 ಸಾವಿರ ಗಿಡಗಳನ್ನು ಬೆಳೆಸಿ, ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ರಾಜ್ಯಪ್ರಶಸ್ತಿ ಪಡೆದಿರುವ ನಗರದ ಪರಿಸರಪ್ರೇಮಿ ಸಿ.ಎಂ. ವೆಂಕಟೇಶ್‌ರನ್ನು ಸನ್ಮಾನಿಸಲಾಯಿತು. ಇದೇ ವೇಳೆ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಆಲೂರು ಮಹೇಶ್ ಪ್ರಭು ವಿವಿಧ ಶಾಲೆಗಳಿಗೆ ತೆಂಗಿನ ಸಸಿಗಳನ್ನು ಉಚಿತವಾಗಿ ವಿತರಿಸಿದರು. ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಏರ್ಪಡಿಸಲಾಗಿದ್ದ ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ಬಹುಮಾನ ವಿತರಿಸಲಾಯಿತು.

ನಗರದ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕಣಾಧಿಕಾರಿ ಪ್ರಕಾಶ್ಕರ್ ಅಕ್ಷಯ್ ಅಶೋಕ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್, ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠ ರಾಜೇ ಅರಸ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಕಾಶ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಕೆ.ಎಲ್.ಸವಿತ, ಉಪ ಪರಿಸರ ಅಧಿಕಾರಿ ಡಾ.ಎಂ.ಶೃತಿ, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶುಶ್ರೂಷಕರು ನಗು ನಗುತ್ತಲೆ ರೋಗಿಗಳನ್ನು ಸಂತೈಸಿ: ಡಾ.ಚಿದಂಬರಂ

ಕೊಳ್ಳೇಗಾಲ: ನಗು ನಗುತ್ತಲೆ ರೋಗಿಗಳನ್ನು ಸಂತೈಸುವ ಮೂಲಕ ಶುಶ್ರೂಷಕರು ವೃತ್ತಿಯ ಗೌರವ ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಚಿದಂಬರಂ ಹೇಳಿದರು

ಜೆಎಸ್‌ಎಸ್ ನರ್ಸಿಂಗ್ ಶಾಲೆ ವತಿಯಿಂದ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ ಅಭಿವೃದ್ಧಿಯು ಶಿಕ್ಷಣ ಆರೋಗ್ಯ ಹಾಗೂ ಉದ್ಯೋಗದ ಮೇಲೆ ಆಧಾರಿತವಾಗಿದೆ. ಸೇವಾ ಮನೋಭಾವವನ್ನು ಅನುಸರಿಸಿದರೆ ಜೀವವನ್ನು ಉಳಿಸಲು ಸಾಧ್ಯ. ಈ ನಿಟ್ಟಿನಲ್ಲಿ ಶುಶ್ರೂಷಕರ ಸೇವೆ ಸ್ವಾರ್ಥ ರಹಿತ ಹಾಗೂ ಮಾನವೀಯತೆಯಿಂದ ಕೂಡಿರಲಿ ಎಂದರು

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಉಪವಿಭಾಗಾಧಿಕಾರಿ ಮಹೇಶ್ ಮಾತನಾಡಿ, ಶುಶ್ರೂಷಕರ ಸೇವೆ ಅನನ್ಯ ಹಾಗೂ ಅಮೂಲ್ಯವಾದುದು, ಇದು ಅತ್ಯಂತ ಪವಿತ್ರ ವೃತ್ತಿಯಾಗಿದೆ ಎಂದರು.

ಸರ್ಕಾರಿ ಆಸ್ಪತ್ರೆ ಶುಶ್ರೂಷಕ ಅಧೀಕ್ಷಕಿ ಬಿ.ಪಿ. ಧಾರತಿ ಮಾತನಾಡಿ, ಇಂದಿನ ಸಮಾರಂಭದಲ್ಲಿ ದೀಪ ಮಾತ್ರ ಬೆಳಗಿಸುವುದಲ್ಲ, ರೋಗಿಗಳ ಜೀವನದ ಕತ್ತಲನ್ನು ಹೋಗಲಾಡಿಸಲು ನೀವೆಲ್ಲರೂ ಮುಂದಾಗಿ, ಸೇವಾ ಭಾವನೆಯಡಿ ವೃತ್ತಿನಿರತರಾಗಿ ಎಂದು ಕಿವಿಮಾತು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಗೋಪಾಲ್, ಪ್ರಾಂಶುಪಾಲ ಹೇಮೇಶ್ ಮೂರ್ತಿ, ಉಪ ಪ್ರಾಂಶುಪಾಲೆ ರಂಗನಾಯಕಿ, ಸಂಯೋಜಕ ನವೀನ್ ಇನ್ನಿತರಿದ್ದರು ಜೆಎಸ್‌ಎಸ್ ಶುಶ್ರೂಷ ಶಾಲೆ ವತಿಯಿಂದ ಅಯೋಜಿಸಲಾಗಿದ್ದ ಕಾರ್ಯಕ್ರಮಕ್ಕೆ ಉಪವಿಭಾಗಾಧಿಕಾರಿ ಮಹೇಶ್ ಚಾಲನೆ ನೀಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ. ಗೋಪಾಲ್, ಧಾರತಿ, ರಂಗನಾಯಕಿ, ಹೇಮೇಶ್, ನವೀನ್ ಇನ್ನಿತರಿದ್ದರು.

ಎಡಿಸಿ ಗೀತಾ ಹುಡೇದಾ ವರ್ಗಾವಣೆ



ಚಾಮರಾಜನಗರ, ಜೂ.6– ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ವರ್ಗಾವಣೆಯಾಗಿದ್ದು, ನೂತನ ಅಪರ ಜಿಲ್ಲಾಧಿಕಾರಿಯಾಗಿ ಟಿ.ಜವರೇಗೌಡ ನೇಮಕಗೊಂಡಿದ್ದಾರೆ. ಜವರೇಗೌಡ ಅವರು ಬೆಂಗಳೂರು ನಗರ ವಿಶ್ವವಿದ್ಯಾಲಯ (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಕುಲಸಚಿವರು (ಆಡಳಿತ) ಆಗಿ ಸೇವೆ ಸಲ್ಲಿಸಿದರು. ಇನ್ನೂ ವರ್ಗಾವಣೆಗೊಂಡಿರುವ ಗೀತಾ ಹುಡೇದಾ ಅವರಿಗೆ ಮುಂದಿನ ಸ್ಥಳ ನಿಯುಕ್ತಿಗಾಗಿ ಸಿಆಸು ಇಲಾಖೆಯಲ್ಲಿ ಕಾರ್ಯ ವರದಿ ಮಾಡಿಕೊಳ್ಳುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಎಚ್. ಕೇಶವ ಪ್ರಸಾದ್ ಆದೇಶದಲ್ಲಿ ತಿಳಿಸಿದ್ದಾರೆ.

ಅರಣ್ಯ ನಾಶದಿಂದ ಪರಿಸರ ವಿನಾಶ: ಶಾಸಕ



ಪಟ್ಟಣದಲ್ಲಿ ಪರಿಸರ ದಿನದ ಅಂಗವಾಗಿ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಸಸಿಗೆ ನೀರು ಹಾಕುವುದರೊಂದಿಗೆ ಚಾಲನೆ ನೀಡಿದರು.

ಗುಂಡ್ಲುಪೇಟೆ, ಜೂ.6 (ಸೋಮ್.ಜಿ)–ಅರಣ್ಯ ನಾಶದಿಂದ ಪರಿಸರ ವಿನಾಶದಂತ್ಯಕ್ಕೆ ಹೋಗುತ್ತಿದೆ ಎಂದು ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಹೇಳಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಸಸಿ ನೆಟ್ಟು ನಂತರ ಮಾತನಾಡಿದ ಅವರು, ಅರಣ್ಯ ನಾಶದಿಂದ ಪರಿಸರ ವಿನಾಶದಂತ್ಯಕ್ಕೆ ಹೋಗುತ್ತಿದೆ, ಹವಾಮಾನ ಬದಲಾವಣೆ, ಮಾಲಿನ್ಯ, ಅರಣ್ಯನಾಶ ಮತ್ತು ಜೀವವೈವಿಧ್ಯದ ನಷ್ಟದಂತಹ ಪರಿಸರ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು ಉದ್ದೇಶವಾಗಿದೆ ಎಂದರು. ಇತ್ತೀಚಿನ ದಿನಗಳಲ್ಲಿ ಮರಕಡಿಯುವುದು ಹಾಗೂ ಅರಣ್ಯ ನಾಶದಿಂದ ವಾತಾವರಣದಲ್ಲಿ ಏರುಪೇರಾಗುತ್ತಿದೆ. ಅಕಾಲಿಕ ಮಳೆ, ಮಳೆಯ ಕೊರತೆ ಪ್ರಾಕೃತಿಕ ವಿಕೋಪಗಳು ಉಂಟಾಗುತ್ತಿದ್ದು ಜಾಗತಿಕ ತಾಪಮಾನದಲ್ಲಿ ಹೆಚ್ಚಳವಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರಕ್ಕೆ ತಮ್ಮ ಕೊಡುಗೆ ನೀಡಬೇಕಾಗಿದೆ ಎಂದರು.

ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡ ಪ್ರಸಾದ್, ಎಪಿಎಂಸಿ ಅಧ್ಯಕ್ಷ ನಾಗರಾಜು, ನಿರ್ದೇಶಕ ಪಿ.ಮಹದೇವಪ್ಪ, ವಿರೂಪಾಕ್ಷ, ಹೆಚ್.ಬಿ.ನಾಗರಾಜು, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಎಸ್.ಮಧುಶಂಕರ್, ಯುವ ಘಟಕದ ಅರುಣ್, ವಿಶ್ವಾಸ್ ಇತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

PRAKRUTHI PROPERTIES
FOR SALE
30x40 @ 20 lakhs Near RT Nagar Including Registration
30x40 MUDA Approved Sites@ KHB Kenchalgud
Residential & Commercial Plots in & around Mysore
20x30 New 2BHK House, As Per your Plan With Interiors @ Just 37 Lakh in Bogadi Including Registration
95386 90359, 90359 90359

SITE FOR SALE
RIE Layout in Vijayanagar 4th Stage North face 20x30 Premium Muda Site
Price: 38 Lakhs
7975269652
8884616461

30x40 ವಿಜಯನಗರ 4ನೆ ಹಂತ ಹೊಂದಿಕೊಂಡಿರುವ ರೇಷಬ್ ಲೇಔಟ್ ಮೂಡ ಅಪ್ರೂವ್ಡ್ E/F Site 40feet ರೋಡ್‌ಗೆ ಇದೆ. ಬೆಲೆ:5900per sqft, contact:
9844193177
7411356023

ಬೇಕಾಗಿದ್ದಾರೆ ಮಹಿಳಾ ಸಹಾಯಕರು
ಮೈಸೂರಿನ ಕುವೆಂಪುನಗರದಲ್ಲಿರುವ ಚಪಾತಿ ಅಂಗಡಿಗೆ ಮಹಿಳಾ ಸಹಾಯಕರು ಬೇಕಾಗಿದ್ದಾರೆ. ಕೆಲಸದ ಸಮಯ: ಬೆಳಿಗ್ಗೆ 6 ರಿಂದ ಮಧ್ಯಾಹ್ನ 1 (ಸಸ್ಯಾಹಾರಿಗಳು, ಬ್ರಾಹ್ಮಣರಿಗೆ ಆದ್ಯತೆ)
9916281981

ಆಫೀಸ್ ಅಥವಾ ರೂಮ್ ಬಾಡಿಗೆಗೆ ಇದೆ
1st ಫ್ಲೋರ್ ಆಫೀಸ್ / 12x25
IInd ಫ್ಲೋರ್ ಆಫೀಸ್ 12x25
LL2 5ನೇ ಕ್ರಾಸ್, ಮುರುಗನ್ ಮೆಡಿಕಲ್ ಸ್ಟೋರ್ ಹಿಂಭಾಗ, ವಿವೇಕಾನಂದ ಸರ್ಕಲ್, ವಿವೇಕಾನಂದ ನಗರ, ಮೈಸೂರು
9035885429

DTCP SITES FOR SALE
ಹುಣಸೂರಿನ ಕೋಟೆ ರಸ್ತೆಯ "VCR ದೇವಗಿರಿ" ಬಡಾವಣೆ ನಿವೇಶನಗಳು ಮಾರಾಟಕ್ಕಿವೆ.
9886048471, 9036291192

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

SITE FOR SALE
30x40 East Face Site Gayatri Layout (Near Dattagalli)
9880273834

ಮಾರಾಟಕ್ಕಿದೆ
ಮೈಸೂರಿನ ಹತ್ತಿರದ ನಂಜನಗೂಡಿನ ಭುಜಂಗಯ್ಯನ ಹುಡಿಯಲ್ಲಿ ನಮ್ಮ ಜಮೀನು 1 ವರೆ ಎಕರೆ ಭೂಮಿಯನ್ನು ಮಾರಾಟ ಮಾಡುತ್ತಿದ್ದೇವೆ. ಆಸಕ್ತರು ಸಂಪರ್ಕಿಸಿ:
7353386685

ಬೇಕಾಗಿದ್ದಾರೆ
ಸಸ್ಯಾಹಾರಿ ಹೋಟೆಲ್‌ಗೆ ಚಾಟ್ಸ್ – 25 ಸಾವಿರ ತಿಂಗಳಿಗೆ (ಪಾನಿಪುರಿ, ಗೋಬಿ, ಬಜ್ಜಿ, ಪಕೋಡ) ಸಪ್ಲೇಯರ್/ತರಕಾರಿ ಕಟ್ಟಿಂಗ್ –15 ಸಾವಿರ ತಿಂಗಳಿಗೆ (ಪುರುಷರು ಮಾತ್ರ) (ತಿಂಗಳಿಗೆ 4 ದಿನ ರಜಾ)
9141584958

ಸುವರ್ಣಾ ಯಾತ್ರಾ
6 ದಿನಗಳು ಬಾಲಿ ಪ್ರವಾಸ 25–7–25
7 ದಿನಗಳ ಸಿಂಗಾಪುರ ಮತ್ತು ಮಲೇಶಿಯಾ ಪ್ರವಾಸ – 11–7–25
10 ದಿನಗಳ ಆಯೋಧ್ಯ ಮತ್ತು ನೇಪಾಳ ಪ್ರವಾಸ 18–6–25
6360146483
9019462508

WANTED
We are looking for a FEMALE ELECTROLOGIST to join our skin & hair Clinic in J P Nagar, Mysore
Age : Below 35 years
Qualification : Graduate
Salary : Rs. 20,000+
Send your resume via Whatsapp to :
83100 91538

ರೇಡಿಯಂ ಸ್ಟಿಕ್ಕರ್
(ಅನುಭವ ಇರುವವರು) (Experienced worker) ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸೂರ್ಯ ಬೇಕರಿ, ಹೆಬ್ಬಾಳ್
Mob: 9731305656

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

WANTED
Care Taker : 3 Posts
Lab Technician : 1 Post
Pharmacist : 1 Post
Contact: Dr. Kantharaju C.K.
Mob: 9845058023
Email: greendottrust@gmail.com

ಅಡುಗೆ ಭಟ್ಟರು ಬೇಕಾಗಿದ್ದಾರೆ
ಪ್ರತಿಷ್ಠಿತ ಸಸ್ಯಾಹಾರಿ ಹೋಟೆಲ್‌ಗೆ ಅನುಭವಿ ಅಡುಗೆ ಭಟ್ಟರು ಬೇಕಾಗಿದ್ದಾರೆ. ಉತ್ತಮ ವೇತನದೊಂದಿಗೆ ಊಟ–ವಸತಿ ವ್ಯವಸ್ಥೆ ಇದೆ.
ಸೈಟ್ ಮಾರಾಟಕ್ಕಿದೆ
ಪಟ್ಟಣ ಪಂಚಾಯಿತಿ "ಬಿ" ಖಾತಾ ಹೊಂದಿರುವ ನಿವೇಶನ ಗೆಜ್ಜಗಳ್ಳಿಯಲ್ಲಿ 1300 ಚ.ಅಡಿಯುಳ್ಳದ್ದಾಗಿದ್ದು, 32 ಲಕ್ಷಕ್ಕೆ ಮಾರಾಟಕ್ಕಿದೆ. ನೆಗೋಷಿಯಬಲ್ (Broker's Excuse)
9880774703

ಸೈಟ್ ಮಾರಾಟಕ್ಕಿದೆ
30x40, 40x60 ಗಾಯಿತ್ರಿ ಲೇಔಟ್ ರಿಂಗ್ ರಸ್ತೆ ಹತ್ತಿರ 30x40 ಜ್ಞಾನ ಭಾರತಿ ಸೊಸೈಟಿ ಹತ್ತಿರ 30x50 ವರುಣ ಹತ್ತಿರ 40x60 ಪರಶುರಾಮ ಲೇಔಟ್ ಬನ್ನೂರು ರಸ್ತೆ
9886507555

HOUSE FOR SALE
Newly built 3BHK Independent House East Face @ Lalithadri Nagar (South) Near Ring Road Behind Indian Oil Petrol Bunk
9206666888
9663452259

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಹಾಗೂ ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ:
9964733988, 9449990513

ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತಮುತ್ತ ಕಂಪನಿಗಳು ಕಾರ್ಖಾನೆಗಳು, ಸ್ಕೂಲ್, ಹಾಸ್ಪಿಟಲ್‌ಗಳಲ್ಲಿ, ಹಿನಕಲ್, ಹೆಬ್ಬಾಳು, ಮೇಟಗಳ್ಳಿ, ನಿವೇದಿತನಗರ ಕುವೆಂಪುನಗರ, ಸುತ್ತ ಮುತ್ತ ಕೆಲಸ ಮಾಡಲು ಸಕ್ಯೂರಿಟಿಗಳು, ಹೌಸ್‌ಕೀಪಿಂಗ್ (wash Room Cleaning)ಗಳು ಲೇಬರ್ಸ್ (Helper)ಗಳು ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ವಿದ್ಯಾಭ್ಯಾಸ : 8 th 10 th puc & any Degree (ITI Diploma) Pass & Fail ESI & PF ಸೌಲಭ್ಯ ಇರುತದೆ.
9036461347, 9611208553

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು ಫೋಟೊ, ಪಾನ್‌ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಮತ್ತು ಎಸ್.ಎಸ್.ಎಲ್.ಸಿ ಅಂಕಪಟ್ಟಿ ಸ್ಥಳ: HOTEL SEPOY, Opp. JSS HOSPITAL, Time 11 AM and Date 9-6-2025 Followed by Lunch
9448376423, 9886883858

HOUSE / APARTMENT FOR SALE
3 BHK Duplex House 20x30 at Lalithadrinagar, MUDA, Clear Title Deed, Architect Building
Price : 78 Lakhs
3 BHK Apartment at Bogadi Road, 15 sqare, G/F,
Price : 60 Lakhs
Call : 94489 38989 / 78920 35789

COMMERCIAL COMPLEX FOR SALE
at Vivekananda Circle, 3 floor building with Cellar
Total built-up area 10,800sq.ft.,
Site Dimension 45x60
Sale Price : 5.5 Crore
Call : 94489 38989 / 78920 35789

ಸೈಟು ಮಾರಾಟಕ್ಕಿದೆ
30x60 E/F
BEML ಲೇಔಟ್
ಜೆ.ಪಿ.ನಗರ, ಶ್ರೀ ನಗರ ಹತ್ತಿರ
7676830832

SITE FOR SALE
30x40 W/F
ಶ್ರೀ ಕೃಷ್ಣಧಾಮ ನಗರ MUDA ಖಾತಾ, ಕಬಿನಿ ವಾಟರ್, ನಿಯರ್ ಶ್ರೀರಾಂಪುರ ರಿಂಗ್ ರೋಡ್ ಸರ್ಕಲ್.
Mob: 9945562267

WANTED
Qualified and experienced teachers for all subject to reputed institution in Mysuru City. ವಸತಿ ನಿಲಯಕ್ಕೆ ಆಯಾ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9449320140

ಬೇಕಾಗಿದ್ದಾರೆ
ಅಡುಗೆ ಮತ್ತು ಮನೆ ಕೆಲಸ ಮಾಡಲು ಬೇಕಾಗಿದ್ದಾರೆ (ಮಹಿಳೆಯರಿಗೆ ಮಾತ್ರ) ವಿಜಯನಗರ 4ನೇ ಹಂತ
7411356023
7975269652

ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲೀಷ್ ದಾಖಲಾತಿ ಟೈಪ್ ಮಾಡಲು ಟೈಪಿಸ್ಟ್ (Vender) ಬೇಕಾಗಿದ್ದಾರೆ. ಸ್ಥಳ: ಬೋಗಾದಿ
7975269652
8073300783

ಸೈಟು ಬೇಕಾಗಿದೆ
JSS 2ನೇ ಮತ್ತು 3ನೇ ಹಂತ ವರುಣ, ಹಿರಿಯ ವಿದ್ಯಾರ್ಥಿಗಳ ಸಂಘದ ಬಡಾವಣೆ, ವರುಣ ಬಸವೇಶ್ವರ ಲೇಔಟ್, ನಿರ್ಮಾಣ್ ಲೇಔಟ್, ಎಲ್‌ಬಿಎಸ್ ಲೇಔಟ್ ಹಾಗೂ ಆಲನಹಳ್ಳಿ ರಿಂಗ್ ರಸ್ತೆ, ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.
Mob: 9686071750

Wanted Teachers
Walk-in interview from 9-6-2025 to 14th June 2025 in school premises from 10 am to 4 pm. Jnana Keerthi Convent, 7th Cross, SC Road, Janatha Nagar, Mysuru, T.K. Layout Extension. Qlfn: Montessori Training, NST, D.Ed or TCH, BA or B.Sc., B.Ed. or any bachelor Degree. Contact:
9980968022, 9448755090

ಜಮೀನು ಹಾಗೂ ಪಿಜಿ ಬಾಡಿಗೆಗಿದೆ
ಮೈಸೂರು – ಬೋಗಾದಿ ರಿಂಗ್ ರಸ್ತೆಯಿಂದ 3 ಕಿ.ಮೀ ದೂರದಲ್ಲಿ 2 1/4 ಎಕರೆ ಎಲ್ಲಾ ಸೌಕರ್ಯವಿರುವ ಜಮೀನು ಹಾಗೂ ಅಪೋಲೋ ಆಸ್ಪತ್ರೆ ರಸ್ತೆಯಲ್ಲಿ 8 ರೂಮಿನ ಪಿಠೋಪಕರಣ ಸಮೇತ ಪಿಜಿ ಬಾಡಿಗೆಗಿದೆ. ಸಂಪರ್ಕಿಸಿ:
Mob: 8197609290

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

SITES FOR SALE
7 km ಅರಮನೆಯಿಂದ
30X40 EAST / WEST FACING
- ಜೆ.ಪಿ. ನಗರ ರಿಂಗ್ ರಸ್ತೆ (200 Mtrs) 12 ಲಕ್ಷ ಪಾವತಿಸಿ (ಉಳಿಕೆ ಲೋನ್) ಬೆಲೆ 56 ಲಕ್ಷ
- ಬನ್ನೂರು ರಸ್ತೆ, ದೇವೇಗೌಡ ವೃತ್ತ ಬಳಿ ವಿದ್ಯಾವಿಕಾಸ್ ಕಾಲೇಜ್ ಎದುರು 45 ಲಕ್ಷ ದಿಂದ ಪ್ರಾರಂಭ

Broker Excuse
81230 75038

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್, ಸೂಪರ್ ವೈಸರ್ ಮತ್ತು ಹೌಸ್ ಕೀಪಿಂಗ್ (ಸ್ವಚ್ಛತಾ ಕೆಲಸಗಾರರು) ವಯಸ್ಸು 50 ವರ್ಷದೊಳಗಿರಬೇಕು.
2) ಆಫೀಸ್ ಬಾಯ್ (Office Boy) ಆಕರ್ಷಕ ವೇತನವಿರುತ್ತದೆ. ESI, PF, W/o ಇರುತ್ತದೆ ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ
ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ ನಂ.513, ದಳವಾಯಿ ಶಾಲೆ ಹತ್ತಿರ ಕೆ.ಆರ್.ಮೊಹಲ್ಲಾ, ಮೈಸೂರು
0821-4247385
9845111480

ಬೇಕಾಗಿದ್ದಾರೆ
ಕಂಪ್ಯುಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್: 9945911118
ಅನಿಲ್: 7026996123
ARTHOR SERVICES PVT. LTD
No. LIG 119, 1st Stage, Panchamantra Road, Kuvempunagar, Mysore-570023

ಟೈಲರ್‌ಗಳು ಮತ್ತು ಹೆಲ್ಪರ್ ಬೇಕಾಗಿದ್ದಾರೆ
ಮಹಿಳೆಯರ ಉಡುಪುಗಳನ್ನು ಹೊಲೆಯಲು ಟೈಲರ್‌ಗಳು ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ
ನಂ.14/ಎ, 4ನೇ ಮುಖ್ಯ ರಸ್ತೆ, 8ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–570009
ಸಂಪರ್ಕಿಸಿ: 87229 77665

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

Wanted Teachers
JNANAJYOTHI VIDYALAYA Beerihundi.
Social Science-1, Mathematics-1 teachers wanted D,Ed, B.A.B.Sc., M.Sc., B.Ed candidates can contact
9845390377, 8197057626

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITES FOR SALE
MUDA Approved Srirampura Ring Road (Opposite to University Layout)
30x40, 30x50
Mob: 8296832513

JOB'S IN MYSORE
Impuseನಲ್ಲಿ 10th PUC, ಮೇಲ್ಪಟ್ಟಿರುವ Earn (10400/- ರಿಂದ 18500/-) PM, Age (18-24), ಒಳಗೆ ಹೊಸಬರಿಗೆ ಆದ್ಯತೆ No Fee ಪರಸ್ಥಳದವರಿಗೆ ಮಾತ್ರ ವಸತಿ ನೇರ ಸಂಪರ್ಕಿಸಿ ವಿವರಗಳೊಂದಿಗೆ
Time to Meet (11AM to 3PM)
ಮಂಜು: 9342827788

ತಕ್ಷಣ ಬೇಕಾಗಿದ್ದಾರೆ
ಬೋಗಾದಿಯ & ಗದ್ದುಗೆ ರಸ್ತೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಲೇಡಿಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ– ಗಾರ್ಡ್: 18000 +W/o ಸೂಪರ್ ವೈಸರ್: 19500 +W/o ಸಂಪರ್ಕಿಸಬೇಕಾದ ಸಂಖ್ಯೆಗಳು:
7006635122
8050313506

SITE FOR SALE
N/E Corner 60x70 Suvarna Nagara, Bogadi Road.
Mob: 8050821108

WANTED – ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾಭ್ಯಾಸ SSLC, PUC and ITI. ವಯಸ್ಸು 18 ರಿಂದ 30. ಸಂಬಳ SSLC &PUC 13700+Allowance ITI: 16500 + Allowance.
ಸುಷ್ಮಾ 7892725603
ಪ್ರಕಾಶ್ 8971460235

FOR SALE
30x40 N/F Site
Near Basavanahalli, 80 Ft. Road, V.N. 4th Stage.
Mob: 7899214181

SITE FOR SALE
40×60 E/F, 30×50 E/F 30×40 N/F, JP Nagara Ring Road, Near HD Kote Ring Road, Bogadi Road Near, for square feet, 3000 nego.
Contact: SKL Properties
Mob: 9341624462

HOUSE FOR SALE
15x30, 2 Floors 'M' Block, Kuvempunagar. 40 Lakhs.
Mob: 8884133677

ತಕ್ಷಣ ಬೇಕಾಗಿದ್ದಾರೆ
(J K Tyre) ಮೇಟಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. SSLC Pass Age Limit-18-40 ಸಂಬಳ: 18,500/– ಸೌಲಭ್ಯತೆ: ESI, PF, Canteen ಸೌಲಭ್ಯವಿರುತ್ತದೆ.
6362491336
9353430078

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. SSLC & ITI Pass Urgent Required Age Limit-18-30, ಸಂಬಳ: 20,000/– ಸೌಲಭ್ಯತೆ: ESI, PF, Canteen ಸೌಲಭ್ಯವಿರುತ್ತದೆ.
7090309148
7019380847

SITES FOR SALES
"ನ್ಯಾಯಾಂಗ ಬಡಾವಣೆ" ಕೂರ್ಗಳ್ಳಿ North facing 30'x 40'
ವಾಜಮಂಗಳ "ಆರಾಧ್ಯ ಗಾರ್ಡನಿಯಾ" West facing 40'x 60'
77950 55551
Direct Owner / Slightly Negotiable

Commercial Building For Sale
2 shops, 2 BHK house & 1 big hall (780 sq.ft.), Near Panchamukhi Ganapathy Temple, Sayyaji Rao Road.
Mob: 7411523958
Price: Rs. 2.25 Crore

ಮಾರಾಟಕ್ಕಿದೆ
ಮೈಸೂರು ನಗರದಲ್ಲಿರುವ ಅಶೋಕಪುರಂ ಬಡಾವಣೆಯ, 4ನೇ ಕ್ರಾಸ್ ನಲ್ಲಿರುವ 17x55 ಅಡಿಗಳಲ್ಲಿ ಕಟ್ಟಿರುವ ಹೊಸ ಮನೆ 2BHK ಹೊಂದಿರುವ 2 ಇಂಡಿಪೆಂಡೆಂಟ್ ಆಗಿ ಸಪರೇಟ್ ಆಗಿ ಉತ್ತರ ಹಾಗೂ ಪೂರ್ವ ಬಾಗಿಲು ಹೊಂದಿರುವಂತ ಮನೆ, ಹಾಗೂ ಕಾರ್ಪೊರೇಶನ್ (ಇ–ಖಾತೆ) ಹಾಗೂ ಎಲ್ಲಾ ರೀತಿಯ ದಾಖಲೆಯನ್ನು ಹೊಂದಿರುವ ಮನೆ ಮಾರಾಟಕ್ಕಿದೆ.
9113523954, 9019484156

ತಕ್ಷಣ ಬೇಕಾಗಿದ್ದಾರೆ
* Senior Pharma AIDE for Medical Shop (Exp: 10-20 Yrs)
* Sales Person for Supermarket
Location: Bogadi
9880587586

ಟೀಚರ್ ಬೇಕಾಗಿದ್ದಾರೆ
3ನೇ ತರಗತಿ ಪಾಠ ಮಾಡಲು (ಮನೆಯಲ್ಲೇ) ಸ್ಕೂಲ್ ಟೀಚರ್ ಬೇಕಾಗಿದ್ದಾರೆ. with Good English Communication ವಿಜಯನಗರ 4ನೇ ಹಂತ
9844193177
8073300783

ಕೆಲಸಕ್ಕೆ ಬೇಕಾಗಿದ್ದಾರೆ
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಮಾಡುವ ಮಾರುತಿ Ominiಗೆ ಡ್ರೈವರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಸ್ಥಳ: ಡಾ|| ರಾಜ್‌ಕುಮಾರ್ ರಸ್ತೆ ತ್ರಿವೇಣಿ ಸರ್ಕಲ್ ಹತ್ತಿರ.
9742361663
8123179664

CONSTRUCTION
SKANDA PROPERTIES
Construction starts from Rs.2,149 per Sqft*
*Free Gift worth of Rs. 1 lakh For first five Customers offer valid till 30-06-2025
8310008208

ಮನೆ ಭೋಗ್ಯಕ್ಕೆ
20x30 ಉತ್ತರ ದಿಕ್ಕು 4 ರೂಂ, ಸೋಲಾರ್, ಡ್ಯುಪ್ಲೆಕ್ಸ್ ಮನೆ, 'ಇ' & ಎಫ್ ಬ್ಲಾಕ್, ಸಾಯಿ ಬಾಬಾ ದೇವಸ್ಥಾನದ ಹತ್ತಿರ, ರಾಮಕೃಷ್ಣನಗರ, ಮೈಸೂರು
9590033909
9731545495

ಸೈಟು ಮಾರಾಟಕ್ಕಿದೆ
30x46 ಉತ್ತರ ದಿಕ್ಕು ಲಿಖಿತ ಕನ್ವೆನ್‌ಷನ್ ಹಾಲ್ ಹಿಂಭಾಗ, ಟಿ.ನರಸೀಪುರ ರಸ್ತೆ, ವರುಣ
9535540338
8861606319

ಸೈಟು ಬಾಡಿಗೆಗೆ / ಭೋಗ್ಯಕ್ಕೆ ಬೇಕಾಗಿದೆ
50x80 ಮೈನ್ ರೋಡ್ ಫೇಸಿಂಗ್ ಸೈಟ್ ಮೈಸೂರಿನಲ್ಲಿ ಬಿಸಿನೆಸ್ ಉದ್ದೇಶಕ್ಕಾಗಿ ಬಾಡಿಗೆಗೆ ಅಥವಾ ಭೋಗ್ಯಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
6361030582
8904463692

NEW HOUSE FOR SALE
30x50 2 Floor 6BHK @ J P Nagar Ringroad, Mysuru
Contact for Direct Owner Meeting
7975553933

VSS PROPERTIES MYSORE
30X40 Sites for Sale Propose Outer Ring Road attached Property (Gated Community) Near Mount Litera Zee School Dr. Vishnuvardhan Samarka Bhavana
9986592352

ಬೇಕಾಗಿದ್ದಾರೆ
ಸಂಸ್ಥೆಯಲ್ಲೇ ಉಳಿದುಕೊಂಡು ಸೇವೆ ಸಲ್ಲಿಸಲು ಸಿದ್ಧರಿರುವ, ಕನ್ನಡ ಹಾಗೂ ಸಮಾಜ ವಿಜ್ಞಾನ ಶಿಕ್ಷಕರು ಬೇಕಾಗಿದಾರೆ. ಮಾಸಿಕ ಗೌರವ ಧನ: 15,000/–ವರೆಗೆ+ ಸಸ್ಯಾಹಾರಿ ಊಟ+ಉಚಿತ ವಸತಿ) ದಿವ್ಯ ದೀಪ ಚಾರಿಟಬಲ್ ಟ್ರಸ್ಟ್ ಕೆಂಚಲಗೂಡು, ಮೈಸೂರು
9341369901
9538499901, 8088586087
www.divyadeepatrust.org

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

WANTED
For Unisex Saloon Female Hair Dresser-1 Female Beautician -1
9980425992

SITE FOR SALE
30X40, 40X60 Near Sirirampura Ring Road, Mysuru
8050345574

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಪೂರ್ಣ ಅಭಿವೃದ್ಧಿಹೊಂದಿದ ಸೈಟ್‌ಗಳೂ ಮಾರಾಟಕ್ಕಿವೆ Govt. ಹೈಸ್ಕೂಲ್ ಮತ್ತು PU ಕಾಲೇಜು, ಹತ್ತಿರ, ಇಲವಾಲ ನಂತರ
9880774395

SK CONSTRUCTION
ಮನೆ ಕಟ್ಟಬೇಕೇ ಚಿಂತೇ ಬೇಡ ನಿಮ್ಮ ಕನಸಿನ ಮನೆ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan-3D Elivation ಸಹಿತ ಕಟ್ಟಿಕೊಡುತ್ತೇವೆ.
All Engineering Service in one Roof
9620528490

Interested in buying a Medical Shop in running condition in mysore. Interested may contact.
9945904262

STAFF REQUIRED
Duty Doctor
Pharmacist / Asst.
Nursing In Charge (Exp. Above 3 yrs)
DTP STAFF
8129717802

ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ
ಮನೆಕೆಲಸ ಮತ್ತು ಮಕ್ಕಳ ಆರೈಕೆಗಾಗಿ ವಿಶ್ವಾಸಾರ್ಹ, ನಮ್ಮ ಮನೆಯಲ್ಲಿಯೇ ವಾಸವಿರುವವರನ್ನು ಹುಡುಕುತ್ತಿದ್ದೇವೆ. ವಸತಿ, ಆಹಾರ ಒದಗಿಸಲಾಗುವುದು. ಸಂಬಳ : 21000/– ದಟ್ಟಗಳ್ಳಿ, ಮೈಸೂರು
9663570750

BUILT TO SUIT
Vijaynagar 4th Stage, 1st phase & 2nd Phase North, West Facing 30x40 Site Dattagalli 3rd Stage, 30x40 Corner Site With 40ft Road approach, at Prime Location
Buy & Sale Your Property In Mysore
Contact Balaji Properties:
8105819378

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತೆಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದು ಕೊಳ್ಳುವರಿಗೆ ಮಾತ್ರ ಅವಕಾಶ ಸಂಬಳ 18000 ರಿಂದ 22000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9591547239



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಅನ್ನದ ಬದಲು ಅನ್ನ ಬೆಳೆಯುವ ಭೂಮಿ ನೀಡಿದ ಡಿ.ದೇವರಾಜ ಅರಸು

ಶಾಸಕ ಜಿ.ಡಿ.ಹರೀಶ್‌ಗೌಡ ಬಣ್ಣನೆ


ಹುಣಸೂರಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಪುಣ್ಯಸ್ಮರಣೆ ನಡೆಯಿತು.

ಹುಣಸೂರು, ಜೂ.6– ದೀನ ದಲಿತರಿಗೆ, ಅಸಹಾಯಕ ಬಡವರಿಗೆ ಅನ್ನ ನೀಡುವ ಬದಲು ಅನ್ನ ಬೆಳೆಯುವ ಭೂಮಿಯನ್ನೇ ನೀಡಿ ಸಮ ಸಮಾಜ ನಿರ್ಮಿಸಿದ ಮಹಾನ್ ನಾಯಕ ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಬಣ್ಣಿಸಿದರು.

ದಿ.ಡಿ.ದೇವರಾಜ ಅರಸು ಅವರ ಪುಣ್ಯಸ್ಮರಣೆ ಅಂಗವಾಗಿ ನಗರದ ಎಪಿಎಂಸಿ ಬಳಿಯ ಅರಸರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ತಾಲೂಕಿನ ಕಲ್ಲಹಳ್ಳಿಯಲ್ಲಿರುವ ಅರಸರ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಉಳುವವನಿಗೆ ಭೂ ಸುಧಾರಣಾ ಕಾಯ್ದೆ ಜಾರಿಗೆ ತಂದು ರಾಜ್ಯದ ಲಕ್ಷಾಂತರ ಬಡಜನರನ್ನು ಭೂ ಒಡೆಯರನ್ನಾಗಿ ಮಾಡಿದ ಧೀಮಂತ ನಾಯಕ ಡಿ.ದೇವರಾಜ ಅರಸು ಅವರು ರಾಜ್ಯದ ಪ್ರಗತಿಗಾಗಿ ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಸರ್ಕಾರದ ಸವಲತ್ತುಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪುವಂತೆ ಮಾಡಿದ ಮಹಾನ್ ಚೇತನ. ಅವರ ಆದರ್ಶಗಳನ್ನು ಯುವಜನತೆ ಮೈಗೂಡಿಸಿಕೊಂಡು ರಾಜ್ಯದ ಪ್ರಗತಿಗೆ ಮುಂದಾಗಬೇಕಿದೆ ಎಂದರು.

ಹುಣಸೂರಲ್ಲಿ ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ರಾಜ್ಯ, ರಾಷ್ಟ್ರ ಭೂಪಟದಲ್ಲಿ ಹುಣಸೂರು ರಾಜಕೀಯ, ಸಾಂಸ್ಕೃತಿಕವಾಗಿ ರಾರಾಜಿಸುವಂತೆ ಮಾಡಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ ಎಂದರು.

ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ಮಾತನಾಡಿ, ಸಮಾಜದ ಪ್ರತಿಯೊಬ್ಬರಿಗೂ ಸಮಾನತೆಯ ಹಕ್ಕು ನೀಡಬೇಕು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬಂತೆ ಸಮ ಸಮಾಜದ ಕನಸು ಕಂಡ ಧೀಮಂತ ನಾಯಕ ಡಿ.ದೇವರಾಜ ಅರಸು ಅವರ ಆದರ್ಶಗಳನ್ನು ನಾವೆಲ್ಲಾ ಮೈಗೂಡಿಸಿಕೊಂಡು ಮುನ್ನಡೆಯಬೇಕಿದೆ ಎಂದರು.

ಇದೇ ವೇಳೆ ಮಾಜಿ ವಿಧಾನಸಭಾ ಸಭಾಧ್ಯಕ್ಷ ರಮೇಶ್ ಕುಮಾರ್, ವಿಧಾನ ಪರಿಷತ್ ಸದಸ್ಯ ಮುನಿಯಪ್ಪ ಕಲ್ಲಹಳ್ಳಿಗೆ ಭೇಟಿ ನೀಡಿ ಡಿ.ದೇವರಾಜ ಅರಸರ ಸಮಾಧಿಗೆ ಪೂಜೆ ಸಲ್ಲಿಸಿದರು.

ಈ ವೇಳೆ ಅರಸು ವೇದಿಕೆ ಅಧ್ಯಕ್ಷ ರಾಜು, ಹೆಚ್.ಎಸ್.ವರದರಾಜು, ಮಹದೇವು, ಭೋವಿ ಸಮಾಜದ ಮುಖಂಡ ವಿ.ಗಣೇಶ್, ರಮೇಶ್, ಸಮಾಜ ಕಲ್ಯಾಣಾಧಿಕಾರಿ ಅಶೋಕ್, ಅಲ್ಪಸಂಖ್ಯಾತರ ಇಲಾಖೆ ಪ್ರೇಮ್, ಶಶಿಕುಮಾರ್ ಸೇರಿದಂತೆ ಇತರರಿದ್ದರು.

ನಗರಸಭೆಯಿಂದ ಫುಟ್‌ಪಾತ್ ತೆರವು


ಫುಟ್‌ಪಾತ್ ಅತಿಕ್ರಮಣವನ್ನು ನಗರಸಭೆ ಅಧಿಕಾರಿಗಳು ತೆರವುಗೊಳಿಸಿದರು.

ನಂಜನಗೂಡು, ಜೂ.6– ನಗರದಲ್ಲಿ ಪಾದಚಾರಿಗಳು ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯಾಗಿದ್ದ ಫುಟ್‌ಪಾತ್ ಅತಿಕ್ರಮಣವನ್ನು ನಗರಸಭೆ ಅಧಿಕಾರಿಗಳು ಶುಕ್ರವಾರ ಬೆಳಗ್ಗೆ ಜೆಸಿಬಿ ಮೂಲಕ ತೆರವುಗೊಳಿಸಿದರು.

ಬೆಳಗಿನ ಜಾವ ನಗರದ ಬಜಾರ್ ರಸ್ತೆ, ಸಿನಿಮಾ ರಸ್ತೆ, ನೆಹರು ವೃತ್ತಗಳಲ್ಲಿ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದ ಫುಟ್‌ಪಾತ್ ಅನ್ನು ಜೆಸಿಬಿ ಮೂಲಕ ನಗರಸಭೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದರು. ಸಿನಿಮಾ ರಸ್ತೆಯಲ್ಲಿ ಕೆಲವು ವ್ಯಾಪಾರಿಗಳು ಹಾಗೂ ನಗರಸಭೆ ಮುಂಭಾಗ ಫುಟ್‌ಪಾತ್ ವ್ಯಾಪಾರಿಗಳು ತೆರವು ಕಾರ್ಯಾಚರಣೆಗೆ ಅಡ್ಡಿಪಡಿಸಲು ಯತ್ನಿಸಿದರೂ, ಇದಕ್ಕೆ ಸೊಪ್ಪು ಹಾಕದ ನಗರಸಭೆ ಅಧಿಕಾರಿಗಳ ತಂಡ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಯಶಸ್ವಿಯಾಗಿ ತೆರವು ಕಾರ್ಯಾಚರಣೆ ನಡೆಸಿದರು.

ನಗರದ ಬಜಾರ್ ಹಾಗೂ ಸಿನಿಮಾ ರಸ್ತೆಗಳಲ್ಲಿ ದ್ವಿಚಕ್ರ ವಾಹನ ಸವಾರರು ಸಂಚರಿಸಲು ಪರದಾಡುವಂತಾಗಿತ್ತು. ನಗರಸಭೆಯ ಹಳೇ ತರಕಾರಿ ಮಾರ್ಕೆಟ್ ಬಳಿ ನಗರಸಭೆ ಮಳಿಗೆ ಬಾಡಿಗೆದಾರರು ಮುಖ್ಯರಸ್ತೆ ಅತಿಕ್ರಮಿಸಿಕೊಂಡಿರುವ ಬಗ್ಗೆ ಹಲವು ಬಾರಿ ದೂರುಗಳು ಬಂದಿದ್ದವು. ನಗರದ ನಾಗರಿಕರು ಫುಟ್‌ಪಾತ್ ತೆರವು ಕಾರ್ಯಾಚರಣೆಯನ್ನು ಸ್ವಾಗತಿಸಿದ್ದಾರೆ.

ನಗರಸಭೆ ಆಯುಕ್ತ ವಿಜಯ್ ಸುದ್ದಿಗಾರರೊಂದಿಗೆ ಮಾತನಾಡಿ, ದೇಶದಲ್ಲಿ ರಸ್ತೆ ಅತಿಕ್ರಮಣದಿಂದಾಗಿ ವಾಹನ ಅಪಘಾತಗಳು ಉಂಟಾಗಿ ಹೆಚ್ಚಿನ ಸಾವು ಸಂಭವಿಸುತ್ತಿವೆ. ಹೃದಯಾಘಾತದಿಂದ ಸಾಯುವವರಿಗಿಂತ ರಸ್ತೆ ಅಪಘಾತಗಳಿಂದಾಗಿ ಹೆಚ್ಚಿನ ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದು ದೇಶಾದ್ಯಂತ ಕೈಗೊಂಡ ಸಮೀಕ್ಷೆ ವರದಿ ಹೇಳಿದೆ. ಸುಪ್ರಿಂ ಕೋರ್ಟ್ ದೇಶಾದ್ಯಂತ ರಸ್ತೆ ಅತಿಕ್ರಮಣ ತೆರವುಗೊಳಿಸುವಂತೆ ನೀಡಿರುವ ಸೂಚನೆ ಮೇರೆಗೆ ರಾಜ್ಯಾದ್ಯಂತ ಫುಟ್‌ಪಾತ್ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ. ನಗರದಲ್ಲಿ ಅತಿಕ್ರಮಣದಾರರಿಗೆ ತೆರವುಗೊಳಿಸಿಕೊಳ್ಳುವಂತೆ ಮುನ್ನೆಚ್ಚರಿಕೆ ನೀಡಲಾಗಿತ್ತು. ನಗರದಾದ್ಯಂತ ಧ್ವನಿವರ್ಧಕದ ಮೂಲಕ ತೆರವು ಕಾರ್ಯಾಚರಣೆ ನಡೆಸುವುದಾಗಿ ಪ್ರಚಾರ ನಡೆಸಲಾಗಿತ್ತು. ಇಂದು ನಗರದ ಪ್ರಮುಖ ಭಾಗಗಳಲ್ಲಿ ಯಶಸ್ವಿಯಾಗಿ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದರು.

ಈ ವೇಳೆ ನಗರಸಭಾ ಅಧಿಕಾರಿಗಳಾದ ಮೈತ್ರಾವತಿ, ಅಶೋಕ್, ರೇಖಾ, ಪಾತಲಿಂಗಪ್ಪ, ಸಮಂತ್, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ರವೀಂದ್ರ, ಎಸ್‌ಐ ಪ್ರಕಾಶ್ ಮದ್ದೂರು ಉಪಸ್ಥಿತರಿದ್ದರು.

ಸಾರಿಗೆ ಬಸ್‌ಗೆ ಬೆಂಕಿ


ಬನ್ನೂರಲ್ಲಿ ಸಾರಿಗೆ ಬಸ್ ಸುಟ್ಟು ಹೋಗಿರುವುದು.

ಬನ್ನೂರು, ಜೂ.6– ಚಲಿಸುತ್ತಿದ್ದ ಬಸ್ ಬೆಂಕಿಗೆ ಆಹುತಿಯಾಗಿರುವ ಘಟನೆ ಬನ್ನೂರಿನಲ್ಲಿ ನಡೆದಿದೆ.

ಶುಕ್ರವಾರ ಮಧ್ಯಾಹ್ನ ಪಟ್ಟಣದ ಇಂದಿರಾ ಚಿತ್ರ ಮಂದಿರದ ಬಳಿ ಮೈಸೂರು ಕಡೆಯಿಂದ ಬಂದ ಸಾರಿಗೆ ಬಸ್‌ನ ಇಂಜಿನ್‌ನಲ್ಲಿ ಇದ್ದಕ್ಕಿದ್ದ ಹಾಗೆ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಕಾರ್ಯ ಪ್ರವೃತ್ತರಾದ ಕಂಡಕ್ಟರ್ ಮತ್ತು ಡ್ರೈವರ್ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ, ಅಗ್ನಿಶಾಮಕ ದಳಕ್ಕೆ ತಿಳಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಬ್ಯಾಟರಿ ತೊಂದರೆಯಿಂದ ಅವಘಡ ಸಂಭವಿಸಿರಬಹುದು ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಬನ್ನೂರು ಠಾಣೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದರು.

ಟ್ರಾಕ್ಟರ್ ಪಲ್ಟಿ: ವ್ಯಕ್ತಿ ಸಾವು

ತಲಕಾಡು, ಜೂ.6– ವಿದ್ಯುತ್ ಕಂಬಗಳನ್ನು ಸಾಗಿಸುತ್ತಿದ್ದ ಟ್ರಾಕ್ಟರ್ ಪಲ್ಟಿಯಾಗಿ ವ್ಯಕ್ತಿಯೊಬ್ಬ ಮೃತಪಟ್ಟು ಚಾಲಕ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಚಂದಹಳ್ಳಿ ಗ್ರಾಮದ ಬಳಿ ನಡೆದಿದೆ.

ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ಗ್ರಾಮದ ನಿವಾಸಿ ಲೋಕೇಶ್(27) ಸಾವನ್ನಪ್ಪಿದ್ದು, ಟ್ರಾಕ್ಟರ್ ಚಾಲಕ ಬೇಲೂರು ಗ್ರಾಮದ ಅಭಿ(30) ತೀವ್ರ ಗಾಯಗೊಂಡವರು. ರಸ್ತೆ ಬದಿ ಅಳವಡಿಸಲು ವಿದ್ಯುತ್ ಕಂಬಗಳನ್ನು ತಲಕಾಡು ಗ್ರಾಮದಿಂದ ಟ್ರಾಕ್ಟರ್‌ನಲ್ಲಿ ಸಾಗಿಸುತ್ತಿದ್ದ ವೇಳೆ ಚಂದಹಳ್ಳಿ ಗ್ರಾಮದ ಬಳಿ ಚಾಲಕ ಹಠಾತ್ ಬ್ರೇಕ್ ಹಾಕಿದ ಪರಿಣಾಮ ಟ್ರಾಕ್ಟರ್ ಪಲ್ಟಿಯಾಗಿ ಲೋಕೇಶ್ ಮೇಲೆ ಕಂಬಗಳು ಬಿದ್ದಿದ್ದು, ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ತೀವ್ರ ಗಾಯಗೊಂಡ ಅಭಿಯನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ತಲಕಾಡು ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೋಟೆಯಲ್ಲಿ ಪೊಲೀಸ್, ಪತ್ರಕರ್ತರ ಸಭೆ


ಪೊಲೀಸ್ ಠಾಣೆಯಲ್ಲಿ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಜೂ.6– ತಾಲೂಕಿನಲ್ಲಿ ನಡೆಯುವ ಅಹಿತಕರ ಘಟನೆಗಳು ಹಾಗೂ ಇತರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್ ನೇತೃತ್ವದಲ್ಲಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪತ್ರಕರ್ತರ ಸಭೆ ನಡೆಯಿತು.

ಪಟ್ಟಣದಲ್ಲಿ ಬಹುತೇಕ ಯುವಕರು ಗಾಂಜಾ, ಮದ್ಯ ಹಾಗೂ ಮಾದಕ ವಸ್ತುಗಳನ್ನು ಸೇವನೆ ಮಾಡುವ ಮೂಲಕ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಪಟ್ಟಣದಲ್ಲಿ ಕೇರಳ ಲಾಟರಿ ಹೆಚ್ಚಾಗಿ ಮಾರಾಟವಾಗುತ್ತಿದ್ದು, ಇದರಿಂದ ಸಾಕಷ್ಟು ಮಂದಿ ಆರ್ಥಿಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ, ಇದನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಮುಂದಾಗಬೇಕು ಎಂದು ಪತ್ರಕರ್ತರು ಸಲಹೆ ನೀಡಿದರು.

ಶಾಲಾ ಕಾಲೇಜು ಆರಂಭವಾಗಿದ್ದು, ಕೆಲವು ಯುವಕರು ಬೈಕ್‌ನಲ್ಲಿ ವ್ಹೀಲಿಂಗ್ ಮಾಡುವುದು, ನೂತನ ಬಡಾವಣೆಗಳಲ್ಲಿ ಮೋಜು ಮಸ್ತಿ ಮಾಡುವುದು, ಬಸ್ ನಿಲ್ದಾಣದಲ್ಲಿ ಗುಂಪುಗಾರಿಕೆ ತಪ್ಪಿಸಲು ಆ ಭಾಗಗಳಲ್ಲಿ ಪೊಲೀಸರನ್ನು ನಿಯೋಜಿಸಿ ವಾಹನಗಳಲ್ಲಿ ಗಸ್ತು ಮಾಡುವಂತೆ ತಿಳಿಸಿದರು. ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್ ಮಾತನಾಡಿ, ಇಂದಿನಿಂದಲೇ ಶಾಲಾ, ಕಾಲೇಜು ಬಿಟ್ಟ ಸಂದರ್ಭ ಹಾಗೂ ಬಸ್ ನಿಲ್ದಾಣಗಳಲ್ಲಿ ವಾಹನದಲ್ಲಿ ಗಸ್ತು ನಡೆಸಲಾಗುವುದು. ಅಲ್ಲದೇ ಇತ್ತೀಚಿನ ದಿನಗಳಲ್ಲಿ ತಾಲೂಕಿನ ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ಹಲವು ಅಪಘಾತಗಳು ಸಂಭವಿಸಿದೆ. ಅಲ್ಲದೇ ಸಾರಿಗೆ ಬಸ್ ಡಿಕ್ಕಿ ಹೊಡೆದು ಸಾಕಷ್ಟು ಮಂದಿ ಸಾವನ್ನಪ್ಪಿದ್ದಾರೆ. ಆದ್ದರಿಂದ ಕೆಎಸ್‌ಆರ್‌ಟಿಸಿ ಚಾಲಕರ ಸಭೆ ನಡೆಸಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಪಟ್ಟಣದಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುವುದರಿಂದ ಸಾರ್ವಜನಿಕರ ಓಡಾಟಕ್ಕೆ ಹಾಗೂ ದಿನ ನಿತ್ಯ ವ್ಯಾಪಾರ ವಹಿವಾಟುಗಳಿಗೆ ತೊಂದರೆ ಆಗುತ್ತಿರುವುದರಿಂದ ಪಟ್ಟಣದ ಪುರಸಭಾ ಮುಖ್ಯಾಧಿಕಾರಿ ಹಾಗೂ ಅಧ್ಯಕ್ಷರು, ಸದಸ್ಯರ ಸಭೆ ಕರೆದು ವಾಹನ ನಿಲುಗಡೆ ಮಾಡಲು, ಹಳೆ ಆಸ್ಪತ್ರೆ ಜಾಗ ಹಾಗೂ ಹಳೆ ತಾಲೂಕು ಕಚೇರಿ ಆವರಣದಲ್ಲಿ ವ್ಯವಸ್ಥೆ ಮಾಡುವ ಬಗ್ಗೆ ಚರ್ಚಿಸಲಾಗುವುದು ಎಂದರು.

ಈ ವೇಳೆ ಎಸ್‌ಐ ಚಿಕ್ಕನಾಯಕ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಉಪಾಧ್ಯಕ್ಷ ಮಹೇಶ್, ಪತ್ರಕರ್ತರಾದ ಮಂಜು ಕೋಟೆ, ದೊಡ್ಡಸಿದ್ದು, ಸತೀಶ್ ಆರಾಧ್ಯ, ಎಂ.ಎಲ್.ರವಿಕುಮಾರ್, ಕನ್ನಡ ಪ್ರಮೋದ್, ಜಿ.ರವಿಕುಮಾರ್, ಶ್ರೀನಿಧಿ, ರವಿ ಆರಾಧ್ಯ, ಪುರುಷೋತ್ತಮ್, ಚಂದ್ರು, ಸುರೇಶ್ ಇನ್ನಿತರರಿದ್ದರು.

ಕಾರ್ಮಿಕರು ಸಂಘಟಿತರಾಗಿ ಕಾರ್ಯ ನಿರ್ವಹಿಸಲು ಸಲಹೆ


ತಿ.ನರಸೀಪುರ ಪುರಸಭಾ ಸದಸ್ಯ, ನಟ ಅರ್ಜುನ್ ರಮೇಶ್ ಅವರನ್ನು ಮೈಸೂರು ಜಿಲ್ಲಾ ರಕ್ಷಣಾ ವೇದಿಕೆ ಕಾರ್ಮಿಕ ವಿಭಾಗದ ಉಪಾಧ್ಯಕ್ಷ ಕೆ.ರಾಚು ಸನ್ಮಾನಿಸಿದರು. ಮುಖಂಡರಾದ ನಂಜುಂಡಸ್ವಾಮಿ, ನಾಗರಾಜು ಮತ್ತಿತರಿದ್ದರು.

ತಿ.ನರಸೀಪುರ, ಜೂ.6– ಕಾರ್ಮಿಕರು ಸಂಘಟಿತರಾಗಿ ಕಾರ್ಯ ನಿರ್ವಹಿಸುವಂತೆ ಪುರಸಭಾ ಸದಸ್ಯ, ಚಿತ್ರನಟ ಆರ್.ಅರ್ಜುನ್ ಸಲಹೆ ನೀಡಿದರು.

ಪಟ್ಟಣದಲ್ಲಿ ನಡೆದ ಕಾರ್ಮಿಕರ ಸಭೆಯ ಬಳಿಕ ಸಂಘಕ್ಕೆ ಬೆಂಬಲ ನೀಡುವಂತೆ ಮಾಡಿದ ಮನವಿಗೆ ಸ್ಪಂದಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಮಿಕರು ನಮ್ಮ ದೇಶದ ಸಂಪತ್ತು. ದೇಶದ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅಪಾರ. ಅಲ್ಲದೇ ಕಾರ್ಮಿಕ ಬಂಧುಗಳು ತಮ್ಮ ಆರೋಗ್ಯದ ಕಡೆಗೆ ಹೆಚ್ಚು ಗಮನಹರಿಸಬೇಕು. ಬಿಸಿಲು, ಮಳೆ, ಚಳಿ ಎನ್ನದೇ ಹಗಲಿರುಳು ದುಡಿಯುವ ಕಾರ್ಮಿಕರು ಕಾರ್ಮಿಕ ಇಲಾಖೆಯಲ್ಲಿ ಹೆಸರನ್ನು ನೋಂದಾಯಿಸಿಕೊಂಡು ಸರ್ಕಾರದಿಂದ ದೊರಕಬಹುದಾದ ಸೌಲಭ್ಯ ಪಡೆಯಬೇಕು. ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕೆಂದು ಮನವಿ ಮಾಡಿದರು.

ಕಾರ್ಮಿಕರ ಘಟಕ ಕಾರ್ಮಿಕರ ಹಿತ ಕಾಯಲಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಸಮಸ್ಯೆಯಾದರೂ ನಮ್ಮ ಗಮನಕ್ಕೆ ತನ್ನಿ. ನಿಮ್ಮ ಬೆಂಬಲಕ್ಕೆ ಸದಾ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಮೈಸೂರು ಜಿಲ್ಲಾ ರಕ್ಷಣಾ ವೇದಿಕೆ ಕಾರ್ಮಿಕ ವಿಭಾಗದ ಉಪಾಧ್ಯಕ್ಷ ಕೆ.ರಾಚು, ಮುಖಂಡರಾದ ನಂಜುಂಡಸ್ವಾಮಿ, ನಾಗರಾಜು ಮತ್ತಿತರ ಕಾರ್ಮಿಕರಿದ್ದರು.

ಮೂಗೂರಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ

ಮೂಗೂರು, ಜೂ.6– ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೂಗೂರು ಸಮುದಾಯ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ಮಾತನಾಡಿ, ಸೊಳ್ಳೆಗಳ ಉತ್ಪತ್ತಿ ನಿಯಂತ್ರಿಸಲು ಮನೆ ಹೊರಾಂಗಣ ಹಾಗೂ ಒಳಾಂಗಣ ಶುಚಿಯಾಗಿಟ್ಟುಕೊಳ್ಳಬೇಕು. ಸೊಳ್ಳೆ ಕಚ್ಚುವಿಕೆಯಿಂದ ಜ್ವರ ಕಾಣಿಸಿಕೊಳ್ಳುತ್ತದೆ. ಸೊಳ್ಳೆಗಳ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮವಾಗಿ ನೀರು ಶೇಖರಣಾ ಸ್ಥಳವನ್ನು ತೊಳೆದು ಒಣಗಿಸಿ, ನೀರಿನ ತೊಟ್ಟಿ ಅಥವಾ ಹೊಂಡಾವನ್ನು ಸೊಳ್ಳೆಗಳು ಒಳ ಸೇರಿದಂತೆ ಮುಚ್ಚಬೇಕು. ಸೊಳ್ಳೆಗಳ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ಕ್ರಮ ಕೈಗೊಂಡು ನೈರ್ಮಲ್ಯ ಕಾಪಾಡಿ ರೋಗಗಳಿಂದ ಮುಕ್ತಿ ಹೊಂದಬಹುದು ಎಂದರು.

ಇದೇ ವೇಳೆ ಡೆಂಗ್ಯೂ ಲಕ್ಷಣಗಳು, ನಿಯಂತ್ರಣದ ವಿಧಾನ, ಮುಂಜಾಗ್ರತೆ, ಸ್ವಚ್ಛತೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿ ನೀರಿನಲ್ಲಿ ಸೊಳ್ಳೆ ವಾಸದ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಕೆಪಿಎಸ್ ಶಾಲೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ, ಸಿದ್ದರಾಜು, ಅಂಜಲಿ, ರಘುರಾಂ, ಸಂಗೀತಾ, ಮುಖ್ಯ ಶಿಕ್ಷಕ ಕೃಷ್ಣೇಗೌಡ, ಆಶಾ ಕಾರ್ಯಕರ್ತೆಯರು, ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಶಿಕ್ಷಕ ವೃಂದ ಉಪಸ್ಥಿತರಿದ್ದರು.


ಮೂಗೂರಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ ನಡೆಯಿತು.

ತಿಮ್ಮಬೋವಿ ನಾಪತ್ತೆ

ಬೆಟ್ಟದಪುರ, ಜೂ.6– ಇಲ್ಲಿನ ಪೊಲೀಸ್ ಠಾಣೆ ವ್ಯಾಪ್ತಿಯ ನಾಗನಹಳ್ಳಿ ಪಾಳ್ಯದ ತಿಮ್ಮಬೋವಿ(70) ನಾಪತ್ತೆಯಾಗಿರುವ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬೆಟ್ಟದಪುರ ಪೊಲೀಸ್ ಠಾಣೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಬೆಟ್ಟದಪುರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಚ್ಛತೆಗೆ ಆದ್ಯತೆ ನೀಡಿ ಪರಿಸರ ಕಾಪಾಡಿ


ನಂಜನಗೂಡಲ್ಲಿ ಪರಿಸರ ದಿನಾಚರಣೆ ನಡೆಯಿತು.

ನಂಜನಗೂಡು, ಜೂ.6– ಹಿರಿಯರು ನಮಗೆ ಕೊಡುಗೆ ಕೊಟ್ಟ ಉತ್ತಮ ಪರಿಸರವನ್ನು ಮುಂದಿನ ಪೀಳಿಗೆಗೆ ರವಾನಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆದ್ದರಿಂದ ಎಲ್ಲರೂ ಗಿಡ ನೆಟ್ಟು ಪೋಷಣೆ ಮಾಡುವ ಜೊತೆಗೆ ಸ್ವಚ್ಛತೆಗೆ ಆದ್ಯತೆ ನೀಡಿ ಪರಿಸರ ಕಾಪಾಡಬೇಕು ಎಂದು ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ನಗರಸಭೆ ವತಿಯಿಂದ ಏರ್ಪಡಿಸಿದ್ದ ನಗರದ ಮಹದೇಶ್ವರ ಬಡಾವಣೆ ಉದ್ಯಾನವನದಲ್ಲಿ ಗಿಡಗಳನ್ನು ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಿತ್ಯ ಅಭಿವೃದ್ಧಿ ಹೆಸರಲ್ಲಿ ಗಿಡಮರಗಳನ್ನು ಕತ್ತರಿಸಿ ಪರಿಸರ ನಾಶಪಡಿಸುವ ಜೊತೆಗೆ ಎಲ್ಲೆಂದರಲ್ಲಿ ಕಸ ಎಸೆದು, ಏಕ ಬಳಕೆಯ ಪ್ಲಾಸ್ಟಿಕ್ ಉಪಯೋಗಿಸಿ ಪರಿಸರಕ್ಕೆ ಹಾನಿಯುಂಟು ಮಾಡುತ್ತಿದ್ದೇವೆ. ಉತ್ತಮ ಪರಿಸರ ನಿರ್ಮಾಣದಲ್ಲಿ ಪ್ರತಿಯೊಬ್ಬರ ಜವಾಬ್ದಾರಿ ಇದೆ. ಎಲ್ಲರೂ ನಮ್ಮ ಜವಾಬ್ದಾರಿ ಅರಿತು ಗಿಡ ನೆಟ್ಟು ಪೋಷಣೆ ಮಾಡುವ ಜೊತೆಗೆ ಸ್ವಚ್ಛತೆಗೆ ಆದ್ಯತೆ ನೀಡಿ ನಗರಸಭೆಯೊಂದಿಗೆ ಕೈಜೋಡಿಸುವ ಮೂಲಕ ಉತ್ತಮ ಪರಿಸರ ನಿರ್ಮಾಣಕ್ಕೆ ಸಹಕಾರ ನೀಡಬೇಕು ಎಂದರು.

ನಗರಸಭಾ ಆಯುಕ್ತ ವಿಜಯ್ ಮಾತನಾಡಿ, ನಗರಸಭೆಯಿಂದ ಉದ್ಯಾನವನಗಳಲ್ಲಿ ಗಿಡ ನೆಟ್ಟು ಉದ್ಯಾನವನ ಅಭಿವೃದ್ಧಿ ಪಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ತಿಂಗಳಲ್ಲಿ ಕನಿಷ್ಠ 6 ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ವೇಳೆ ನಗರಸಭಾ ಉಪಾಧ್ಯಕ್ಷ ರಯಾನ ಬಾನು, ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಎನ್.ಎಸ್.ಯೋಗೀಶ್, ಮುಖಂಡರಾದ ಸತೀಶ್, ನಗರಸಭಾ ಅಧಿಕಾರಿಗಳಾದ ಮೈತ್ರಾದೇವಿ, ಅಶೋಕ್, ಪಾತಲಿಂಗಪ್ಪ, ಎಇಇ ಸಮಂತ್, ಶಫಿ ಸೇರಿದಂತೆ ಇತರರಿದ್ದರು.

ವಿಶ್ವ ಪರಿಸರ ದಿನಾಚರಣೆ


ಸಾಲಿಗ್ರಾಮದ ಶ್ರೀಭೈರವೇಶ್ವರ ಇಂಟರ್ ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಶಾಲೆ ಸಂಸ್ಥಾಪಕ ಎಸ್.ಕೆ.ರಮೇಶ್, ಕಾರ್ಯದರ್ಶಿ ಸಿ.ಪಿ.ತ್ರಿವೇಣಿ, ಮುಖ್ಯ ಶಿಕ್ಷಕಿ ಯಶಸ್ವಿನಿ, ಸಂಯೋಜಕಿ ಅರ್ಪಿತ ಸೇನ್, ಪತ್ರಕರ್ತ ಕೆ.ಟಿ.ಮೋಹನ್ ಕುಮಾರ್, ಸಹ ಶಿಕ್ಷಕರಾದ ಮಂಜುನಾಥ್, ರೇಖಾ, ಹೀನಾ ಕೌಸರ್, ರಕ್ಷಿತ, ಪ್ರಜ್ವಲ್, ಅಶ್ವಿನಿ, ಅಫ್ರಿನ್ ತಾಜ್, ಹನೀಫ, ಪ್ರೀತಿ, ವಿದ್ಯಾರ್ಥಿಗಳು ಇತರರಿದ್ದರು.

ಒಳ ಮೀಸಲಾತಿ ಜಾರಿಗಾಗಿ ಬೆಂಗಳೂರಲ್ಲಿ

ಜೂ.9, ಮಾದಿಗ ಕ್ರಾಂತಿಕಾರಿ ಸಂಘರ್ಷ ಸಮಾವೇಶ

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ


ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್ ಮಾತನಾಡಿದರು.

ಕೆಆರ್.ನಗರ, ಜೂ.6– ಒಳ ಮೀಸಲಾತಿ ಜಾರಿಗಾಗಿ ಮಾದಿಗ ಸಮುದಾಯದಿಂದ ಜೂ.9ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಮಾದಿಗ ಕ್ರಾಂತಿಕಾರಿ ಸಂಘರ್ಷ ಸಮಾವೇಶದಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳಿಂದ ಸಮುದಾಯವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಮಾದಿಗ ಸಮಾಜದ ಮುಖಂಡ ಎಂ.ಎಸ್.ಮಹದೇವ್ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಸಮುದಾಯ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಸಮುದಾಯಗಳಲ್ಲಿ ಅತ್ಯಂತ ಹಿಂದುಳಿದಿರುವ ಹಾಗೂ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ನೀಡಬೇಕೆಂಬ ಕೂಗು ಕಳೆದ 3 ದಶಕಗಳಿಂದ ಕೇಳಿ ಬರುತ್ತಿದ್ದು, ಇಂದು ಅಂತಿಮ ಹಂತಕ್ಕೆ ತಲುಪಿದೆ ಎಂದರು.

ಈ ಹಿಂದೆ ನಿವೃತ್ತ ನ್ಯಾಯಮೂರ್ತಿ ಸದಾಶಿವ ಆಯೋಗದ ರಚನೆ ಮಾಡಿದ್ದ ರಾಜ್ಯ ಸರ್ಕಾರ ಪರಿಶಿಷ್ಟ ಸಮುದಾಯದ ಸಮೀಕ್ಷೆ ನಡೆಸಿತ್ತು. ಅದನ್ನು ಯಥಾವತ್ತಾಗಿ ಜಾರಿ ಮಾಡಬೇಕೆಂದು ಅನೇಕ ಹೋರಾಟ ನಡೆಸಲಾಗಿತ್ತು ಆದರೆ ಕೆಲವು ಪ್ರಬಲರು ವಿರೋಧಿಸಿಕೊಂಡು ಬಂದಿದ್ದರಿಂದ ಹಿನ್ನಡೆಯಾಗಿತ್ತು. ಈ ಸಂಬಂಧ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರಿಂದ ಸಮುದಾಯದ ಹೋರಾಟಕ್ಕೆ ಬಲ ಬಂದಿದೆ ಎಂದರು.

ಪರಿಶಿಷ್ಟ ಸಮುದಾಯದ 101 ಜಾತಿಗಳಲ್ಲಿ ಬರುವ ಕೆಲವು ಗೊಂದಲಗಳನ್ನು ಬಗೆಹರಿಸಲು ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ಏಕ ಸದಸ್ಯ ಆಯೋಗವನ್ನು ಸರ್ಕಾರ ರಚಿಸಿ ಈಗಾಗಲೇ ಸರ್ವೆ ಕಾರ್ಯ ಮುಗಿದು ಕೊನೆಯ ಹಂತದಲ್ಲಿದೆ. ಈ ಬಗ್ಗೆ ಸಮುದಾಯದವರಲ್ಲಿ ಜನ ಜಾಗೃತಿ ಮೂಡಿಸುವ ಸಲುವಾಗಿ ಜನಾಂಗದ ಮುಖಂಡರು ರಾಜ್ಯಾದ್ಯಂತ ಕ್ರಾಂತಿಕಾರಿ ರಥಯಾತ್ರೆ ಮತ್ತು ಪಾದಯಾತ್ರೆಗಳನ್ನು ಮಾಡಲಾಗುತ್ತಿದೆ ಎಂದರು.

ಒಳ ಮೀಸಲಾತಿ ಶೀಘ್ರ ಜಾರಿ ಮಾಡಬೇಕು ಹಾಗೂ ಅಲ್ಲಿವರೆಗೆ ಸರ್ಕಾರ ಯಾವುದೇ ನೇಮಕಾತಿ ಮತ್ತು ಬಡ್ತಿ ಮೀಸಲಾತಿ ನೀಡಬಾರದು ಎಂದು ಒತ್ತಾಯಿಸಿ ಜೂ.9 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಏರ್ಪಡಿಸಿರುವ ಮಾದಿಗರ ಕ್ರಾಂತಿಕಾರಿ ಸಂಘರ್ಷ ಸಮಾವೇಶಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಸಮಾಜದ ಮುಖಂಡರು ಆಗಮಿಸುತ್ತಿದ್ದಾರೆ ಎಂದರು.

ಎರಡು ತಾಲೂಕುಗಳಿಂದ ಸಮಾವೇಶಕ್ಕೆ ತೆರಳಲು ಸಾರಿಗೆ ವ್ಯವಸ್ಥೆ ಮಾಡಲಾಗಿದ್ದು, ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವ ಮೂಲಕ ಮಾದಿಗ ಸಮುದಾಯದ ಹಲವು ವರ್ಷಗಳ ಒಳ ಮೀಸಲಾತಿ ಕನಸನ್ನು ನನಸು ಮಾಡಿಕೊಳ್ಳೋಣ ಎಂದು ಮನವಿ ಮಾಡಿದರು.


ಸಭೆಯಲ್ಲಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್, ತಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ಸ್ವಾಮಿ, ದಸಂಸ ತಾಲೂಕು ಅಧ್ಯಕ್ಷ ಎಂ.ಎಸ್.ಮಲ್ಲೇಶ್, ಜಿಲ್ಲಾ ಸಂಚಾಲಕ ಬಿ.ಮಂಜುನಾಥ್ ಮಾತನಾಡಿದರು. ದಸಂಸ ತಾಲೂಕು ಅಧ್ಯಕ್ಷ ಎಂ.ಎಸ್.ರವಿಕುಮಾರ್, ಖಜಾಂಚಿ ಹೆಚ್.ಎಂ.ಮಂಜು, ಮುಖಂಡರಾದ ಕೆಂಪಯ್ಯ, ಡಾ.ದಾಸ್ ಪ್ರಕಾಶ್, ರಾಜೇಶ್, ಈರಯ್ಯ, ಪರಶುರಾಮ್, ಹೆಚ್.ಎಸ್.ಮಹದೇವ್, ಎಂ.ಚಲುವರಾಜ್, ಮುರುಗೇಶ್, ಕೃಷ್ಣಯ್ಯ, ರಮೇಶ್, ತಿರುಮಲ, ಪುಟ್ಟಸ್ವಾಮಿ, ಮಹದೇವ್, ವಜ್ರೇಶ್ ಸೇರಿದಂತೆ ಇನ್ನಿತರರಿದ್ದರು.

ಮರು ಮೌಲ್ಯಮಾಪನ: ಸಿಂಚನಾಗೆ 612 ಅಂಕ



ತಿ.ನರಸೀಪುರ, ಜೂ.6– ತಾಲೂಕಿನ ಸೋಸಲೆ ಗ್ರಾಮದ ಆದರ್ಶ ವಿದ್ಯಾಲಯದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಸಿಂಚನ ಮರು ಮೌಲ್ಯಮಾಪನದಲ್ಲಿ 612 ಅಂಕ ಗಳಿಸಿದ್ದಾರೆ. ಮೊದಲು ಬಂದಿದ್ದ ಫಲಿತಾಂಶದಲ್ಲಿ 608 ಅಂಕಗಳಿಸಿದ್ದ ಸಿಂಚನಾ ಮರು ಮೌಲ್ಯಮಾಪನದಲ್ಲಿ 4 ಅಂಕಗಳನ್ನು ಹೆಚ್ಚುವರಿಯಾಗಿ ಪಡೆದಿದ್ದಾಳೆ. ಈಕೆ ಬೆನಕನಹಳ್ಳಿ ಗ್ರಾಮದ ಬಿ.ಎನ್.ರಾಣಿ ಮತ್ತು ನಾಗಾರ್ಜುನ್ ದಂಪತಿ ಪುತ್ರಿ.

ವಿಜೃಂಭಣೆಯ ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ


ಸರಗೂರಲ್ಲಿ ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವೀರೇಶ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಉಮ, ದಿವ್ಯ, ಚೈತ್ರ, ಹೇಮಾವತಿ, ಚಂದ್ರಕಲಾ, ಸಣ್ಣತಾಯಮ್ಮ, ವಿನಾಯಕ ಪ್ರಸಾದ್, ಚಲುವಕೃಷ್ಣ, ದೇವಸ್ಥಾನದ ಪ್ರಧಾನ ಅರ್ಚಕರಾದ ಡಾ.ಎಸ್.ಎಂ.ಕಸ್ತೂರಿರಂಗನ್, ಪರಿಚಾರಕರಾದ ಶೇಷನಾರಾಯಣ್, ಕೇಶವ, ದೇವಾಲಯದ ಟ್ರಸ್ಟ್ ಅಧ್ಯಕ್ಷ ಶ್ರೀವತ್ಸನ್, ಕಾರ್ಯದರ್ಶಿ ರಾಜಣ್ಣ, ಖಜಾಂಚಿ ವೈದೇಹಿ ರಂಗನ್, ಸಮಿತಿ ಸದಸ್ಯರಾದ ಜಿ.ಕೆ.ಶ್ರೀಧರ್, ಆಗಮಿಕರಾದ ಭರತ್ ಬಟ್ಟರ್, ವಿಷ್ಣುವರ್ಧನ್ ಸೇರಿದಂತೆ ಇನ್ನಿತರರಿದ್ದರು.

ಬೆಂಗಳೂರು ಕಾಲ್ತುಳಿತ: ಸರ್ಕಾರದ ಆಡಳಿತ ವೈಫಲ್ಯವೇ ಕಾರಣ

● ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪ ● ತಪ್ಪು ಮುಚ್ಚಿಕೊಳ್ಳಲು ಪ್ರಾಮಾಣಿಕ ಅಧಿಕಾರಿಗಳ ಅಮಾನತು



ಮೈಸೂರಿನ ತಮ್ಮ ಕಚೇರಿಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

> ಐಪಿಎಲ್‌ನಿಂದಾಗಿ ಮನೆ-ಮಠ ಹಾಳಾಗುತ್ತಿವೆ. ಜೂಜು ಕಟ್ಟಿ ಸಾಲ ಮಾಡಿಕೊಳ್ಳುತ್ತಿದ್ದಾರೆ. ಬೆಟ್ಟಿಂಗ್‌ಗಾಗಿ ಆಸ್ತಿ ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ಯುವಕರು ಊರು ಬಿಡುತ್ತಿದ್ದಾರೆ. ಅದರ ಬಗ್ಗೆ ಗಮನ ಹರಿಸಬೇಕು. ಕಾಲ್ತುಳಿತದಿಂದ ಮೃತಪಟ್ಟಿರುವ ಎಲ್ಲಾ 11 ಜನರು ಯುವ ಜನರೇ ಆಗಿದ್ದಾರೆ. ಸರ್ಕಾರ 10 ಲಕ್ಷ ರೂ. ಪರಿಹಾರ ನೀಡಿರಬಹುದು. ಕೋಟಿ ಕೊಟ್ಟರೂ ಆ ಕುಟುಂಬಗಳಿಗೆ ತಮ್ಮ ಮಕ್ಕಳನ್ನು ಹಿಂದಿರುಗಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಮೃತರ ಮನೆಗಳಿಗೆ ಸರ್ಕಾರದ ವತಿಯಿಂದ ಯಾರಾದರೂ ಭೇಟಿ ನೀಡಿ, ಅವರ ಕುಟುಂಬದ ಸ್ಥಿತಿಗತಿ ಪರಿಶೀಲಿಸಬೇಕು. ಮೃತಪಟ್ಟವರು ಆ ಕುಟುಂಬಕ್ಕೆ ಆಧಾರ ಸ್ತಂಭವಾಗಿದ್ದರೆ, ಪರಿಹಾರದ ಮೊತ್ತ ಹೆಚ್ಚಿಸುವ ಅಥವಾ ಆ ಕುಟುಂಬದ ಯಾರಾದರೂ ಸದಸ್ಯರಿಗೆ ಸರ್ಕಾರಿ ಉದ್ಯೋಗ ಕೊಡಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು.
> - ಸಾ.ರಾ.ಮಹೇಶ್, ಮಾಜಿ ಸಚಿವ

ಮೈಸೂರು, ಜೂ.6(ಎಂಟಿವೈ)- ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತದಿಂದ 11 ಮಂದಿ ಬಲಿಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವ ಆದೇಶವನ್ನು ಹಿಂಪಡೆಯಬೇಕು ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಆಗ್ರಹಿಸಿದ್ದಾರೆ.

ಮೈಸೂರಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಪಿಎಲ್‌ನಲ್ಲಿ ಆರ್‌ಸಿಬಿ ತಂಡ ಗೆದ್ದ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ಆಯೋಜಿಸಿದ್ದ ಸಂಭ್ರಮಾಚರಣೆಯಲ್ಲಿ ಅಪಾರ ಸಂಖ್ಯೆಯ ಅಭಿಮಾನಿಗಳು ಸೇರಿದ್ದರಿಂದ ನೂಕು-ನುಗ್ಗಲು ಉಂಟಾಗಿ, ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಸಾವಿಗೀಡಾಗಿದ್ದಾರೆ. ಈ ಘಟನೆಯಲ್ಲಿ ರಾಜ್ಯ ಸರ್ಕಾರದ ಬೇಜವಾಬ್ದಾರಿತನ ಎದ್ದು ಕಾಣುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜಕೀಯ ಕೆಸರೆರಚಾಟ ಸರಿಯಲ್ಲ. ಆದರೆ, ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವುದು ಸರಿಯಲ್ಲ ಎಂದರು.

ಆರ್‌ಸಿಬಿ ತಂಡ ಐಪಿಎಲ್ ಕಪ್ ಗೆದ್ದ ಹಿನ್ನೆಲೆಯಲ್ಲಿ ರಾತ್ರಿಯಿಡೀ ಅಭಿಮಾನಿಗಳು ಬೆಂಗಳೂರು ಸೇರಿದಂತೆ ವಿವಿಧೆಡೆ ಮುಂಜಾನೆಯವರೆಗೆ ವಿಜಯೋತ್ಸವ ಆಚರಿಸಿದ್ದಾರೆ. ಈ ಭದ್ರತಾ ಕಾರ್ಯದಲ್ಲಿ ತೊಡಗಿದ್ದ ಪೊಲೀಸರಿಗೆ ಸ್ವಲ್ಪವೂ ವಿಶ್ರಾಂತಿ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಮರು ದಿನವೇ ವಿಧಾನಸೌಧ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ತಂಡದೊಂದಿಗೆ ಆಯೋಜಿಸಿದ್ದ ಸಂಭ್ರಮಾಚರಣೆ ಭದ್ರತೆಯಲ್ಲಿ ಪೊಲೀಸರು ಶ್ರಮಿಸಿದ್ದಾರೆ. ಆದರೆ, ಅಪಾರ ಸಂಖ್ಯೆಯ ಅಭಿಮಾನಿಗಳು ಸೇರಿದ್ದರಿಂದ ಆಕಸ್ಮಿಕವಾಗಿ ಕಾಲ್ತುಳಿತ ಸಂಭವಿಸಿದೆ.

ಕಾಲ್ತುಳಿತ ಪ್ರಕರಣಕ್ಕೆ ಕೇವಲ ಪೊಲೀಸ್ ಇಲಾಖೆಯನ್ನು ಹೊಣೆಯಾಗಿಸುವುದು ಸರಿಯಲ್ಲ. ವಿಧಾನಸೌಧದ ಮುಂದೆ ನಡೆದ ಕಾರ್ಯಕ್ರಮದ ವೇದಿಕೆಯಲ್ಲಿದ್ದ ರಾಜ್ಯಪಾಲರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರಾದಿಯಾಗಿ ಎಲ್ಲರೂ ಜವಾಬ್ದಾರರೇ ಆಗಿದ್ದಾರೆ. ಆದರೆ, ಕೇವಲ ಪೊಲೀಸ್ ಇಲಾಖೆ ಮೇಲೆ ಅಪವಾದ ಹೊರಿಸಿ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿರುವುದು ಎಷ್ಟು ಸರಿ. ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ದಯಾನಂದ್, ಡಿಸಿಪಿ ಹೆಚ್.ಟಿ.ಶೇಖರ್ ಮೈಸೂರಲ್ಲೂ ಉತ್ತಮವಾಗಿ ಕಾರ್ಯ ನಿರ್ವಹಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇವರನ್ನು ಅಮಾನತು ಮಾಡಿರುವುದು ನಿಮ್ಮ ಮನಃಸಾಕ್ಷಿ ಒಪ್ಪುತ್ತದೆಯೆ? ಎಂದು ಮುಖ್ಯಮಂತ್ರಿಗಳು ಪ್ರಶ್ನೆ ಮಾಡಿಕೊಳ್ಳಬೇಕು. ಅಮಾನತು ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಒಂದು ವೇಳೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವುದೇ ಆದರೆ, ಐಜಿಪಿ ಏನು ಮಾಡುತ್ತಿದ್ದರು. ಗೃಹ ಕಾರ್ಯದರ್ಶಿ ಏನು ಮಾಡುತ್ತಿದ್ದರು. ಇಂಟೆಲಿಜೆನ್ಸ್ ರಿಪೋರ್ಟ್ ಬಂದ ಮೇಲೂ ಎರಡೂ ಕಡೆ ಕಾರ್ಯಕ್ರಮ ನಡೆಸಲು ಅವಕಾಶ ಯಾಕೆ ಮಾಡಿಕೊಟ್ಟರು. ಸರ್ಕಾರದ ಚೀಫ್ ಸೆಕ್ರೆಟರಿ(ಮುಖ್ಯ ಕಾರ್ಯದರ್ಶಿ) ಏನು ಮಾಡುತ್ತಿದ್ದರು. ಕಪ್ ಗೆದ್ದ ಕೆಲವೇ ಗಂಟೆಗಳಲ್ಲಿ ವಿಜಯೋತ್ಸವ ಆಯೋಜಿಸುವ ಅನಿವಾರ್ಯತೆ ಏನಿತ್ತು. ಇಲ್ಲ ಈ ಬಗ್ಗೆ ಪೂರ್ವಭಾವಿ ಸಭೆ ನಡೆಸಿದ್ದರಾ. ಈ ಪ್ರಕರಣದಲ್ಲಿ ಆಡಳಿತ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿಮ್ಮ ಕುಟುಂಬಸ್ಥರಿಗೆ ಏನ್ ಕೆಲಸ. ಈ ಪ್ರಕರಣದ ಪಾರದರ್ಶಕ ತನಿಖೆ ಮಾಡುವುದಾದರೆ ಉತ್ತಮ ಸಂಸ್ಥೆಯಿಂದ ತನಿಖೆ ಮಾಡಿಸಬೇಕು. ರಾಜ್ಯ ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಪಾರದರ್ಶಕ ತನಿಖೆ ನಡೆಯಬೇಕಾದರೆ ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆಯಿಂದಲೇ ತನಿಖೆ ನಡೆಸಬೇಕು. ಈ ಪ್ರಕರಣದ ಸಂಬಂಧ ನಾವು ನ್ಯಾಯಾಲಯಕ್ಕೆ ಹೋಗಲು ನಿರ್ಧರಿಸಿದ್ದು, ಈ ಸಂಬಂಧ ವಕೀಲರೊಂದಿಗೆ ಚರ್ಚೆ ಮಾಡಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್, ಮುಖಂಡರಾದ ಪಡುವಾರಹಳ್ಳಿ ಸೋಮು, ಕೆ.ಟಿ.ಚೆಲುವೇಗೌಡ, ದ್ವಾರಕೀಶ್, ಸೋಮಶೇಖರ್, ಎಂ.ಎನ್.ರಾಮು, ಫಾಲ್ಕನ್ ಬೋರೇಗೌಡ, ರಾಮು ಪ್ರಶಾಂತ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್-5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಲೇಜ್ ಕಲಾವಿದ (ಕ) + ನೀತಿ (ಕ)	2+2 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಮದ್ರಾಸ್ ಮ್ಯಾಟಿನಿ (ತ)	4 ಪ್ರದರ್ಶನಗಳು
ಸಂಗಂ	
ಹೌಸ್‌ಫುಲ್-5 (ಹಿಂ)	4 ಪ್ರದರ್ಶನಗಳು
ಲಿಡೋ	
ಕಾಲೇಜ್ ಕಲಾವಿದ (ಕ) + ನೀತಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನೈಪುಣ್ಯ ಶಾಲೆಯಲ್ಲಿ ಪರಿಸರ ದಿನ ಆಚರಣೆ

ಭವಿಷ್ಯದ ಉಸಿರು ಪರಿಸರದಲ್ಲಿ ಇದೆ; ಮಕ್ಕಳಿಗೆ ಮನವರಿಕೆ ಮಾಡಿಕೊಡಿ



ಮೈಸೂರಿನ ಆರ್.ಟಿ.ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ತಜ್ಞೆ ರೇಖಾ ರೋಹಿತ್ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು.

ಮೈಸೂರು, ಜೂ.6(ಜಿಎ)-ಇಂದಿನ ಮಕ್ಕಳು ತಮ್ಮ ಭವಿಷ್ಯವನ್ನು ಉಳಿಸಿಕೊಳ್ಳಲು ಪರಿಸರವನ್ನು ಕಾಪಾಡಿಕೊಳ್ಳಬೇಕಿದೆ. ಭವಿಷ್ಯದ ಉಸಿರು ಪರಿಸರದ ಅಸ್ತಿತ್ವದಲ್ಲಿದೆ ಎಂಬ ವಾಸ್ತವ ಪರಿಸ್ಥಿತಿಯನ್ನು ಮಕ್ಕಳಿಗೆ ಮನನ ಮಾಡಿಕೊಡಬೇಕಾಗಿರುವುದು ಶಿಕ್ಷಣ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ ಎಂದು ಪರಿಸರ ತಜ್ಞೆ ರೇಖಾ ರೋಹಿತ್ ತಿಳಿಸಿದರು.

ಮೈಸೂರಿನ ಆರ್.ಟಿ.ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ಆವರಣದಲ್ಲಿ ನಡೆದ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಇಂದು ಪರಿಸರಕ್ಕೆ ಮನುಷ್ಯರೇ ಕಂಟಕಪ್ರಾಯರಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ. ನಾವು ಬಳಸುವ ಪರಿಸರ ಕೆಡಿಸುವ ವಸ್ತುಗಳು ಹಾಗೂ ತ್ಯಾಜ್ಯ ನಿರ್ವಹಣೆಯಲ್ಲಿ ಬೇಜವಾಬ್ದಾರಿತನ ತೋರುತ್ತಿದ್ದು, ಇದು ಪರಿಸರಕ್ಕೆ ಮಾರಕವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನೀರಿನ ಮೂಲವನ್ನು ಉಳಿಸುವುದು, ಕೆರೆ-ಕಟ್ಟೆ ಹಾಗೂ ನದಿಗಳ ಸ್ವಚ್ಛತೆಯನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದ್ದು ನಗರೀಕರಣದ ವಿಸ್ತಾರದಲ್ಲಿ ಹಸಿರೀಕರಣವನ್ನು ನಾಶ ಮಾಡುತ್ತಿರುವ ಪರಿ ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ. ಇಂದು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಪರಿಸರವನ್ನು ಉಳಿಸಿ ಬೆಳೆಸುವ ಜಾಗೃತಿ ಮೂಡಿಸುವುದು ಪಠ್ಯಕ್ರಮದ ಒಂದು ಭಾಗವಾಗಬೇಕು ಎಂದರು.

ಪ್ರತಿ ಮಗುವೂ ಗಿಡಮರಗಳನ್ನು ಬೆಳೆಸುವ ಪ್ರವೃತ್ತಿ ಬೆಳೆಸಿಕೊಳ್ಳುವಂತೆ ಪ್ರೇರೇಪಿಸಬೇಕು. ಈ ನಿಟ್ಟಿನಲ್ಲಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವಿದ್ಯಾ ಸಂಸ್ಥೆಯು ಪ್ರತಿ ಮಗುವಿನ ಬೆಳವಣಿಗೆಯೊಂದಿಗೆ ಸಸಿಯೊಂದನ್ನು ಆ ಮಗುವೇ ಕಾಳಜಿವಹಿಸಿ ಬೆಳೆಸುವಂತೆ ಪ್ರೇರೇಪಿಸುತ್ತಿರುವ ಪರಿ ಸಂಸ್ಥೆಯ ಪರಿಸರ ಕಾಳಜಿಯ ದ್ಯೋತಕವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ನಂತರ ಶಾಲೆಯ ಮಕ್ಕಳು ಆರ್.ಟಿ.ನಗರ ಬಡಾವಣೆಯಲ್ಲಿ ಪರಿಸರ ಜಾಗೃತಿ ಜಾಥಾ ಕಾರ್ಯಕ್ರಮ ನಡೆಸಿ, ಪರಿಸರ ಪರ ಘೋಷಣೆಯ ಭಿತ್ತಿ ಪತ್ರಗಳನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲ ಎಂ.ಎನ್.ಮಹೇಂದ್ರ, ಉಪಪ್ರಾಂಶುಪಾಲ ಶಾಲಿನಿ ಮಾಜೋ, ಶೀನಾ ಗುರ್ನಾನಿ, ಪ್ರೀತಿ ಕಮಲ್, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜನಚೈತನ್ಯ ಫೌಂಡೇಷನ್‌ನಿಂದ 'ಚೈತನ್ಯ' ಪ್ರತಿಭಾ ಪುರಸ್ಕಾರ



ಜನಚೈತನ್ಯ ಫೌಂಡೇಷನ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ಚೈತನ್ಯ' ಪ್ರತಿಭಾ ಪುರಸ್ಕಾರ ನೀಡಲಾಯಿತು.

> ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣ ನೋಡಿದಾಗ ನಾವು ಎಲ್ಲಿದ್ದೇವೆ. ಮನುಷ್ಯ ಮನುಷ್ಯನನ್ನೇ ತುಳಿದು ಸಾಯಿಸುವ ಪರಿಸ್ಥಿತಿ ಮುಂದೆಂದೂ ಬರಬಾರದು.
> - ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಜಂಟಿ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

ಮೈಸೂರು, ಜೂ.6(ಎಂಕೆ)- ಜನಚೈತನ್ಯ ಫೌಂಡೇಷನ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 110 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ಚೈತನ್ಯ' ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗುರುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ವಿದ್ಯಾರ್ಥಿಗಳಿಗೆ ಬ್ಯಾಗ್, ಪಠ್ಯಪುಸ್ತಕ ಹಾಗೂ ಅಭಿನಂದನಾ ಪತ್ರ ನೀಡಿ ಸನ್ಮಾನಿಸಿದರು.


ಬಳಿಕ ಮಾತನಾಡಿದ ಅವರು, ವಿಶ್ವ ಪರಿಸರ ದಿನದಂದು ಪ್ರಕೃತಿಯನ್ನು ಉಳಿಸುವ ಸಂಕಲ್ಪವನ್ನು ನಾವೆಲ್ಲರೂ ಮಾಡಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಪ್ರಕೃತಿಯ ಮಹತ್ವದ ಅರಿವಾಗಬೇಕು. ಪ್ರಕೃತಿಯ ಮೇಲಿನ ದೌರ್ಜನ್ಯವನ್ನು ಕಡಿಮೆ ಮಾಡಬೇಕು. ಭೂಮಿ ತಾಯಿ ನಮಗಾಗಿ ಎಲ್ಲವನ್ನು ಕೊಟ್ಟಿದ್ದಾಳೆ. ಅದನ್ನು ಉಳಿಸುವ ಬದಲು ಹಾಳು ಮಾಡಬಾರದು. ಪರಿಸರ ಕಾಳಜಿಯನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ. ಇಂದಿನ ವಿದ್ಯಾರ್ಥಿಗಳ ಬುದ್ಧಿಮತ್ತೆ ಅತ್ಯುತ್ತಮವಾಗಿದೆ. ಎಲ್ಲರೂ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯುತ್ತಿದ್ದಾರೆ. ಚೆನ್ನಾಗಿ ಓದಿದರೆ, ದೇಶ-ವಿದೇಶಗಳಲ್ಲಿ ತಮಗೆ ಬೇಕಾದ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶಗಳಿವೆ. ಇದನ್ನು ಸದುಪಯೋಗ ಮಾಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಮೊಬೈಲ್, ಟಿವಿಯನ್ನು ಎಷ್ಟು ಬೇಕೋ ಅಷ್ಟು ಬಳಸಬೇಕು. ಸಾಮಾಜಿಕ ಜಾಲತಾಣಗಳಿಂದಾಗಿ ಯುವಕ-ಯುವತಿಯರು ದಾರಿ ತಪ್ಪುತ್ತಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಸಾವಿಗೀಡಾಗಿರುವುದಕ್ಕೆ ಕ್ರಿಕೆಟಿಗರ ಮೇಲಿನ ಅಂಧಾಭಿಮಾನವೇ ಕಾರಣ. ಅಭಿಮಾನ ಇರಲಿ. ಆದರೆ ಈ ರೀತಿಯ ಅಂಧಾಭಿಮಾನ ಬೇಡ ಎಂದರಲ್ಲದೆ ಇಂದು ವಿಶ್ವ ಪರಿಸರ ದಿನವಾಗಿದ್ದು, ಪ್ರತಿಯೊಬ್ಬರೂ ನಮ್ಮ ಪರಿಸವನ್ನು ಕಾಪಾಡುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗಾಯಕರಾದ ಆರ್.ಲಕ್ಷ್ಮಣ್, ಎಸ್.ಅಮರ್, ಜಾಯ್ಸ್ ವೈಶಾಖ್, ನಾಗೇಂದ್ರ, ಅಶ್ವಿತ್ ಅತ್ರಿ, ಡಾ.ಪ್ರಕಾಶ್, ಡಾ.ಎ.ಎನ್.ಪದ್ಮಾ, ಬಿ.ಎಸ್.ವಿಜಯ ಆನಂದ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ವಾಯುಪುತ್ರ ಡೆವಲಪರ್ಸ್‌ನ ಚೆಲುವರಾಜು, ಕೆಐಡಿಬಿ ವಿಶೇಷ ಭೂಸ್ವಾಧೀನ ಅಧಿಕಾರಿ ಡಾ.ಎನ್.ಸಿ.ವೆಂಕಟರಾಜು, ಶಿಕ್ಷಣ ತಜ್ಞೆ ಡಾ.ಎಲ್.ಸವಿತಾ, ವೈದ್ಯರಾದ ಡಾ.ಎ.ಎನ್.ಪದ್ಮಾ, ಡಾ. ರೇಖಾ ಅರುಣ್, ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾಶಂಕರಗೆ ಪಿಎಚ್.ಡಿ ಪದವಿ



ಮೈಸೂರು, ಜೂ.6- ಡಾ. ಜಿ. ಹೇಮಂತ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ವಿದ್ಯಾಶಂಕರ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿಶೇಷ ರೀತಿ ಪರಿಸರ ದಿನ ಆಚರಿಸಿದ ಕೆಪಿಎ



ಮೈಸೂರಿನ ಕೆಪಿಎ ಆವರಣದಲ್ಲಿ ಗಿಡ ನೆಟ್ಟು ವಿಶ್ವ ಪರಿಸರ ದಿನ ಆಚರಿಸಲಾಯಿತು.

ಮೈಸೂರು, ಜೂ.6- ಮೈಸೂರಿನಲ್ಲಿರುವ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ವತಿಯಿಂದ ವಿಶೇಷ ರೀತಿಯಲ್ಲಿ 'ವಿಶ್ವ ಪರಿಸರ ದಿನ'ವನ್ನು ಆಚರಿಸಲಾಯಿತು.

ಅಕಾಡೆಮಿಯಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ 46ನೇ ತಂಡದ ಪಿಎಸ್‌ಐ ಪ್ರಶಿಕ್ಷಣಾರ್ಥಿಗಳ ಜೊತೆಗೆ ಇಲ್ಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿ, ಅವರವರ ಹೆಸರಿನಲ್ಲಿ ಒಂದೊಂದು ಗಿಡವನ್ನು ನೆಟ್ಟು, ನೀರೆರೆಯುವ ಮೂಲಕ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು. ವಿವಿಧ ಹಣ್ಣಿನ ಗಿಡಗಳು, ಆಯುರ್ವೇದ ಔಷಧೀಯ ಗುಣವುಳ್ಳ ಗಿಡಗಳು ಸೇರಿದಂತೆ 400ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಯಿತು. ಈ ವೇಳೆ ಅಕಾಡೆಮಿ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಸೇರಿದಂತೆ ಸಹಾಯಕ ನಿರ್ದೇಶಕರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಇದ್ದರು.

ವಿಶ್ವ ಪರಿಸರ ದಿನಾಚರಣೆ



ವಿಜಯನಗರ ಸೇವಾ ಟ್ರಸ್ಟ್ ವತಿಯಿಂದ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಎಸ್.ಶಂಕರ್, ಉಪಾಧ್ಯಕ್ಷರಾದ ಶಿವಪ್ರಕಾಶ್, ಗುರುರಾಜ್, ಕಾರ್ಯದರ್ಶಿ ನವೀನ್, ಖಜಾಂಚಿ ವಸಂತ್ ಕುಮಾರ್, ಮುಖಂಡರಾದ ಪುಟ್ಟಸ್ವಾಮಿ, ರಾಜಣ್ಣ, ಗೋವಿಂದೇಗೌಡ, ಲೋಕೇಶ್ ಉಪಸ್ಥಿತರಿದ್ದರು.

ನವೋದಯದ ಭಾವಪರವಶತೆ, ನವ್ಯದ ಚಿಂತನಾಶೀಲತೆ ಸಮ್ಮಿಲನದಲ್ಲಿ

ಹೊಸ ಕಾವ್ಯ ಸೃಷ್ಟಿಸಿದ ಕೀರ್ತಿ ಹೆಚ್‌ಎಸ್‌ವಿ ಅವರಿಗೆ ಸಲ್ಲುತ್ತದೆ

ನುಡಿ ನಮನ ಕಾರ್ಯಕ್ರಮದಲ್ಲಿ ಡಾ.ಸಂತೋಷ ಚೊಕ್ಕಾಡಿ ಬಣ್ಣನೆ



ಮೈಸೂರಿನ ಮಹಾರಾಜ ಪಿಯು ಕಾಲೇಜಿನಲ್ಲಿ ಗುರುವಾರ ನಾಡಿನ ಪ್ರಖ್ಯಾತ ಕವಿ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ಅವರ ನುಡಿ ನಮನ ಕಾರ್ಯಕ್ರಮ ನಡೆಯಿತು.

ಮೈಸೂರು,ಜೂ.6(ಪಿಎಂ)- ಕನ್ನಡ ಸಾಹಿತ್ಯದಲ್ಲಿ ನವೋದಯದ ಭಾವಪರವಶತೆ ಮತ್ತು ನವ್ಯದ ಚಿಂತನಾಶೀಲತೆ ಎರಡನ್ನೂ ಸಮ್ಮಿಲನಗೊಳಿಸಿ ಹೊಸ ಕಾವ್ಯ ಸೃಷ್ಟಿಸಿದವರು ಹೆಚ್‌ಎಸ್‌ವಿ (ಡಾ.ಹೆಚ್.ಎಸ್.ವೆಂಕಟೇಶಮೂರ್ತಿ) ಎಂದು ಪದವಿಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ಗೌರವಾಧ್ಯಕ್ಷ ಡಾ.ಸಂತೋಷ ಚೊಕ್ಕಾಡಿ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪದವಿಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ವತಿಯಿಂದ ನಾಡಿನ ಪ್ರಖ್ಯಾತ ಕವಿ ಡಾ.ಹೆಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಹಮ್ಮಿಕೊಂಡಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಿದರು.

ಹೆಚ್‌ಎಸ್‌ವಿ ಎಂದರೆ ಆಪ್ತಭಾವ ಮೂಡುತ್ತದೆ. ಅವರ ಅಗಲಿಕೆಯು ಆಪ್ತರೊಬ್ಬರನ್ನು ಕಳೆದುಕೊಂಡ ನೋವು ತಂದಿದೆ. ಕಳೆದ 40 ವರ್ಷಗಳಲ್ಲಿ ಹೆಚ್‌ಎಸ್‌ವಿ ಅವರು ಕನ್ನಡ ಸಾಹಿತ್ಯವನ್ನು ಆವರಿಸಿಕೊಂಡ ರೀತಿ ಬಹಳ ವಿಶೇಷವಾದುದು. ನವೋದಯದ ನಂತರದಲ್ಲಿ ನವ್ಯ ಬಂದಾಗ, ಲಂಕೇಶ್, ಅನಂತ ಮೂರ್ತಿ ಮೊದಲಾದ ಕವಿಗಳೆಲ್ಲಾ ಒಂದು ದಾರಿಯಲ್ಲಿ ಚಲಿಸುತ್ತಿದ್ದರೆ, ಹೆಚ್‌ಎಸ್‌ವಿ ನವೋದಯದ ಭಾವಪರವಶತೆ ಉಳಿಸಿಕೊಂಡು ಹೊಸ ರೀತಿಯಲ್ಲಿ ಬರೆಯಲು ಶುರು ಮಾಡಿದರು ಎಂದರು.

ಒಂದು ರೀತಿಯಲ್ಲಿ ಜಿಎಸ್‌ಎಸ್, ಕಣವಿಯವರ ನಂತರದಲ್ಲಿ ಆ ಸ್ವರೂಪದ ಕವಿಯೆಂದು ಹೆಚ್‌ಎಸ್‌ವಿಯವರನ್ನು ನಾವು ಭಾವಿಸಬಹುದು. ಹಾಗೆಯೇ ಇನ್ನೊಂದು ರೀತಿಯಲ್ಲಿ ನೋಡಿದರೆ ಜಿ.ಪಿ.ರಾಜರತ್ನಂ ಮಾಡಿರುವ ಸಾಹಿತ್ಯದ ಪರಿಚಾರಿಕೆಯ ಕೆಲಸವನ್ನೂ, ಮೇಸ್ಟ್ರು ಆಗಿ ಹೆಚ್‌ಎಸ್‌ವಿ ಮಾಡುತ್ತಾ ಬಂದಿದ್ದರು. ಉಪನ್ಯಾಸಕರಾಗಿದ್ದಾಗ ಕಿರಿಯರ ಸಂಕಲನ ಪ್ರಕಟಿಸುವ ಕೆಲಸವನ್ನು ಮಾಡಿದ್ದಾರೆ. ಭಿನ್ನ ಮಾರ್ಗವನ್ನು ಕಂಡುಕೊಂಡಿದ್ದವರು ಹೆಚ್‌ಎಸ್‌ವಿ ಎಂದು ಸ್ಮರಿಸಿದರು.

ಹೊಸದಾಗಿ ಸಾಹಿತ್ಯ ಕೃಷಿಯತ್ತ ಸಾಗುವ ಯುವಜನರು ಹೆಚ್‌ಎಸ್‌ವಿ ಅವರ ಸಾಹಿತ್ಯ ಓದಬೇಕು. ಏಕೆಂದರೆ ಕಾವ್ಯ ಕಟ್ಟುವುದಕ್ಕೆ ಅಗತ್ಯವಾದ ಧ್ಯಾನ ಸ್ಥಿತಿ ಮತ್ತು ಕೌಶಲಗಳನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗಲಿದೆ. ನಾವು ಬಳಸುವಂತಹ ಸರಳ ಪದಗಳನ್ನೇ ಹೇಗೆ ಹೊಸ ರೀತಿ ಸಾಹಿತ್ಯದಲ್ಲಿ ಕಟ್ಟಿಕೊಡಬಹುದು ಎಂಬುದಕ್ಕೆ ಹೆಚ್‌ಎಸ್‌ವಿ ಕಾವ್ಯ ದೊಡ್ಡ ಉದಾಹರಣೆ. ನಾವು ಸಾಹಿತ್ಯ ಓದಲು ಶುರು ಮಾಡಿದ ಸಂದರ್ಭದಲ್ಲಿ ಬಹುಬೇಗ ಆಕರ್ಷಿಸಿದವರಲ್ಲಿ ಹೆಚ್‌ಎಸ್‌ವಿ ಪ್ರಮುಖರು. ಇವರು ಒಂದು ರೀತಿಯಲ್ಲಿ ಸಾಹಿತ್ಯದಲ್ಲಿ ಮೋಹಕ ಜಗತ್ತು ಸೃಷ್ಟಿ ಮಾಡಿದವರು ಎಂದರು.

ಹೆಚ್‌ಎಸ್‌ವಿ ಸಾಹಿತ್ಯದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದ್ದು, ಕಥೆ, ಮಕ್ಕಳ ಕವಿತೆ, ಭಾವಗೀತೆ ಸೇರಿದಂತೆ ಅಪಾರ ಸಾಹಿತ್ಯ ಕೃಷಿ ಮಾಡಿದ್ದಾರೆ. ವಿಶೇಷವಾಗಿ ಸಾನೆಟ್‌ಗಳನ್ನು ವಿಪುಲವಾಗಿ ಬರೆದಿದ್ದು, ತಮ್ಮ ಬದುಕಿನ ಕೊನೆ ಭಾಗದಲ್ಲಿ 'ಬುದ್ಧ ಚರಣ' ಎಂಬ ಮಹಾಕಾವ್ಯ ರಚಿಸಿದ್ದಾರೆ. ಅಂತಃಕರಣ, ತುಂಬಿದ ಪ್ರೀತಿಯು ಹೆಚ್‌ಎಸ್‌ವಿ ಅವರಲ್ಲಿ ಬಹಳ ಮುಖ್ಯವಾಗಿ ಕಂಡು ಬರುತ್ತದೆ ಎಂದು ಹೇಳಿದರು.

ಮಹಾರಾಜ ಪಪೂ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಎ.ಎಲ್.ಉಮೇಶ್, ವೇದಿಕೆಯ ಅಧ್ಯಕ್ಷ ಎಂ.ಮಹೇಶ್, ಗೌರವಾಧ್ಯಕ್ಷರಾದ ಬಾಲಸುಬ್ರಹ್ಮಣ್ಯಂ, ವಿಷಕಂಠಮೂರ್ತಿ, ಉಪನ್ಯಾಸಕರಾದ ಷಣ್ಮುಖ, ಪರಮೇಶ್ ಉತ್ತನಹಳ್ಳಿ, ಸಿ.ಎಸ್.ರಾಘವೇಂದ್ರ ಎಸ್.ಇಂದ್ರ ಡಾ. ಸುಧಾಕರ್, ಹೇಮಾವತಿ ಮತ್ತಿತರರು ಹಾಜರಿದ್ದರು.


ಜೆಡಿಎಸ್ ಮುಖಂಡರಾದ
ಸುರೇಶ್
ರವರಿಗೆ
ಹುಟ್ಟುಹಬ್ಬದ
ಶುಭಾಶಯಗಳು
ಶುಭಕೋರುವವರು
ದುರ್ಗಾ ಗ್ರೂಪ್ಸ್
VISMAYA ADVERTISERS
8050302424